# ಕನ್ನಡ ನುಡಿ

## ಕನ್ನಡ ಸಾಹಿತ್ಯ ಪರಿಷತ್ತಿನ ಮಾಸಪತ್ರಿಕೆ

ಸಂಪುಟ ೨೫] [ಸಂಚಿಕೆ ೩

ಸಂಪಾದಕರು : ಅನ್ನದಾನಯ್ಯ ಪುರಾಣಿಕ, ಬಿ.ಕಾಮ್., ಎಲ್‌ಎಲ್.ಬಿ.

### ಮಹಾಕವಿ ಕಾಳಿದಾಸ ಜಯಂತಿ



ಕನ್ನಡ ಸಾಹಿತ್ಯ ಪರಿಷತ್ತು ಮಾ. ದಿನಾಂಕ ೨ರಂದು ಮಹಾಕವಿ ಕಾಳಿದಾಸ ಜಯಂತಿ ಉತ್ಸವವನ್ನು ಆಚರಿಸಿದಾಗ ತೆಗೆದ ಚಿತ್ರ. ಉತ್ಸವವನ್ನು ಉದ್ಘಾಟಿಸಿದ ಪ್ರೊ॥ ಎಸ್. ಕೆ. ರಾಮಚಂದ್ರರಾಯರು ಮಾತನಾಡುತ್ತಿದ್ದಾರೆ. ಚಿತ್ರದಲ್ಲಿ ಎಡದಿಂದ ಬಲಕ್ಕೆ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ॥ ಕೆ. ಎಂ. ಕೃಷ್ಣರಾವ್, ಶ್ರೀ ಅನ್ನದಾನಯ್ಯ ಪುರಾಣಿಕ, ಉಪನ್ಯಾಸಕರಾದ ವಿದ್ವಾನ್ ಎನ್. ಟಿ. ಶ್ರೀನಿವಾಸಯ್ಯಂಗಾರ್, ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಡಾ॥ ಕೆ. ಎಸ್. ನಾಗರಾಜನ್ ಇವರನ್ನು ಕಾಣಬಹುದು.

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮

## ವಿಷಯ ಸೂಚಿಕೆ

# ಕನ್ನಡನುಡಿ

ಸಂಪುಟ ೨೫ ] ಮಾರ್ಚ್ ೧೯೬೨ [ ಸಂಚಿಕೆ ೩




## ನವಚೇತನ*

ಶ್ರೀ ಎಲ್. ಗುಂಡಪ್ಪ

ಶುಭಕೃತುವಿನಲಿ ಬಾಳ ದೋಣಿಯಲಿ ಕಾಲಿಟ್ಟು
ಪ್ಲವದಲ್ಲಿ ತೇಲುತ್ತ, ಕಾಲಚಕ್ರದಲೊಂದು
ಸುತ್ತು ಮುಗಿಯುತ ಬಂದ ನೆಲೆಯಲ್ಲಿ ನಿಂದವನು,
ಹಿನ್ನೋಟವನು ಬೀರಿ, ಈವರೆಗೆ ದಾಟಿದೀ
ಜೀವನ ಪ್ರವಾಹವನು ಪರಿಕಿಸಲು ಕಾಣಿಸುವುದೇನು?

ಮೊದಮೊದಲು ಬರಿ ಮಬ್ಬು : ದಿಕ್ಕು ದಡ ನೀರು ನೆಲ
ಹರಿವ ಪರಿ ಇರುವ ನೆಲೆ ಯಾವುದೂ ತೋರದಿದೆ;
ಎಂದೊ ಎಲ್ಲೋ ಬಿಟ್ಟು ಬಂದ ಹಳೆ ಮಜಲುಗಳ
ಮುಸುಕು ನೆನವಾವರಿಸಿ, ಈಗಿನೀ ಜೀವನವ
ಕನಸಿನೊಲು ಕಾಣುತ್ತ ಕಳೆದ ಕರ್ದಿನಗಳವು.
ಕನಸೊಡೆದು ಕಣ್‌ತೆರೆದು ಹೊಸನೆಲೆಯನರಿವಂದು
ಆನಂದ ಬಂದಿತ್ತು; ತಂದೆ ತಾಯ್ಗಳ ಪ್ರೀತಿ
ತೃಪ್ತಿ ಅಭಿಮಾನಗಳ ತೆಕ್ಕೆ ಬಿಗಿದಪ್ಪಿತ್ತು;
ಸುತ್ತಮುತ್ತಣ ಜನತೆ ಮೆಚ್ಚಿ ನಲಿದಿತ್ತು.
ಶುಭಕೃತುವೆ ತಾನಾದ ತಂದೆ ಬೆಳಗಿದ ಬಾಳ
ದೀಪದಾ ಬೆಳಗಿನಲಿ ದಾರಿಯನು ಗುರುತಿಸುತ
ಮುನ್ನಡೆದೆನಂದು. "ಶುಭವನೇ ಮಾಡುವುದು.
ಅಶುಭವನು ತೊರೆಯುವುದು. ಅಶುಭವಡ್ಡಯಿಸಿದರೆ,
ಶುಭದಿಂದಲೇ ಅದನು ಗೆದ್ದು ಶುಭವಾಗಿಪುದು."
—ಇಂತೆಂಬ ಹಿರಿಯರುಪದೇಶಕ್ಕೆ ಜೀವಂತ
ವ್ಯಾಖ್ಯಾನವೆನಿಸಿದ್ದ ತಂದೆಯಾಚರಣೆಯಲಿ
ನಡವಳಿಕೆಯನು ಕಲಿತು ಬಾಳತೊಡಗಿದೆನು.

ಕೆಲಕಾಲ ಸಲುವುದರೊಳರಿವಾಯ್ತು ಜಗದ ಪರಿ,
ಪರಿಸರದ ಜನದ ಪರಿ; ಶುಭ ಮಾರ್ಗದಲಿ ನಡೆವ
ಬಾಳಿನುದ್ದಕು ನಿಂತು ಬೆದರಿಸುವ ಕಂಟಕದುರಿ.
ಉರಿಯೊಳಗೆ ಸಿಕ್ಕಿ ಸೀಕರಿಯಾಗಿ ಬೇಯುತ್ತ
ಆಗೊಮ್ಮೆ ದೂರಿದೆನು ದೇವನಿಗೆ ನಾನಿಂತು :
"ಏನು, ಸೋದರರೊಡನೆ ಕಡಿದಾಡಬಹುದೆ?
ಏನು, ಬಾಂಧವರೊಡನೆ ಬಡಿದಾಡಬಹುದೆ?
ಇಂತಿರಲು ಸಂತಸದಿ ನಲಿದಾಡಲಹುದೆ?
ನೆರೆಯ ಜನರೆಲ್ಲರನು ಪ್ರೀತಿಸಲು ತಪ್ಪೇ?
ಕೊರಗುವರ ಕಂಡಯ್ಯೊ ಎನಲುದುವೆ ತಪ್ಪೇ?
ನೆರವಾಗುತಿರಲವರಿಗದು ದೊಡ್ಡ ತಪ್ಪೇ?

* * *

ಮನೆಹಾಳರನು ಹಳಿಯುತವರೆಡೆಗೆ ಸುಳಿಯದಿರ
ಲದು ದೊಡ್ಡ ತಪ್ಪೇ?

* * *

ಇಂಥವರ ಬತ್ತಳಿಕೆಯಕ್ಷಯವು ದೇವಾ.
ಚಾಡಿ ಜೋಡಿಗಳಿವರ ಬಾಣಗಳು, ದೇವ.
ಈ ಬಾಣಗಳ ಬಾಯಿ ಬಲು ತೀಕ್ಷ್ಣ, ದೇವ.
ಇವರಿಗೀ ನಡತೆಯೇ ದಿನಚರಿಯು, ದೇವ.

---

* ಕೆಲವು ತಿಂಗಳ ಹಿಂದೆ ಬೆಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾದದ್ದು.

ಅಕ್ಷಯಗಳೆನಿಸುವೀ ಬತ್ತಳಿಕೆಗಳ ಧರಿಸಿ
ಸದ್ಧರ್ಮ ಸತ್ಯ ಸೌಭ್ರಾತ್ರ ಸೌಖ್ಯಗಳೆಂಬ
ಸೌಮ್ಯ ಮೃಗಗಳ ಬೇಟೆಯಾಡಲೋಸುಗ ಧರೆಯೊ
ಳೆತ್ತ ನೋಡೆ ಕಿರಾತಪಡೆ ಸುತ್ತುತಿಹುದು ;
ಹಾ ! ಕಷ್ಟ ! ಮೃಗ ಶರೀರವ ಕೆತ್ತುತಿಹುದು.
ಈ ಕಿರಾತರ ಪಡೆಯ ನುಡುವೆ ಸಿಕ್ಕಿದೆನು,
ಕ್ರೂರ ಕೃತ್ಯವ ತಡೆಯೆ ಕೈಯನೆತ್ತಿದೆನು,
ತಡೆಯಲಾರದೆ ನುಗ್ಗುನುಚ್ಚಾದೆನು."

ಇಂತು ದೂರುತ್ತ ಮುಂಬರಿಯುತಿರಲೊಂದು ದಿನ
"ಆನಂದದಿಂದುರುಳಿ ಕ್ಷಯಕಿಳಿದು ನಿಂದಿರುವೆ"
ನೆಂಬುದರಿವಾಯ್ತು. ಏತಕಿಂತಾಯ್ತೆಂದು
ಮನಸಿನಾಳಕೆ ಮುಳುಗಿ ಬೆದಕಿ ನೋಡಲು ಕೂಡೆ
ಕಾಣಿಸಿತು ಪರಿಪರಿಯ ಕುಂದುಗಳ ಕೆಸರಿನೊಟ್ಟು.
ಬೇಡಿದೆನು ಭಗವಂತನಡಿಯಲ್ಲಿ ತಲೆಯನಿಟ್ಟು :
"ನಾನೆ ನಂಜಿನ ಗೂಡು, ನನ್ನಲ್ಲಿ ನೀ ಬಂದು
ಸನ್ನಿಧಿಯ ಮಾಡು. ನನ್ನೆದೆಯ ತುಂಬಿರುವ
ನಂಜುಂಡು ಮತ್ತೊಮ್ಮೆ ನಂಜುಂಡನಾಗು."

ಬೇಡಿಕೆಗೆ ಕಿವಿಗೊಟ್ಟು ಮಡುಗಟ್ಟಿ ನಿಂದಿದ್ದ
ನಂಜನೆಲ್ಲವ ಹೀರಿ ಹಗುರವಾಗಿಸಲೆದೆಯ
ನಿಲ್ಲಿವರೆಗೂ ಬಾಳ ದೋಣಿ ಬಂತು ;
ಜೀವನದ ನದಿಯಲ್ಲಿ ತೇಲಿ ಬಂತು.

ಮತ್ತೆ ಮರುಕಳಿಸಿಹುದು ಹಿಂದಿನಾ ಪರಿಯೆ
ಎತ್ತ ನೋಡಿದರತ್ತ. ಪರಿಹಾರವರಿಯೆ.
ಒಳನಂಜಿನೂಟೆಯದು ಬತ್ತುತಿರಲೀಗ
ಹೊರನಂಜು ಸುರಿಸುರಿದು ತುಂಬುತಿದೆ ಬೇಗ.
'ಕ್ರೂರನಕ್ರಾಕುಲದೊಳಿಡಿದಿರ್ದ ಪೆರ್ಮಡು ಗ
ಭೀರ ನಿರ್ಮಲ ಜಲದೊಳೆಸೆವುದೆಂ'ದು,
'ಕರುಬರಿದ್ದೂರಿಂದೆ ಕಾಡೊಳ್ಳಿತೆಂ'ದು,
'ಹಿಂದೆಯಾಡುವ ನುಡಿಯು ಘೋರವಿಷವೆಂ'ದು
ಹಿಂದಣವರೆಂದದ್ದು ಸಂದಿತಿಂದು.

ನಂಜುನಾಲಗೆಯುರಿಯೊಳುರಿದುರುಳದಂತೆ
ಸಂಜೀವನವನೆಲ್ಲಿ ತರಲೆಂಬ ಚಿಂತೆ
ಕಾಡುತಿರೆ, ಕಾಲಗರ್ಭವ ಸೀಳಿ ಬಂತು
ಮೂಡಿಸುತ ನೆಚ್ಚನಾ ಸಿಡಿಲ ನುಡಿಯಿಂತು :
"ಹೇಡಿತನವನು ಬಿಸುಡು, ಏಳು, ಎದ್ದೇಳು.
ಕೇಡಿಲ್ಲ ಒಳ್ಳೆಯದ ಮಾಡುವಗೆ, ಧೈರ್ಯತಾಳು.
ಅಳುಕದೆಯೆ ಹೋರಾಡು. ಚಿಂತೆಯನು ಬಿಟ್ಟುಬಿಡು
ನನ್ನ ನೆಚ್ಚಿದವನಿಗೆ ನಾಶವಿಲ್ಲೆಂದೂ."

# ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ

## ಪ್ರಾಸ್ತಾವಿಕ ಮತ್ತು ಅಧ್ಯಕ್ಷ ಭಾಷಣ

[ಕಳೆದ ಡಿಶೆಂಬರ್ ತಿಂಗಳಲ್ಲಿ ಗದುಗಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ವ್ಯವಸ್ಥೆಯಾಗಿದ್ದ ಕವಿಗೋಷ್ಠಿಯ ಪ್ರಾಸ್ತಾವಿಕ ಮತ್ತು ಅಧ್ಯಕ್ಷ ಭಾಷಣಗಳನ್ನು ಇಲ್ಲಿ ಕೊಡಲಾಗಿದೆ.]

### ಶ್ರೀ ಸಿದ್ಧಯ್ಯ ಪುರಾಣಿಕರ ಭಾಷಣ

ಕವಿಗೋಷ್ಠಿಯ ಪ್ರಾಸ್ತಾವಿಕ ಭಾಷಣ ಮಾಡುತ್ತಾ ಶ್ರೀ ಸಿದ್ಧಯ್ಯ ಪುರಾಣಿಕರು ಹೀಗೆ ನುಡಿದರು.

ಜಯತಿ ಪ್ರತಿಭೋಲ್ಲೇಖರೂಪಿಕಾ ಶಿಲ್ಪ ಶಾಲಿನೀ
ಚರಾಚರ ಚರಿತ್ರಸ್ಯ ಚಿತ್ರಭಿತ್ತಿ: ಸರಸ್ವತೀ ॥

ಇಂದಿಲ್ಲಿ ನಡೆಯುವ ಕನ್ನಡ ಕಾವ್ಯದೇವಿಯ ಆರಾಧನೆಯಲ್ಲಿ 'ಹೊಸತಿಲ ಪೂಜಿಸಿ ಹೊರವಟ್ಟು ಹೋಹ ಒಕ್ಕಲಿತಿ'ಯ ಕಾರ್ಯವಾಡಲು ತಾವು ನನ್ನನ್ನು ಕರೆದಿದ್ದೀರಿ. ತಮ್ಮ ಕರೆಯನ್ನು ಕನ್ನಡ ತಾಯಿಯ ವರವೆಂದು ಭಾವಿಸಿ ಬಂದಿದ್ದೇನೆ. ತಮ್ಮ ವಿಶ್ವಾಸಕ್ಕೆ ಮತ್ತೆ ಮತ್ತೆ ಮಣಿದು ನನ್ನ ಮಣಿಹವನ್ನು ಪೂರೈಸಲು ಪ್ರಯತ್ನಿಸುತ್ತೇನೆ.

ಇಂದು ಕನ್ನಡ ನಾಡಿನಲ್ಲಿ ಮಾತ್ರವಲ್ಲ, ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಕವಿ ಕವಲುದಾರಿಯಲ್ಲಿ ನಿಂತಿರುವನೆಂಬ ನುಡಿ ಕೇಳಿಬರುತ್ತಿದೆ. ಇದು ಎಲ್ಲ ಕಾಲಗಳಲ್ಲಿಯೂ ಕೇಳಿಬಂದಿರುವ ನುಡಿ ದೂರವೇಕೆ, ಈ ಸಮ್ಮೇಳನ ನಡೆಯುತ್ತಲಿರುವ ಗದಗಿನಲ್ಲಿಯೇ ಇಬ್ಬರು ಮಹಾಕವಿಗಳು ಕುಮಾರವ್ಯಾಸ, ಚಾಮರಸರು ಉದಯಿಸಿದರು. ಅವರಿಬ್ಬರ ದೃಷ್ಟಿಯಲ್ಲಿ ಅಂತರವೆಷ್ಟು! ಒಬ್ಬರಿಗೆ 'ಅರಸುಗಳ ವೀರ' ವರ್ಣನೀಯವಾಗಿ ತೋರಿತು; ಇನ್ನೊಬ್ಬರಿಗೆ 'ಕಾಳಗದ ಕಥೆ' ಬೇಡವಾಗಿ ಬಿಟ್ಟಿತು. ಹೀಗೆ ಕವಲುದಾರಿಯಲ್ಲಿ ನಿಂತಿದ್ದ ಅವರಿಬ್ಬರೂ ಒಂದೊಂದು ಕಡೆಗೆ ನಡೆದರು.

ಇನ್ನೊಂದು ದೇಶದ ಇಬ್ಬರು ಕವಿಗಳನ್ನು ಆಯ್ದು ನೋಡೋಣ. ಲರ್ಮೊಂಟೋಫ್ ಮತ್ತು ಪೆನ್ಸಿನ್ ಇಬ್ಬರೂ ಹೆಚ್ಚುಕಡಮೆ ಸಮಕಾಲೀನರಾದ ರಷ್ಯನ್ ಕವಿಗಳು. ಇವರಲ್ಲಿ ಮೊದಲನೆಯವರು,

"I gaze with grief upon our generation,
Its future black or vacant – and to day,
Bent with a load of doubt and
understanding,
In sloth and cold stagnation it grows old."

ಎಂದು ಉದ್ಗರಿಸಿದರೆ ಎರಡನೆಯವರು,

"And I know not the theme of the singing,
But a song is lifting its wings"

ಎಂದು 'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ' ಎಂಬ ಪ್ರಣಾಲಿಗೆ ಪುಷ್ಟಿಯನ್ನೀಯುತ್ತಾರೆ.

ಅಯರ್ಲಂಡಿನ ಇಬ್ಬರು ಕವಿಗಳನ್ನು ಇದೇ ರೀತಿ ತುಲನೆ ಮಾಡಿ ನೋಡಬಹುದು. ಎ. ಈ. ಮತ್ತು ಯೇಟ್ಸ ಇಬ್ಬರೂ ಸಮಕಾಲೀನರು. ಯೇಟ್ಸರು ರವೀಂದ್ರರ 'ಗೀತಾಂಜಲಿ'ಗೆ ಮುನ್ನುಡಿ ಬರೆದಾದ ಮೇಲೆಯೂ ಪರಂಪರಾಗತ ಕಾವ್ಯಧಾರೆಯನ್ನೇ ಮುಂದುವರಿಸಿದ್ದರು. ಆದರೆ ಮುಂದೆ ತಮ್ಮ ಇಳಿವಯಸ್ಸಿನಲ್ಲಿ ಎಜ್ರಾಪೌಂಡ್ ಇಲ್ಯಟ್ಟರ ಪ್ರಭಾವಕ್ಕೊಳಗಾಗಿಯೋ ಏನೋ ನವ್ಯಕಾವ್ಯದತ್ತ ವಾಲಿದರು. ಆದರೆ ಎ.ಈ. ಅವರು ಮಾತ್ರ—

"Lights of infinite pity star the grey
dusk of our days:
Surely here is soul: with it we have
eternal breath:
In the fire of love we live, or pass
by many ways,
By unnumbered ways of dream to death"

ಎಂಬ ವಿಶ್ವಾಸದಲ್ಲಿಯೇ ಅಚಲ ಶ್ರದ್ಧೆಯನ್ನಿರಿಸಿಕೊಂಡರು ಕೊನೆಯವರೆಗೆ.

ಇವರಲ್ಲಿ ಯಾರದಾರಿ ಸಾಧುವಾದುದೆಂಬುದು ವಾದದ ವಿಷಯ. ಮುಖ್ಯ ಪ್ರಶ್ನೆ ಇದು: ನಮಗೆ ಇಬ್ಬರ ಅಗತ್ಯವೂ ಇದೆಯೆ ಇಲ್ಲವೆ? 'ಇದೆ' ಎಂದು ನಾನು ನಂಬಿದ್ದೇನೆ. ಕಾವ್ಯಪರಂಪರೆಗೆ ಕಾಲಮಾನದ ಕಟ್ಟು ಹಾಕುವುದು ಕಷ್ಟದ ಕೆಲಸ. 'ಆಧುನಿಕ ಯುಗ'ವೆಂದು ನಾವು ಕರೆಯುತ್ತಿರುವ ಕಾಲದಲ್ಲಿಯೂ ಅದಕ್ಕೂ ಹಿಂದಿನ ಪರಂಪರೆ ಬದುಕಿದ್ದಿತು–ಷಟ್ಪದೀ ಯುಗದಲ್ಲಿ ಚಂಪೂ ಕಾವ್ಯ ಬದುಕಿದ್ದ ಹಾಗೆ; ಈಗ 'ಆಧುನಿಕ ಯುಗ'

ಮುಗಿದಿದೆಯೆಂದು ನಂಬಿದ ಮೇಲೂ ಆ ಪರಂಪರೆ ಬದುಕಿದೆ; ಅದರಲ್ಲಿ ಅಂತಃ ಸತ್ವ ಸ್ವಲ್ಪವಾದರೂ ಉಳಿದಿರುವವರೆಗೆ ಅದು ಬದುಕಿರುವುದು. ನಾವು 'ಬೇಗ ಮುಗಿ' ಎಂದರೆ ಅದು ಮುಗಿಯುವುದಿಲ್ಲ; 'ಬಹುಕಾಲ ಬಾಳಲಿ' ಎಂದರೆ ಬಾಳುವುದಿಲ್ಲ.

ಇಂದಿನ ಪ್ರಕ್ಷುಬ್ಧ ಪ್ರಪಂಚವು, ಸಂಕೀರ್ಣ ಸಮಾಜವು, ಅಶಾಂತಿಮಯ ವಾತಾವರಣವು, ವ್ಯಕ್ತಿ ವ್ಯಕ್ತಿಗಳ ಅಂತರಂಗದಲ್ಲಿ ಎದ್ದಿರುವ ಸಂಶಯ ಕಲ್ಲೋಲಗಳು, ನಿರಾಶೆಯ ಬಿರುಗಾಳಿಗಳು, ನಿತ್ಯಜೀವನದಲ್ಲಿ ಅಪರಿಹಾರ್ಯವಾಗಿ ಪರಿಣಮಿಸಿರುವ ನಂಜಿನ ಗುಟುಕುಗಳು, ಕಳವಳ ತಳಮಳಗಳು, ವ್ಯಥೆಗಳು, ಕರುಣ ಕಥೆಗಳು ಎಲ್ಲವೂ ಅಭಿವ್ಯಕ್ತಿಗಾಗಿ ಬೇರೊಂದು ಪರಂಪರೆಯನ್ನೇ ಬಯಸಿದುದು ಸರಿಯೆ: ಭಾವನಾಪರವಶತೆಯೊಡನೆ ಬುದ್ಧಿಯ ಕುಶಾಗ್ರತೆಯೂ, ಆಂತರಿಕತೆಯೊಡನೆ ವಸ್ತುನಿಷ್ಠತೆಯೂ, ಪ್ರಜ್ಞೆಯೊಡನೆ ಉಪಪ್ರಜ್ಞೆ ಪ್ರತಾನಿತ ಪ್ರಜ್ಞೆಗಳೂ, ವ್ಯಂಜಕತೆಯೊಡನೆ ಅರ್ಥ ಸಂಕೀರ್ಣತೆಯೂ, ಸರಿಬೆರಕೆಯಾಗಿ ಹುಟ್ಟಿದ ಹೊಸ ಪರಂಪರೆಯೊಂದು ಪ್ರಾದುರ್ಭವಿಸಿದುದೂ ಸರಿಯೆ. ಆದರೆ ಈ ಎರಡೂ ಪರಂಪರೆಗಳು ಪರಸ್ಪರ ನಿಷಿದ್ಧಗಳೇನಲ್ಲ. ಅವು ಪ್ರತ್ಯೇಕವಾಗಿ ಉಳಿಯಲು ಪ್ರಯತ್ನಿಸಿದರೂ ಪ್ರತ್ಯೇಕವಾಗಿ ಉಳಿಯುವುದು ಸಾಧ್ಯವಿಲ್ಲ. ಇದಾಗಲೇ ಒಂದರೊಂದರ ಮೇಲೆ ತಮ್ಮ ಅಪ್ರತ್ಯಕ್ಷ ಮುದ್ರೆಯನ್ನೊತ್ತಿದೆ. ಇಂದಿನ ಕವಿಗೋಷ್ಠಿಯ ಅಧ್ಯಕ್ಷರೇ ಇವೆರಡರ ಮಧ್ಯಮ ಮಾರ್ಗದ ಪುರಸ್ಕರ್ತರಲ್ಲೊಬ್ಬರೆಂದು ಹೆಸರಾಗಿದ್ದಾರೆ. ಆದುದರಿಂದ ಈ ಎರಡೂ ಪರಂಪರೆಗಳ, ಕಾವ್ಯಪದ್ಧತಿಗಳ ಕವಿಗಳು ಒಬ್ಬರೊಬ್ಬರನ್ನು ಸಾಶಂಕ ದೃಷ್ಟಿಯಿಂದ ನೋಡುವ ಕಾರಣವಿಲ್ಲ. 'ನವ್ಯಕಾವ್ಯ'ದ ಪ್ರವರ್ತಕರಾದ 'ವಿನಾಯಕ'ರೇ ಹೇಳಿರುವಂತೆ,

'ಕವಲೊಡೆದೂ ಕಲೆಯಬಹುದು
ಭಿನ್ನವಿದ್ದೂ ಬೆರೆಯಬಹುದು'.

ಯಾರು ಯಾವ ಮಾರ್ಗವನ್ನೇ ಅನುಸರಿಸಲಿ, ಬಂಧದ ಪರಿಪೂರ್ಣತೆ ಮತ್ತು ಭಾವನೆಯ ಪರಿಣಾಮಕಾರಿತ್ವಗಳನ್ನು ಕಡೆಗಣಿಸಲಾಗದು. ಕವಿ ಬರೆಯುವುದು ಕವಿಗಾಗಿ ಅಲ್ಲ, ಕವಿಯಷ್ಟೇ ವ್ಯುತ್ಪನ್ನಮತಿಗಳಿಗಾಗಿ ಮಾತ್ರವಲ್ಲ, ಸಾಮಾನ್ಯ ಸಹೃದಯರಿಗಾಗಿ ಎಂಬುದನ್ನು ಮರೆಯಲಾಗದು. 'ಇಂಥ ಕವಿತೆಗಳನ್ನು ಅರ್ಥವಿಸುವುದೊಂದು ವ್ಯರ್ಥ ಪ್ರಯತ್ನ'ವೆಂಬ ಭಾವನೆ ಬರುವಂತೆ ಬರೆದರೆ ಕವಿತೆ ಅನಾದರಕ್ಕೀಡಾಗಲು ಕವಿಯೇ ಕಾರಣನಾಗುತ್ತಾನೆ. ಹಾಡುವ ಹಂಬಲ ಮಾನವನಿಗೆ ಸ್ವಾಭಾವಿಕವಾದುದು. ಆದುದರಿಂದ ಹಾಡಲು ಬರುವಂಥ ಕವಿತೆಗಳು ಕೆಲವಾದರೂ ಹುಟ್ಟುತ್ತಲಿರಬೇಕು. ಕವಿಯು 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ಸುತ್ತಿ ತಾನೇ ಸಾಯುವಂತೆ' ತನ್ನ ಪ್ರಣಾಲಿಯ ಜೇಡ ಜಾಲದಲ್ಲಿ ತಾನೇ ಸಿಕ್ಕಿಬೀಳದೆ 'ವಿಪುಲವಾದ ಆಕಾಶದ್ರವ್ಯ, ದಿವ್ಯತರವಾದ ವಾಯು (an ampler ether and diviner air ) ವನ್ನು ಉಸಿರಾಡುತ್ತಿದ್ದರೆ, ತೆರೆದ ಕಣ್ಣು, ಕೇಳುವ ಕಿವಿ, ಅನುಭವಿಸುವ ಹೃದಯ, ಸ್ವೀಕರಿಸುವ ಬುದ್ಧಿಗಳೊಡನೆ ಜೀವ ಜಗತ್ತುಗಳ, ದೇಹಾತ್ಮಗಳ ನಶ್ವರ ಶಾಶ್ವತಗಳ, ಏಕ ಅನೇಕಗಳ, ಇಂದು ನಾಳೆಗಳ ಎಲ್ಲ ಆಕೃತಿ ವಿಕೃತಿಗಳನ್ನೂ, ಸ್ವರ ಅಪಸ್ವರಗಳನ್ನೂ, ಅಭೀಪ್ಸೆ ಆದರ್ಶಗಳನ್ನೂ, ಆಶೆ ನಿರಾಶೆಗಳನ್ನೂ, ನಗೆ ನಿಟ್ಟುಸಿರುಗಳನ್ನೂ ಸ್ವಾಗತಿಸುತ್ತಿದ್ದರೆ, "Perhaps poetry cannot be written if in real life discord is in excess or harmony is complete. Where the pain of discord wishes powerfully to grasp and give expression to harmony, there alone can poetry, like the breath breaking siege by the lute, flow in its true rhytham ಎಂಬ ರವೀಂದ್ರೋಕ್ತಿಯನ್ನು ನೆನಪಿನಲ್ಲಿರಿಸಿಕೊಂಡಿದ್ದರೆ ಶೃಂಗದಿಂದ ಶೃಂಗಕ್ಕೆ, ಅಂಬುಧಿಯಿಂದ ಅಂಬುಧಿಗೆ ಅನಾಯಾಸವಾಗಿ ಜಿಗಿದ ಆಂಜನೇಯನಂತೆ ಅವನು ಪದ್ಧತಿಯಿಂದ ಪದ್ಧತಿಗೆ, ಪರಂಪರೆಯಿಂದ ಪರಂಪರೆಗೆ ಲೀಲಾಜಾಲವಾಗಿ ಹಾರಿ ಎಲ್ಲೆಲ್ಲಿಯೂ ತನ್ನ ವಿಕ್ರಮವನ್ನು ಮೆರೆಯಬಲ್ಲನು.

ಕನ್ನಡ ಕವಿಗಳೂ ಇಂಥ ವಿಕ್ರಮವನ್ನು ಮೆರೆಯಲೆಂದೂ, ಕನ್ನಡ ಕವಿತೆ ಮುನ್ನೀರುಗಳ ದಾಟಿ ನಾಲ್ಕು ನಿಟ್ಟಿನ ನಾಡುಗಳಲ್ಲಿಯೂ ತನ್ನ ತೇಜವನ್ನು ಹರಡುವ ದಿನ ಬೇಗ ಬರಲೆಂದೂ ಹಾರೈಸಿ ಈ ಮೊದಲ್ಮಾತನ್ನು ಮುಗಿಸುತ್ತೇನೆ.

# ಶ್ರೀ ಚೆನ್ನವೀರ ಕಣವಿ ಅವರ ಭಾಷಣ

ಕವಿ ಗೋಷ್ಠಿಯ ಅಧ್ಯಕ್ಷರಾದ ಶ್ರೀ ಚೆನ್ನವೀರ ಕಣವಿ ಅವರ ಅಧ್ಯಕ್ಷ ಭಾಷಣ ಹೀಗಿದೆ.

> "Let the mind be a thoroughfare for
> all thoughts, not a select party"
>
> —Keats

೧

ನನಗಿಂತಲೂ ಹಿರಿಯರಾದವರು, ಕಾವ್ಯಪ್ರಯೋಗ ಪರಿಣತಮತಿಗಳು, ಈ ಕವಿಗೋಷ್ಠಿಯ ಅಧ್ಯಕ್ಷಪದವನ್ನು ಅಲಂಕರಿಸಿದ್ದರೆ ನನಗೆ ಇನ್ನೂ ಹೆಚ್ಚಿನ ಸಂತೋಷವಾಗುತ್ತಿತ್ತು. ನಿಮ್ಮೆಲ್ಲರ ಪ್ರೀತಿ ವಿಶ್ವಾಸಗಳಿಗೆ ಎರಡು ಬಗೆಯದೆ, ನನ್ನ ಯೋಗ್ಯತೆಗೆ ಮೀರಿದ ಈ ಕಾರ್ಯಕ್ಕೆ ಅತ್ಯಂತ ನಮ್ರತೆಯಿಂದ ಅಣಿಯಾಗಿ ತಮ್ಮೆದುರು ನಿಂತಿದ್ದೇನೆ. ಸಹೃದಯರಾದ ತಾವೆಲ್ಲರೂ 'ಎನಗೆ ನೆರವಕ್ಕೆ, ನಡಸುಗೆ, ರಸಂಗೊಡುಗೆ, ತಿದ್ದುಗೆ ಸುನಿರ್ವಿಘ್ನದಿಂದ' ಎಂದು ಕೋರುತ್ತೇನೆ.

ನಾನು ಇದೇ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಹುಟ್ಟಿ ನನ್ನ ಬಾಲ್ಯವನ್ನು ಕಳೆದಿರುವುದು ನಿಮ್ಮ ಅಭಿಮಾನಕ್ಕೆ ಒಂದು ಕಾರಣವಾಗಿರಬಹುದಾಗಿ ಭಾವಿಸುತ್ತೇನೆ. ನನ್ನ ಕಾವ್ಯಜೀವನದ ಪ್ರಾರಂಭದ ರಸಸಂಸ್ಕಾರವನ್ನೂ, ಸ್ಫೂರ್ತಿಯನ್ನೂ ಇಲ್ಲಿಯ ವಾತಾವರಣದಲ್ಲಿ ಪಡೆದ ಧನ್ಯತೆ ನನ್ನದಾಗಿದೆ. 'ಭಾವಜೀವಿ'ಯಲ್ಲಿ ಒಡಮೂಡಿರುವ ಹಳ್ಳಿಯ ಬಾಳಿನ ಚಿತ್ರಣ ಈ ನಾಡಿನ, ನುಡಿಯ, ಪ್ರಸಾದ. ಚಾಮರಸ, ಕುಮಾರವ್ಯಾಸ ಮಹಾಕವಿಗಳ ಭಕುತಿಯ ಭಾವರಸದಲ್ಲಿ ಮಿಂದು, ಬಲುಹಿನ ಅಗ್ಗಳಿಕೆಯಲ್ಲಿ ತಲೆಯೆತ್ತಿ ನಿಂತಿದೆ ಇಲ್ಲಿಯ ಭಾಷೆ. ಈ ಬೆಳುವೊಲದ ತಿರುಳ್ಗನ್ನಡದ ಬಗ್ಗೆ ನನಗಿರುವ ಅಭಿಮಾನದಲ್ಲಿ ನೀವೂ ಪಾಲುಗಾರರು ಎಂದು ಭಾವಿಸಿ ಮುಂದೆ ಸಾಗುತ್ತೇನೆ.

ನಮ್ಮ ಪುರಾತನ ಕಾವ್ಯದ ಭವ್ಯ ಪರಂಪರೆಯನ್ನೂ, ನಮ್ಮ ಹಿಂದಿನ ಕವಿಗಳ ಹಿರಿಮೆ–ಗರಿಮೆಗಳನ್ನೂ ಕುರಿತು ಈ ಹಿಂದೆ ಅನೇಕರು, ಅನೇಕ ಸಲ, ಇಂಥ ಗೋಷ್ಠಿಗಳಲ್ಲಿ ಸಮರ್ಥ ರೀತಿಯಿಂದ ಪ್ರತಿಪಾದಿಸಿ ನಮ್ಮನ್ನು ಸಂತುಷ್ಟಿಗೊಳಿಸಿದ್ದಾರೆ. ಅಲ್ಲದೆ ಆಧುನಿಕ ಕನ್ನಡ ಕಾವ್ಯದ ಗೊತ್ತು–ಗುರಿಗಳನ್ನು ಒಲವು–ನಿಲವುಗಳನ್ನೂ ಕಂಡುಹಿಡಿಯಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದ್ದಾರೆ. ಆದುದರಿಂದ ನಾನು ಪುನಃ ಆ ಕಾರ್ಯಕ್ಕೆ ತೊಡಗದೆ, ಹೊಸಗನ್ನಡ ಕಾವ್ಯದಲ್ಲಿ ಹೊಸ ಬದುಕಿನ ನಿರ್ಮಾಣ ಇತ್ತೀಚೆಗೆ ನಡೆದಿರುವ ರೀತಿಯನ್ನು ಕುರಿತು ನನಗೆ ಕಂಡುಬಂದಿರುವ ನಾಲ್ಕು ಮಾತುಗಳನ್ನು ತಮ್ಮೆದುರು ಇಡುತ್ತಿದ್ದೇನೆ. 'ತಂ ಸಂತಃ ಶ್ರೋತುಮರ್ಹಂತಿ ಸದಸದ್ವ್ಯಕ್ತಿ ಹೇತವಃ'

೨

ಕವಿ ತನ್ನ ಕಾವ್ಯದಲ್ಲಿ ಹೊಸತಾದುದನ್ನು ಹೇಳಲು, ಹೊಸ ಹೊಸ ಅನುಭವವನ್ನು ಹೊಸರೀತಿಯಲ್ಲಿ ಚಿತ್ರಿಸಲು, ಪ್ರಯತ್ನಿಸುವದು ಅವನ ಕಾವ್ಯಶಕ್ತಿಯ ಬೆಳವಣಿಗೆಯ ಕುರುಹು. 'The poetry of earth is never dead' (Keats) ಎಂಬ ಮಾತೇನೊ ನಿಜ; ಆದರೆ, ಆ ಕಾವ್ಯನಿಧಿಯ ಹೊಸ ಹೊಸ ಸರಕನ್ನು ಹೊರದೆಗೆದು ತೋರುವ ಭಾರ ಆಯಾ ಕವಿಯ ಕಾವ್ಯಶಕ್ತಿಯನ್ನೇ ಅವಲಂಬಿಸಿದೆ. ನಮಗೆ ಗೊತ್ತಿರುವ ಶಬ್ದಗಳೇ, ನಾವು ಆಡುವ ಮಾತುಗಳೇ ಎಲ್ಲ ಕವಿಗಳ ಕಾವ್ಯ ಮಾಧ್ಯಮವಾಗಿದ್ದರೂ, ನಾವು ಕಾಣುವ ನೋಟಗಳನ್ನೇ, ನಾವು ಪಡೆಯುವ ಅನುಭವಗಳನ್ನೇ ಕವಿಗಳು ತಮ್ಮ ಕಾವ್ಯದಲ್ಲಿ ಚಿತ್ರಿಸಿದರೂ, ಒಬ್ಬೊಬ್ಬರ ಕವಿತೆಯೂ ಒಂದೊಂದು ವಿಧ, ಒಬ್ಬೊಬ್ಬರ ಕಾವ್ಯವಸ್ತುವಿನಲ್ಲಿಯೂ ಒಂದೊಂದು ಹದ, ಒಬ್ಬೊಬ್ಬರ ರಚನಾ ವಿಧಾನದಲ್ಲೂ ಒಂದೊಂದು ಕ್ರಮ ಕಂಡುಬರುತ್ತದೆ. ಹೀಗೆ, 'ನವನವೋನ್ಮೇಷಶಾಲಿನಿ' ಯಾಗಿರುವುದೇ ಪ್ರತಿಭೆ. ಒಬ್ಬೊಬ್ಬ ವ್ಯಕ್ತಿಯ ಜೀವನಾನುಭವದಲ್ಲಿಯೂ ವೈಶಿಷ್ಟ್ಯವಿರುವಂತೆ, ಒಬ್ಬೊಬ್ಬ ಕವಿಯೂ ಜಗತ್ತಿನ ಜೀವನಕ್ರಮದ ಹಿನ್ನೆಲೆಯಲ್ಲಿ ತನ್ನ ವಿಶಿಷ್ಟಾನುಭವವನ್ನು ಕಾವ್ಯದಲ್ಲಿ ನಿರೂಪಿಸುತ್ತಾನೆ. ಅಥವಾ, ಹಾಗೆ ಮಾಡುವುದರಿಂದಲೇ ಅದಕ್ಕೊಂದು ಬೆಲೆ ಬರುತ್ತದೆ. ಇಂಥ ಪ್ರತಿಭಾವಂತ ಕವಿಗಳಿಂದ ರಚಿತವಾದ ಕಾವ್ಯ ಯಾವ ಕಾಲದ್ದೇ ಆಗಲಿ, ಅದು ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ. ಅದು ಸಮಗ್ರವಾಗಿ ನಮ್ಮನ್ನು ತಣಿಸದೆ ಹೋದರೂ ಆಯಾ ಕಾವ್ಯದ ಒಂದೊಂದು ಗುಣ, ಒಂದೊಂದು ಸೊಗಸು, ನಮ್ಮ ಹೃದಯವನ್ನು ತೊನೆದು ತೂಗಿಸುತ್ತದೆ. ಅಂತೆಯೇ ಪಂಪ–ಚಾಮರಸರ

ಹಿತಮಿತವಚನ, ದೇಸಿನಿಷ್ಠತೆ, ರನ್ನ–ರಾಘವಾಂಕ–ಕುಮಾರವ್ಯಾಸರ ಭಾವಾಭಿನಯದ ಬೀಸು, ಕಸುವು, ಹರಿಹರ–ರತ್ನಾಕರವರ್ಣಿಗಳ ಸಲೀಲತೆ, ಆಂಡಯ್ಯ–ಸರ್ವಜ್ಞ–ದಾಸರು ಮೊದಲಾದವರ 'ಮಾತನಾಡಿದ ವೊಲಂದವನಾಳ್ದ' ಪದ್ಯರಚನೆ, ಅನುಭಾವ ಕಾವ್ಯದ ಅನಂತ ಸ್ತರಗಳಲ್ಲಿ ತಮ್ಮ ಅಂತರಂಗವನ್ನು ಎರಕ ಹೊಯ್ದು, ಕನ್ನಡ ನುಡಿಯ ಶಕ್ತಿಸರ್ವಸ್ವವನ್ನೂ ಅದಕ್ಕೆ ಧಾರೆಯೆರೆದ ಶರಣರ ವಚನ ರಚನಾ ಸಾಮರ್ಥ್ಯ—ಇವು ಇಂದಿಗೂ ನಮ್ಮನ್ನು ಸೋಜಿಗಗೊಳಿಸುತ್ತವೆ. ಹೊಸ ಚೇತನವನ್ನು ನಮ್ಮ ಮನಸ್ಸಿಗೆ ಊಡುತ್ತಿವೆ. ಹೊಸ ಕವಿಗಳು ಅರಗಿಸಿಕೊಳ್ಳಬೇಕಾದ ಸಾಮಗ್ರಿ ನಮ್ಮ ಹಿಂದಿನ ಕಾವ್ಯಗಳಲ್ಲಿಯೂ, ವಚನ ಸಾಹಿತ್ಯದಲ್ಲಿಯೂ ಇನ್ನೂ ಸಾಕಷ್ಟಿದೆಯೆಂದು ಹೇಳಬಹುದು. ಅಲ್ಲಮ ಪ್ರಭುಗಳ ಒಂದೆರಡು ವಚನಗಳನ್ನು ಇಲ್ಲಿ ನೋಡಬಹುದು :

> ವಾಯು ನಿದ್ರೆಗೆಯ್ದಡೆ ಆಕಾಶ ಜೋಗುಳವಾಡಿತ್ತು.
> ಬಯಲು ಬಳಲಿದೆನೆಂದಡೆ ನಿರಾಳ ಮೊಲೆಗೊಟ್ಟಿತ್ತು.
> ಆಕಾಶವಡಗಿತ್ತು, ಜೋಗುಳ ನಿಂದಿತ್ತು,
> ಗುಹೇಶ್ವರನೈದಾನೆ ಇಲ್ಲದಂತೆ.
>
> ಹರಿವ ನದಿಗೆ ಮೈಯೆಲ್ಲ ಕಾಲು.
> ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ.
> ಬೀಸುವ ಗಾಳಿಗೆ ಮೈಯೆಲ್ಲ ಕೈ.
> ಇದು ಕಾರಣ, ಗುಹೇಶ್ವರ, ನಿಮ್ಮ ಶರಣಂಗೆ
> ಸರ್ವಾಂಗವೆಲ್ಲ ಲಿಂಗಮಯವಯ್ಯ.
>
> ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು ;
> ಮುಂದಣ ಕವಿಗಳೆನ್ನ ಕರುಣದ ಕಂದಗಳು.
> ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸು ;
> ಹರಿಬ್ರಹ್ಮರೆನ್ನ ಕಕ್ಷಕುಳ.
> ನೀ ಮಾವ ನಾನಳಿಯ ಗುಹೇಶ್ವರ.

ಅನುಭಾವದ ಪರಿಭಾಷೆಯಲ್ಲಿ ಇವುಗಳ ಅರ್ಥದ ಬೆಡಗು ಏನೇ ಇರಲಿ, ಭಾವಾನುಬಂಧದಲ್ಲಿ, ಭಾಷೆಯ ಪರಮೋಚ್ಚ ಸಿದ್ಧಿಯಲ್ಲಿ, ನೂತನ ಪ್ರತಿಮಾಸೃಷ್ಟಿಯಲ್ಲಿ ವಚನ ಸಾಹಿತ್ಯದಲ್ಲಿಯ ಕೆಲವು ಭಾಗ ಅತ್ಯಂತ ಗಮನಾರ್ಹವಾಗಿದೆ.

ಆತ್ಮಪ್ರತ್ಯಯ ನಮ್ಮ ಕವಿಗಳ ಒಂದು ಸಂಪ್ರದಾಯವೇ ಆಗಿದೆಯಷ್ಟೆ? ಹೊಸದರ ಲವಲವಿಕೆಯೂ ಅವರಲ್ಲಿ ಕೆಲಮಟ್ಟಿಗೆ ಕಂಡು ಬರುತ್ತದೆ. ಇನ್ನೊಬ್ಬ ಕವಿಗಿಂತ ತಾನು ಏನೋ ಒಂದು ನೂತನವಾದುದನ್ನು ಹೇಳಬೇಕು ಎಂಬ ಬಗ್ಗೆ ಅವರವರಲ್ಲಿ ಒಂದು ಬಗೆಯ, ಸ್ಪರ್ಧೆ ಇದ್ದಂತೆ ತೋರುತ್ತದೆ. ಭಾವದಲ್ಲಿ, ಅಲಂಕಾರದಲ್ಲಿ ರೀತಿಯಲ್ಲಿ, ಪದರಚನೆಯಲ್ಲಿ–ಎಲ್ಲೋ ಒಂದು ಕಡೆ ಅದು ತೋರಿದರೂ, ಅವರಿಗೆ ಸಾಕಾಗಿತ್ತೆಂದು ತೋರುತ್ತದೆ. ಆದರೆ, ತಮ್ಮ ಸ್ವತಂತ್ರ ವೃತ್ತಿಯನ್ನು ಮೆರೆದು ಹೋದ ಕೆಲವರು ಮಹಾಕವಿಗಳ ಮಾತೇ ಬೇರೆ. 'ಬಗೆ ಪೊಸತಪ್ಪುದಾಗಿ' ಇರಬೇಕೆಂದು ಬಯಸಿದ ಪಂಪ 'ನಿಚ್ಚಂ ಪೊಸತು, ಅರ್ಣವಂಬೊಲತಿ ಗಂಭೀರಂ ಕವಿತ್ವಂ' ಎಂದೇ ಸಾರಿದ್ದಾನೆ. ತಮ್ಮ ಪ್ರತಿಭೆಯನ್ನು ಎಲ್ಲ ಮಟ್ಟದಲ್ಲೂ ಸಂಪೂರ್ಣ ಸೂರೆಗೊಂಡ ಕವಿಗಳ ಕಾವ್ಯ ನಿತ್ಯವೂ ಹೊಸ ಹೊಸ ಭಾವವನ್ನು ಸ್ಫುರಿಸುವುದರಲ್ಲಿ ಸಂದೇಹವೇ ಇಲ್ಲ. ಆದರೂ, ಕೆಲವು ಕವಿಗಳು ಯಾವುದರಲ್ಲಿ ಹೊಸತನ್ನು ಸಾಧಿಸಿದ್ದಾರೆ ಎಂಬುದನ್ನು ತಾವೇ ಅಲ್ಲಲ್ಲಿ ಹೇಳಿಕೊಂಡಿದ್ದಾರೆ. ಅವನ್ನು ಅವರ ಕಾವ್ಯಕ್ಕೇ ಅನ್ವಯಿಸಿ ನೋಡಿದಾಗ, ಅವರ ಹೇಳಿಕೆಗಳಲ್ಲಿ ನಿಜವಾದದ್ದು ಎಷ್ಟು, ಆತ್ಮಪ್ರತ್ಯಯ ಎಷ್ಟು ಎಂಬುದು ತಾನೇ ಹೊಳೆಯುತ್ತದೆ. ಹದಿನೇಳನೆಯ ಶತಮಾನದಲ್ಲಿ ಚಂಪುವಿಗೆ ಮತ್ತೆ ಜೀವದಾನ ಮಾಡಿದ ಷಡಕ್ಷರ ಕವಿ ತನ್ನ 'ಶಬರಶಂಕರ ವಿಳಾಸ'ದಲ್ಲಿ ಹೀಗೆ ನುಡಿದಿದ್ದಾನೆ :

> ಇದು ಪೊಸರೀತಿ ನೋಡು, ಇದು ನವೀನಮಲಂಕೃತಿ
> ನವ್ಯಭಾವಂ
> ಇಂತಿದು, ನವವೃತ್ತಿ ಲೇಸಿದು, ರಸಸ್ಥಿತಿ ನೂತ್ನಮಿದಲ್ತೆ?
> ನೂತನಂ
> ಪದರಚನಾ ವಿಲಾಸಮಿದು, ಕಬ್ಬಂ ಅಪೂರ್ವಮಿದೆಂದು
> ಕಬ್ಬಿಗರ್
> ಪದೆದು ಒಲವಿಂದೆ ಕೀರ್ತಿಸೆ, ನಿಮಿರ್ಚುವೆನೀಸುಭಗ
> ಪ್ರಬಂಧಮಂ

ಪಂಪನಿಂದ ಮುದ್ದಣನವರೆಗೆ ನಮ್ಮ ಹಿಂದಿನ ಕವಿಗಳು ಯಾವಯಾವ ದೃಷ್ಟಿಯಲ್ಲಿ ಪೊಸ ರೀತಿಯನ್ನೂ ಅಪೂರ್ವತೆಯನ್ನೂ ತೋರಿಸಿದ್ದಾರೆ ಎಂಬುದನ್ನು ಖಚಿತವಾಗಿ, ಬೆಲೆಗಟ್ಟಿ ಹೇಳುವ ಕಾರ್ಯವನ್ನು ನಮ್ಮ ವಿಮರ್ಶಕರು ಇನ್ನೂ ಮಾಡಬೇಕಾಗಿದೆ. ಈಗ ಬಂದಿರುವುದರಲ್ಲಿ ಮುಕ್ಕಾಲುಪಾಲು ಪ್ರಶಸ್ತಿಯೇ ಆಗಿದೆ. ಒಂದೆರಡು ಕಡೆಗಳಲ್ಲಿ ತೂಕದ ವಿಮರ್ಶೆ ಬಂದಿದ್ದರೂ, ಕಾವ್ಯಗುಣದಲ್ಲಿ ಆಯಾ ಕವಿಗಳ ಸ್ಥಾನ ನಿರ್ದೇಶಮಾಡಿ ತೋರಿಸುವುದು ಅಗತ್ಯವಿದೆ. ಅದಕ್ಕೆ ತಕ್ಕ ವಾತಾವರಣ ನಿರ್ಮಾಣವಾಗಿಲ್ಲ ಎಂದು ಕೆಲವರು ಹೇಳುತ್ತಾರೆ. ಹಾಗಾದರೆ, ಅದು ಎಂದು ನಿರ್ಮಾಣವಾಗಬೇಕು?

ಹಳಗನ್ನಡ ಕಾವ್ಯಗಳ ಬಗ್ಗೆಯೇ ಈ ಸ್ಥಿತಿಯಾದರೆ ಹೊಸಗನ್ನಡ ಕವಿತಾವಿಮರ್ಶೆಯ ಗತಿಯೇನು? ಈ ಇಕ್ಕಟ್ಟಿನಿಂದ ಕನ್ನಡ ವಿಮರ್ಶೆ ಪಾರಾಗಿ ಬದುಕುವ ಬಗೆ ಹೇಗೆ? ಇದು ಎಲ್ಲರೂ ಆಲೋಚಿಸಬೇಕಾದ ಇಂದಿನ ಒಂದು ಗಂಭೀರ ಪ್ರಶ್ನೆ ಎಂದು ನಾನು ಬಗೆದಿದ್ದೇನೆ.

ನಮ್ಮ ವಿಮರ್ಶಕರಲ್ಲಿ ಧೈರ್ಯ, ಓದುಗರಲ್ಲಿ ತಾಳ್ಮೆ, ಗುಣಾವಗುಣಗಳ ವಿವೇಕ, ರಸಾನುಭವಶಕ್ತಿ — ಇವುಗಳನ್ನು ಎಷ್ಟು ಅಪೇಕ್ಷಿಸಿದರೂ ಸಾಲದು. ಕಾವ್ಯದ ಜೊತೆಗೆ ವಿಮರ್ಶೆಯೂ ಬೆಳೆಯದಿದ್ದರೆ ನಿಜವಾದ ಪ್ರಗತಿ ಹೇಗೆ ಸಾಧ್ಯ? ಹಳಬರಲ್ಲಿಯ ಶಾಸ್ತ್ರಪರಿಣತಿ, ಹೊಸಬರಲ್ಲಿಯ ವಿನೂತನದೃಷ್ಟಿ ಇವೆರಡರ ಸಮನ್ವಯವನ್ನು ಸಾಧಿಸಿಕೊಂಡು ವಿಮರ್ಶೆ ಇಂದು ಮುಂದುವರೆಯಬೇಕಾಗಿದೆ. ಹೊಸಗನ್ನಡ ಸಾಹಿತ್ಯದ ಸಮಗ್ರ ವಿಮರ್ಶೆಯನ್ನು ಒಂದೆಡೆ ನೀಡಲು ಹವಣಿಸಿರುವ 'ನಡೆದು ಬಂದ ದಾರಿ'ಯ ಸಂಪುಟಗಳು – ಕೆಲವೊಂದು ಲೋಪದೋಷಗಳನ್ನು ಒಳಗೊಂಡು – ಈ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟಿವೆಯೆಂದು ಹೇಳಬಹುದು. I. A. Richards ಹೇಳಿರುವ, ವಿಮರ್ಶಕನಿಗಿರಬೇಕಾದ ಮೂರು ಮುಖ್ಯ ಅರ್ಹತೆಗಳನ್ನು ಇಲ್ಲಿ ನೆನೆಯಬಹುದು:

"He must be an adept at experiencing, without eccentricities, the state of mind relevent to the works of art he is judging. Secondly, he must be able to distinguish experiences from one another as regards their less superficial features. Thirdly, he must be a sound judge of values."

(ವಿಲಕ್ಷಣ ವೈಯಕ್ತಿಕ ಭಾವನೆಗಳಿಗೆ ಎಡೆಗೊಡದೆ, ತಾನು ವಿಮರ್ಶಿಸುತ್ತಿರುವ ಕಲಾಕೃತಿಗೆ ಸಂಬಂಧಿಸಿದ ಚಿತ್ತವೃತ್ತಿಯಲ್ಲಿ ತನ್ಮಯತೆಯನ್ನು ಪಡೆಯಬಲ್ಲ ಪ್ರಾವೀಣ್ಯ ಅವನಲ್ಲಿರಬೇಕು. ಎರಡನೆಯದಾಗಿ, ಅನುಭವಗಳಲ್ಲಿ ಆಳವಾದವು ಆಳವಲ್ಲದವು ಇವುಗಳನ್ನು ವಿವೇಚಿಸುವ ಸಾಮರ್ಥ್ಯವುಳ್ಳವನಾಗಿರಬೇಕು. ಮೂರನೆಯದಾಗಿ, ಜೀವನದ ಮೌಲ್ಯಗಳನ್ನು ಸಮರ್ಥವಾಗಿ ಪರಾಮರ್ಶಿಸಬಲ್ಲವನಾಗಿರಬೇಕು.)

## ೩

ಹಳಗನ್ನಡ ಕಾವ್ಯ ಕೊನೆಕೊನೆಯಲ್ಲಿ ಭಾವ, ಭಾಷೆ, ಕಾವ್ಯಪ್ರಕಾರಗಳಲ್ಲಿ ಅನುಕರಣೆಯ ಹಾದಿಯನ್ನೇ ತುಳಿದು, ನಿರ್ಜೀವವಾಗಿ, ಕನ್ನಡ ನಾಡಿನಲ್ಲಿ ಇನ್ನೇನು ಸಂಜೆ ಬಂದು ಸೇರಿತು ಎನ್ನುವ ಹೊತ್ತಿನಲ್ಲಿ, ಮುದ್ದಣನ ಹುಂಜ ಹೊಸಕಾಲದ ಅರುಣೋದಯವನ್ನು ಸೂಚಿಸಿ, ಸಾಹಸಿಗಳನ್ನು ಎಚ್ಚರಿಸಿತು. ಮುಂದೆ ಹೊಸ ರೀತಿಯ ಕಾವ್ಯಪ್ರಕಾರ ಅಲ್ಲಲ್ಲಿ ಕಾಣಿಸಿಕೊಂಡಿತು. ಬಿ. ಎಂ. ಶ್ರೀಕಂಠಯ್ಯನವರ 'ಇಂಗ್ಲೀಷ್ ಗೀತಗಳು' ಭಾವ, ಭಾಷೆ, ಛಂದಸ್ಸುಗಳಲ್ಲಿ ಇಂಥ ಹೊಸ ಮಾದರಿಯ ಕಾವ್ಯಕ್ಕೆ ಮಾರ್ಗದರ್ಶಕವಾಗಿ ಪರಿಣಮಿಸಿತು. 'ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲೀಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆದುಕೊಂಡವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ,' ಎಂಬ ಮಾತನ್ನು 'ಶ್ರೀ'ಯವರೇ 'ಅರಿಕೆ'ಯಲ್ಲಿ ತಿಳಿಸಿದ್ದಾರೆ. 'ಇಂಗ್ಲೀಷ್ ಗೀತ'ಗಳಿಗೆ ಸಲ್ಲಬೇಕಾದ ಹೆಚ್ಚಿನ ಮರ್ಯಾದೆಯನ್ನು ಸಲ್ಲಿಸಿಯೂ ಒಂದು ಮಾತನ್ನು ಹೇಳಬಹುದು. ನೂತನ ಭಾವಪ್ರಚೋದನೆಗೆ ಕೆಲವರು ಭಾವಿಸಿಕೊಂಡಿರುವಷ್ಟು ಆದೊಂದೇ ಕಾರಕವಾಯಿತು ಎನ್ನುವಂತಿಲ್ಲ. "'ಇಂಗ್ಲೀಷ್ ಗೀತಗಳ'ಲ್ಲಿ ಎಲ್ಲ ಅಂಗಗಳಿಂದಲೂ **ಪರಿಪೂರ್ಣ**ವಾದ ಹೊಸಗನ್ನಡ ಕಾವ್ಯ **ಸುಭದ್ರ**ವಾಗಿ **ಪ್ರತಿಷ್ಠಿ**ತವಾಯಿತು."[೧] ಎಂಬ ಮಾತು ಸ್ವಲ್ಪ ಹೆಚ್ಚಾಯಿತು ಎಂದು ತೋರುತ್ತದೆ. ಆದರೆ, "ಎಲ್ಲಕ್ಕೂ ಮಿಗಿಲಾಗಿ 'ಶ್ರೀ'ಯವರಿಂದ ಕನ್ನಡಕ್ಕೆ ಆದ ಪರಮೋಪಕಾರವೆಂದರೆ, 'ಇಂಗ್ಲೀಷ್ ಗೀತಗಳ'ಲ್ಲಿ ಛಂದಸ್ಸಿನ ಹೊಸದೊಂದು ಹೆದ್ದಾರಿಯನ್ನೇ ತೆರೆದದ್ದು; ಕನ್ನಡ ಕಾವ್ಯದ ಚರಿತ್ರೆಯಲ್ಲಿ ಅವರ ಹೆಸರು ಚಿರಸ್ಮರಣೀಯವಾಗಿ ನಿಲ್ಲುವುದು ಮುಖ್ಯವಾಗಿ ಇದರಿಂದ"[೨] ಎಂಬುದನ್ನು ನಾವು ಒಪ್ಪಲೇಬೇಕು.

ಹೀಗೆ ನಾಲ್ಕು ದಶಕಗಳ ಹಿಂದೆ ನವೋದಯವನ್ನು ಪಡೆದ ಆಧುನಿಕ ಕನ್ನಡ ಕಾವ್ಯ ತನ್ನ ಹಿಂದಿನ ಕಾವ್ಯಸಂಪ್ರದಾಯಕ್ಕಿಂತ ಎಲ್ಲ ದೃಷ್ಟಿಯಿಂದಲೂ ಹೊಸದಾಗಿರುವುದು ಸ್ಪಷ್ಟವಿದೆ. ವಸ್ತುವಿನಲ್ಲಿ–ಭಾವದಲ್ಲಿ, ರೂಪದಲ್ಲಿ–ರಚನೆಯಲ್ಲಿ, ಧಾಟಿಯಲ್ಲಿ–ಧೋರಣೆಯಲ್ಲಿ, ತಮ್ಮ ಭಾವಪ್ರಕಟನೆಗೆ ಹೊಸ ಹಾದಿಯನ್ನು ನಿರ್ಮಿಸಿಕೊಂಡರು ನಮ್ಮ ಹಿರಿಯ ತಲೆಮಾರಿನ ಕವಿಗಳು. ಹಳಗನ್ನಡ–ನಡುಗನ್ನಡ ಕಾವ್ಯದ ಸಾರವನ್ನೂ ಇವರು ಹೀರಿ

---

೧. 'ನಡೆದು ಬಂದದಾರಿ' ಭಾಗ ೧, ಪುಟ ೪೦.

೨. 'ಇಂಗ್ಲೀಷ್ ಗೀತಗಳ' ದ್ವಿತೀಯ ಪರಿಷ್ಕರಣಕೆ ಶ್ರೀ ತೀ. ನಂ. ಶ್ರೀಯವರು ಬರೆದ ಪ್ರಸ್ತಾವನೆ ಪುಟ ೪೨.

ಕೊಂಡವರಾಗಿದ್ದರು. ಇಂಗ್ಲಿಷ್ ರೋಮ್ಯಾಂಟಿಕ್ ಕವಿಗಳ ಕಾವ್ಯದಿಂದ ಇವರು ಪ್ರೇರಣೆಗೊಂಡಿದ್ದರೂ, ತಮ್ಮ ಸತ್ತ್ವವನ್ನು ಅದರಲ್ಲಿ ಉಡುಗಿಸಿಕೊಳ್ಳದೆ ನಮ್ಮ ನಾಡಿನ ಕಾವ್ಯಚೈತನ್ಯಕ್ಕೆ ಹೊಸ ನೀರೆರೆದು, ಪೋಷಿಸಿ, ಬೆಳೆಸಿ, ಹತ್ತು ದಿಕ್ಕಿನಲ್ಲಿಯೂ ಅದರ ಬೆಳಕನ್ನು ಹೊತ್ತಿಸಿದರು. ಜಾನಪದ ಗೀತೆಗಳ ಸಹಜಸೌಂದರ್ಯವನ್ನು ತಮ್ಮ ಕಾವ್ಯಕ್ಕೆ ಬಗ್ಗಿಸಿಕೊಂಡು, ಅಪೂರ್ವವಾದ ನಾದ, ಲಯ, ಮಾಧುರ್ಯವನ್ನು ಹೊರಹೊಮ್ಮಿಸಿದರು. ಪ್ರಕೃತಿ ಸೌಂದರ್ಯದ ರುದ್ರ-ರಮಣೀಯತೆ ಅದೇ ಶೈಲಿಯಲ್ಲಿ ಅವರ ಕಾವ್ಯದಲ್ಲಿ ಪ್ರತಿಫಲಿಸಿತು. ಅಂತರಂಗದ ಅನುಭವ, ಅನಿಸಿಕೆಗಳು ಈ ಕಾವ್ಯರೂಪದಲ್ಲಿ ಮೂರ್ತತ್ವವನ್ನು ಪಡೆದವು. ನಾಡು-ನುಡಿಗಳ ಅಭಿಮಾನ ಕಾವ್ಯದುದ್ದಕ್ಕೂ ಹರಿಯಿತು. ಭಾಷೆಯಲ್ಲಿ ಹೊಸ ಕಾವು, ವೇಗ ಹರಿದಾಡಿತು. ಸೃಷ್ಟಿಯಲ್ಲಿ ನಡೆಯುವ ತೀರ ಸಾಮಾನ್ಯ ಕ್ರಿಯೆಗಳಿಂದಲೂ ಕವಿಹೃದಯ ಸಂವೇದನೆಗೊಂಡು ಮಿಡಿಯಿತು. ಭಾವನಿಷ್ಠವಾಗಿ, ಆದರ್ಶನಿಷ್ಠವಾಗಿ ಹೊಸಮನೋಧರ್ಮದಲ್ಲಿ ಬೆಳೆದ ಆಧುನಿಕ ಕಾವ್ಯ ಸಾಮಾಜಿಕ ಪ್ರಜ್ಞೆಯನ್ನೂ ತಕ್ಕಮಟ್ಟಿಗೆ ಪಡೆದುಕೊಂಡಿತು. ಭಾವಗೀತೆಯಲ್ಲಿಯೂ ನಾನಾ ಪ್ರಯೋಗಗಳು ನಡೆದು ಹೊಸಗನ್ನಡ ಕವಿತೆ ಸಮೃದ್ಧಿಯನ್ನು ಪಡೆಯಿತು. ಹೀಗೆ ಮೂರು ದಶಕಗಳ ಕಾಲ ಕನ್ನಡ ಭಾವಪ್ರಧಾನಕಾವ್ಯ ವೈವಿಧ್ಯಪೂರ್ಣವಾಗಿ, ಸ್ವಾತಂತ್ರ್ಯ ಪೂರ್ವದ ಸಮರೋತ್ಸಾಹದ ಜೊತೆಯಲ್ಲಿಯೇ ಬೆಳೆದು, ನಮ್ಮ ನಾಡಿನ ಆಶೆ, ಆಕಾಂಕ್ಷೆ, ಆದರ್ಶಗಳಿಗೆ, ಜನದ ಬದುಕಿನ ನೋವು ನಲಿವುಗಳಿಗೆ, ಒಲವು ಚೆಲವುಗಳಿಗೆ, ಪ್ರಕೃತಿಯ, ಆತ್ಮದ ಅನುಸಂಧಾನಕ್ಕೆ ಇಂಬುಗೊಟ್ಟು, ಹತ್ತಾರು ಉತ್ತಮ ಕವಿಗಳ ಕೈಯಲ್ಲಿ ತನ್ನ ಮೇಲ್ಮೆಯನ್ನೂ, ಸಿದ್ಧಿಯನ್ನೂ ಪಡೆಯಿತು. 'ಚಿರನೂತನ ಚೇತನದುತ್ಸಾಹದಿ ನವೀನ ಜೀವನ ಚಿಮ್ಮು' (ಕುವೆಂಪು) ವುದನ್ನು ಆಗ ಹೊರಟ ನೂರು ಸ್ವರಗಳಲ್ಲಿಯೂ ಗುರುತಿಸಬಹುದು. ಹೊಸಗನ್ನಡ ಕಾವ್ಯದ ಈ ವಸಂತ ವೈಭವಕ್ಕೂ ಬೇಂದ್ರೆಯವರ ಕಾವ್ಯವಾಣಿಯನ್ನು ನಾವು ಅನ್ವಯಿಸಬಹುದು :

ಉದಿತ ದಿನ! ಮುದಿತ ವನ
ವಿಧವಿಧ ವಿಹಗಸ್ವನ
ಇದುವೆ ಜೀವ, ಇದು ಜೀವನ
ಪವನದಂತೆ ಪಾವನ

ಏನೊ ವಿಧ! ಏನೊ ಹದ
ಗಾಳಿಗೊಡೆದ ಬುದ್ಬುದ
ಬೆಳಕೆ ಬದುಕು ಎಂಬ ಮುದ
ಜೀವ ಹೊಮ್ಮಿ ಚಿಮ್ಮಿದ

ನೂರು ಮರ! ನೂರು ಸ್ವರ
ಒಂದೊಂದೂ ಅತಿಮಧುರ
ಬಂಧವಿರದೆ ಬಂಧುರ
ಸ್ವಚ್ಛಂದ-ಸುಂದರ

ಮೂರನೆಯ ದಶಕದ ಕೊನೆಯಲ್ಲಿಯೇ ಈ ಸಂಪ್ರದಾಯದ ಇಳಿಗಾಲ ಪ್ರಾರಂಭವಾಯಿತೆನ್ನಬಹುದು. ವೈಯಕ್ತಿಕವಾಗಿ ತಮ್ಮ ವಿಶಿಷ್ಟ ಕಲಾತ್ಮಕತೆಯನ್ನು ಬೆಳಗಿದ ಕೆಲವು ಕವಿಗಳನ್ನು ಬಿಟ್ಟರೆ, ಉಳಿದ ಬಹುಪಾಲು ಕವಿತೆ ಹೇಳಿದ್ದನ್ನೇ ಹೇಳುವುದರಲ್ಲಿ ಮಗ್ನವಾಯಿತು. ಭಾವಾತಿರೇಕತೆ ಉಳಿದ ಎಲ್ಲ ಗುಣಗಳನ್ನೂ ನುಂಗಿ ನೀರು ಕುಡಿಯಿತು. ಕೆಲವೊಂದು ವಿಶಿಷ್ಟ ಅನುಭವಗಳನ್ನು ಮಾತ್ರ ಈ ಕಾವ್ಯ ರೂಪದಲ್ಲಿ ಹೊಂದಿಸಿಕೊಂಡದ್ದರಿಂದ ಜೀವನದ ಸಮಗ್ರ ಅನುಭವವನ್ನು ಇದರಲ್ಲಿ ಪ್ರತಿಬಿಂಬಿಸುವದು ಆಗಲಿಲ್ಲ. ಭಾವ-ಭಾಷೆಗಳಲ್ಲಿಯ ನಿಸ್ಸತ್ವದಿಂದ ಬೇರೊಂದು ದಾರಿಯನ್ನು ಹುಡುಕಬೇಕಾಯಿತು. ಸ್ವಾತಂತ್ರ್ಯೋತ್ತರ ಕಾಲದ ಬದಲಾದ ಪರಿಸ್ಥಿತಿಯಲ್ಲಿ ಸಮಸ್ಯೆಗಳನ್ನು ಹೊಸ ರೀತಿಯಲ್ಲಿಯೇ ಎದುರಿಸಬೇಕಾಯಿತು. ವಾಸ್ತವತೆಯನ್ನು ಎದುರಿಸಿ ನಿಲ್ಲುವ ಕೆಚ್ಚು ಭಾವಗೀತೆಗೆ ಬರಲಿಲ್ಲ. ಇಂದಿನ ವೈಚಾರಿಕಯುಗದ ವಾಣಿಯಾಗಲು ಅದು ಅಸಮರ್ಥವಾಯಿತು. ಪ್ರಗತಿಶೀಲತೆಯ ಗಾಳಿಯೇನೊ ಬೀಸಿ ಹೋದರೂ, ಕಾವ್ಯದ ಪ್ರಗತಿಯ ಕಡೆಗೆ ಕವಿಗಳ ಲಕ್ಷ್ಯ ಹರಿಯಲಿಲ್ಲ. ತನ್ನ ಕಾರ್ಯವನ್ನು ಮಾಡಿ ಮುಗಿಸಿದ ಆಧುನಿಕ ಕಾವ್ಯಮಾರ್ಗದ ದೋಷಗಳೂ ಹೀಗೆ ಕಣ್ಣಿಗೆ ಬಡಿಯುವಂತಾಗಿ, ಹೊಸ ರೂಪ, ರಚನೆ, ವಿಧಾನ ಗತ್ತುಗಳಲ್ಲಿ ಕಾವ್ಯ ತನ್ನತನವನ್ನು ಕಂಡುಕೊಳ್ಳುವಂತೆ ಹವಣಿಸಲು ಈ ಹಾದಿಯಲ್ಲಿಯೇ ವಿಚಾರ ಮಾಡುತ್ತಿದ್ದ ಕೆಲವು ಕವಿಗಳು ಮುಂದಾದರು.

೩

ನವ್ಯಕಾವ್ಯದ ಬಗ್ಗೆ ನಮ್ಮಲ್ಲಿ ವಿಚಾರ ಪ್ರಾರಂಭವಾಗಿ ಆಗಲೇ ಒಂದು ದಶಕವಾಗುತ್ತ ಬಂದಿತು. ಆ ದಿಸೆಯಲ್ಲಿ ಹಲವಾರು ಪ್ರಯೋಗಗಳೂ ಈಗಾಗಲೆ ಜನರ

ಕಣ್ಣೆದುರು ಬಂದಿವೆ. ಆದರೂ ಸಾಮಾನ್ಯ ಓದುಗರಲ್ಲಿ ಅದರ ಬಗ್ಗೆ ಸ್ಪಷ್ಟವಾದ ಕಲ್ಪನೆ ಮೂಡಿದಂತಿಲ್ಲ. ನವ್ಯ ಕಾವ್ಯದ ಲಕ್ಷಣಗಳನ್ನೂ ಈಗ ಅದರ ಅಗತ್ಯವನ್ನೂ ಕುರಿತು ಅಲ್ಲಲ್ಲಿ ಅಭಿಪ್ರಾಯಗಳು ವ್ಯಕ್ತಪಟ್ಟಿವೆಯಾದರೂ, ನವ್ಯಕಾವ್ಯದ ಪುರಸ್ಕರ್ತರಲ್ಲಿ ಇಬ್ಬರು ಪ್ರಮುಖರ ವಿಚಾರಗಳನ್ನು ಇಲ್ಲಿ ಸ್ವಲ್ಪಮಟ್ಟಿಗೆ ಪರಿಶೀಲಿಸಬಹುದು. ೧೯೫೦ ರ ಮುಂಬಯಿ ಸಾಹಿತ್ಯ ಸಮ್ಮೇಲನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷಭಾಷಣದಲ್ಲಿ ಶ್ರೀ ವಿ. ಕೃ. ಗೋಕಾಕರು ನವ್ಯಕಾವ್ಯದ ನೂತನ ಮಾರ್ಗವನ್ನು ಕುರಿತು ಹೀಗೆ ಪ್ರತಿಪಾದಿಸಿದರು :

"ಕನ್ನಡ ಕಾವ್ಯದಲ್ಲಿ 'ಆಧುನಿಕ' ಯುಗವು ಮುಗಿಯುವ ಸಮಯ ಬಂದಿದೆ ; ನವ್ಯಯುಗ ಪ್ರಾರಂಭವಾಗಲಿದೆ..... ಒಂದು ಪರಂಪರೆಯು ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ, ಕಾಂತಿಯೂ ಬರುವುದು ಕಠಿನ..... ನವೀನ ಪರಿಸ್ಥಿತಿಯೂ ಕನ್ನಡ ಕಾವ್ಯದಲ್ಲಿಯ ಒಂದು ಪರಂಪರೆಯ ಕೃತಕೃತ್ಯತೆಯೂ ನವ್ಯಕಾವ್ಯದ ಅಗತ್ಯವನ್ನು ಸೂಚಿಸುತ್ತವೆ". ನವ್ಯಮಾರ್ಗದ ಕಾವ್ಯಾಂಗಗಳನ್ನು ವಿವರಿಸುತ್ತ ಆಂಗ್ಲಕಾವ್ಯದಲ್ಲಿಯ ನವ್ಯಪದ್ಧತಿಯನ್ನು ಗಮನದಲ್ಲಿರಿಸಿಕೊಂಡು ಅವರು ಹೇಳಿರುವ ಮುಖ್ಯ ಮಾತುಗಳಿವು: "ನವ್ಯ ಕವಿಯು ಕಾವ್ಯ ವಸ್ತುವನ್ನು ಹೃದಯದಿಂದಲೂ ಬುದ್ಧಿಯಿಂದಲೂ ಕೂಡಿಯೆ ಭೇದಿಸುತ್ತಾನೆ. ತನ್ನ ವ್ಯಕ್ತಿತ್ವವನ್ನು ಕಾವ್ಯವಸ್ತುವಿನ ಪ್ರತೀತಿಯಲ್ಲಿ ನವ್ಯಕವಿ ಕರಗಿಸಿಬಿಡುತ್ತಾನೆ. ಅಂತರಿಕತೆಯೂ ವಸ್ತುನಿಷ್ಠತೆಯೂ ಉಚಿತವಾಗಿ ನವ್ಯ ಕಾವ್ಯದಲ್ಲಿ ಬೆರೆತುಕೊಂಡಿರುತ್ತವೆ. ಸ್ವಪ್ನತಂತ್ರ ಇದರ ವಿಶೇಷ ನಿರೂಪಣೆ. ವಾಸ್ತವಿಕವಾದ ಪ್ರತಿಮೆಗಳಲ್ಲಿ ಐಂದ್ರಿಯಕ ಅನುಭವ ಮನದಟ್ಟಾಗುವಂತೆ ಮಾಡುವದೂ, ಹಾಗೂ ಪ್ರತಾನಿತ ಪ್ರಜ್ಞೆಗಳ ಮಟ್ಟದಲ್ಲಿ ಗುರುತಿಸಲು ಸಾಧ್ಯವಾದ ಸೂಕ್ಷ್ಮ ಪ್ರತಿಮೆಗಳು ಈ ಕಾವ್ಯದ ಚಿತ್ರಸೃಷ್ಟಿಯ ವೈಶಿಷ್ಟ್ಯ. ನವ್ಯಕಾವ್ಯದ ಶೈಲಿ ಸಂಯಮಯುಕ್ತ, ವಿಚಾರಿತರಮಣೀಯ, ಚಿಂತನಪರ. ಬಳಕೆಯ ಮಾತನ್ನು ನೇರವಾಗಿ ಕಾವ್ಯಭಾಷೆಯಾಗಿಸುವದು. ಒಂದು ಅನನ್ಯ ಅರ್ಥವನ್ನು ಸೂಚಿಸಲು ನವ್ಯಕವಿಯು ಒಮ್ಮೊಮ್ಮೆ ಅನ್ಯಕವಿಗಳ ಶಬ್ದಸಮುಚ್ಚಯ, ಪಡೆನುಡಿಗಳನ್ನು ಬಳಸಿಕೊಳ್ಳುವನು. ಪ್ರತಿಯೊಂದು ಕವನಕ್ಕೂ ಅನನ್ಯವಾದ ಒಂದು ಛಂದಃಶರೀರವಿರುತ್ತದೆ. ಒಂದು ವಿಶ್ವಮಾನವತೆಯು ನವ್ಯ ಕಾವ್ಯವನ್ನು ಪ್ರೇರಿಸುತ್ತದೆ. ಬರಿ ಶೂನ್ಯತಾವಾದವೇ ನವ್ಯತೆಯೆಂದಾಗಲಿ ಇಲ್ಲವೆ ಐಂದ್ರಿಯಕ ಜೀವನದ ವಿಕೃತಿಯನ್ನು ತೋರಿಸುವ ಚಿತ್ರಸೃಷ್ಟಿ ನೂತನತರ ಮಾರ್ಗವೆಂದಾಗಲಿ ನಾವು ತಿಳಿಯದಿರೋಣ. ಒಂದು ಕಾವ್ಯಮಾರ್ಗದ ನವ್ಯತೆಯು ಅದರ ವಿಶಾಲ ದರ್ಶನದಲ್ಲಿದೆ ; ವಿಕೃತಿಗಳ ಪ್ರದರ್ಶನದಲ್ಲಿಲ್ಲ". ಇವೆಲ್ಲ ಇದ್ದೂ ಅದರಲ್ಲಿ ಕಾವ್ಯಗುಣವೇ ಇರದಿದ್ದರೆ ಹೇಗೆ? ಎಂಬ ಪ್ರಶ್ನೆಯನ್ನು ನಾವಿಲ್ಲಿ ಎತ್ತಬಹುದು. ಅದಕ್ಕೆ ಗೋಕಾಕರು 'ನವ್ಯಧ್ವನಿ'ಯ ಮುನ್ನುಡಿಯಲ್ಲಿ ಉತ್ತರಿಸಿದ್ದಾರೆ ; "ಕಾವ್ಯಶೈಲಿಯ ಮೂಲಗುಣ ಅದರ ಮಾಂತ್ರಿಕತೆ, ಜೀವನವನ್ನು ಕಲೆಯಾಗಿ ಪಲ್ಲಟಿಸುವ ಪವಾಡ. ಇದಿಲ್ಲದೆ ಶೈಲಿಯು ನವ್ಯವಾಗಬಹುದು ; ಕಾವ್ಯವಾಗಲಾರದು".

ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು, ಇನ್ನೊಂದು ಘಟ್ಟ ಮೊದಲಾಗುತ್ತಿರುವುದನ್ನೂ, ಅದರ ರೂಪರೇಷೆಗಳನ್ನೂ ಸೂಚಿಸಿ, ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು, ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು, ಎಂದು ಶ್ರೀ ಗೋಪಾಲಕೃಷ್ಣ ಅಡಿಗರು ತಮ್ಮ 'ನಡೆದುಬಂದ ದಾರಿ' (೧೯೫೨) ಕವನ ಸಂಗ್ರಹದಲ್ಲಿ ಸಹೃದಯರಿಗೆ ನಿವೇದಿಸಿಕೊಂಡಿದ್ದಾರೆ. ತಾವು ಬರೆದ 'ಹಿಮಗಿರಿಯ ಕಂದರ'ದ ಮೇಲೆ ಇಲಿಯಟ್‌ನ 'ವೇಸ್ಟ್‌ಲ್ಯಾಂಡಿ'ನ ಪ್ರಭಾವವಿದೆ ಎಂಬುದನ್ನು ನಿರಾಕರಿಸಿ, "ಗೋಕಾಕರು ಬೊಂಬಾಯಿ ಸಮ್ಮೇಳನದಲ್ಲಿ ಆಡಿದ ಮಾತುಗಳು, ಅದೇ ನೇರದಲ್ಲಿ ಯೋಚನೆ ಮಾಡುತ್ತಿದ್ದ ನನಗೆ ಯುಕ್ತವೆನಿಸಿದವು ; ಅಷ್ಟು ಸತ್ಯ"[೧] ಎಂದು ನುಡಿದಿದ್ದಾರೆ. ನವ್ಯಕಾವ್ಯದ ಬಗ್ಗೆ, ಅದರ ತಂತ್ರದ ಬಗ್ಗೆ ಇವರಿಬ್ಬರ ಅಭಿಪ್ರಾಯಗಳಲ್ಲಿ ಸಾಕಷ್ಟು ಸಾಮ್ಯವಿದೆ. ಆದರೆ ಅವರಿಬ್ಬರ ಕಾವ್ಯಕೃತಿಗಳಲ್ಲಿ ಮಾತ್ರ ವಿಭಿನ್ನತೆ ಎದ್ದು ಕಾಣುತ್ತದೆ. ಈಗ ಅಡಿಗರ ವಿಚಾರಸರಣಿಯನ್ನೂ, ಅದಕ್ಕೆ ಅವರ ಸ್ಪಷ್ಟ ವಿವರಣೆಯನ್ನೂ ಹೀಗೆ ಸಂಗ್ರಹಿಸಬಹುದು :

"ಒಂದು ಸಂಪ್ರದಾಯದ ಸತ್ವ ತೀರಿತೆಂದರೆ, ಆ ಸಂಪ್ರದಾಯದಲ್ಲಿ ಇನ್ನುಮುಂದೆ ಉತ್ತಮ ಕಾವ್ಯ ಬರುವ ಸಂಭವ ಕಡಿಮೆ ಎಂಬಷ್ಟು ಅರ್ಥವಲ್ಲದೆ, ಆ ಸಂಪ್ರದಾಯ ಸತ್ವಶಾಲಿಯಾಗಿದ್ದಾಗ ಅದರಲ್ಲಿ ರಚಿತ

೧ 'ಪ್ರಜಾವಾಣಿ' ೨೦-೧-೧೯೫೭

ವಾದ ಉತ್ತಮ ಕೃತಿಗಳಿಗೆ ಈಗ ಬೆಲೆಯಿಲ್ಲ ಎಂದು ಅರ್ಥವಲ್ಲ . . . . . ಆದರೆ ಸದ್ಯಕ್ಕೆ ಇನ್ನೂ ಒಂದು ತಲೆಮಾರಿನ ತನಕವಾದರೂ ಉತ್ತಮ ಕಾವ್ಯ ರೋಮ್ಯಾಂಟಿಕ್ ಸಂಪ್ರದಾಯಕ್ಕೆ ತೀರ ವಿರುದ್ಧವಾದ ದಿಕ್ಕಿನಲ್ಲೇ ಹರಿದೀತು ಎಂದು ತೋರುತ್ತದೆ. ನವ್ಯ ಕಾವ್ಯದ ಹೊಸ ಪ್ರಯೋಗ ಈಗ ನಡೆಯುತ್ತಿರುವದು ಆಧುನಿಕ ಕನ್ನಡ ಕಾವ್ಯದ ತಳಹದಿಯ ಮೇಲೆಯೇ..... ಕಾಲಪರಿವರ್ತನೆಯ, ವಾತಾವರಣ ಭಿನ್ನತೆಯ, ದೃಷ್ಟ್ಯಂತರದ ಪ್ರತೀತಿಯೇ ಕಾವ್ಯದಲ್ಲಿ ನವ್ಯತೆಯ ಮೂಲ. ಪ್ರತಿಯೊಂದು ಕಾವ್ಯಮಾರ್ಗದಲ್ಲೂ ಅದರದರ ಗಂಡಾಂತರ ಇದ್ದೇ ಇರುತ್ತದೆ. ಆ ಮಾರ್ಗದಲ್ಲಿ ಸತ್ವವಿದ್ದಾಗ ಆ ಗಂಡಾಂತರಗಳನ್ನು ಮೆಟ್ಟಿನಿಂತು ಕೃತಿ ಕೃತಾರ್ಥವಾಗುತ್ತದೆ".

ರೋಮ್ಯಾಂಟಿಕ್ ಸಂಪ್ರದಾಯದ ಗುಣವಿಶೇಷಗಳನ್ನೂ ಅದರ ಸಿದ್ಧಿಗಳನ್ನೂ ಅವರು ಒಪ್ಪಿಕೊಂಡು, ಅದರ ಮಹತ್ತರವಾದ ದೋಷಗಳನ್ನು ಹೀಗೆ ಸೂಚಿಸಿದ್ದಾರೆ: "ಭಾವಾತಿರೇಕದ ವ್ಯರ್ಥ ಕೋಲಾಹಲ. ಅನುಭವಗಳನ್ನು ಅತಿ ಸರಳ ಮಾಡುವ ಮನಸ್ಸಿನ ಪಕ್ಷಪಾತ, ಶಬ್ದಜಾಲದ ಕಣ್ಣುಕಟ್ಟು; ಸಂಗೀತ ಪಾರವಶ್ಯದಿಂದ ಬರುವ ಗದ್ಯತ್ವ, ಅರ್ಥಶೂನ್ಯತೆ; ಸೋಗಿನ ಅಧ್ಯಾತ್ಮದ ಆತ್ಮವಂಚನೆ, ಪರವಂಚನೆಯ ಪ್ರಯತ್ನ; ಈ ಎಲ್ಲ ದೋಷಗಳೂ ಈ ಸಂಪ್ರದಾಯದ ಶಕ್ತಿಕುಗ್ಗಿ ಅದು ಜಡವಾದಾಗ ರೋಗಗಳಂತೆ ಪ್ರಬಲಿಸಿ ಕಾವ್ಯಸೃಷ್ಟಿಗೆ ಮಾರಕವಾಗುತ್ತವೆ."

"ಸ್ವಾತಂತ್ರ್ಯೋತ್ತರ ಭಾರತದ ವಾತಾವರಣದಲ್ಲಿ ಸಮೂಲ ಪರಿವರ್ತನೆ ಆಗಿದೆಯೆಂಬ ಮಾತನ್ನು ಇಲ್ಲಿ ನೆನಪಿನಲ್ಲಿಡಬೇಕು . . . . ಚಿಂತನೆ, ಸತತ ಪರಿಶ್ರಮ, ಈ ಗುಣಗಳ ಕಡೆಗೆ ದೇಶದ ಮನಸ್ಸು ತಿರುಗಿಸುತ್ತಿದೆ. ವರ್ತಮಾನಕಾಲದ ನಿರಾಶೆ, ನಿರುತ್ಸಾಹ, ದಿಗ್ಭ್ರಾಂತಿಗಳ, ಸಡಿಲು ಬಗೆಗಳ, ಚಿತ್ತವಿಕಲ್ಪದ ಚೌಕಟ್ಟಿನಲ್ಲಿ ಕಾವ್ಯ ಇಂದು ತನ್ನ ಜೀವನ ದರ್ಶನವನ್ನು ಧ್ವನಿಸಬೇಕಾಗಿದೆ . . . . . . ಇದು ಪ್ರಯೋಗದ ಕಾಲ; ಇನ್ನೊಂದು ನವೋದಯ ಕಾಲ. ಪರಂಪರೆಯ ಸಾರವನ್ನು ಆದಷ್ಟು ಒಳಗೊಂಡೇ ನವ್ಯಕಾವ್ಯ ಭವಿಷ್ಯದತ್ತ ಕೈಚಾಚ ಬಯಸುತ್ತದೆ. ಕಾವ್ಯವೂ ಒಂದು ಕಲೆ. ಹೇಳುವುದನ್ನು ಎಷ್ಟು ಸಂಗ್ರಹವಾಗಿ, ಎಷ್ಟು ಸೂಚ್ಯ ಧ್ವನಿಪೂರ್ಣವಾಗಿ ಕಾವ್ಯ ತನ್ನ ಪರಿಧಿಯೊಳಗೆ ಎಷ್ಟು ವೈವಿಧ್ಯವನ್ನು ಒಳಕೊಳ್ಳಬಹುದೋ ಅಷ್ಟನ್ನೂ ಒಳಕೊಂಡು ನವ್ಯಕಾವ್ಯ ರೂಪುಗೊಳ್ಳುವಂತೆ ತೋರುತ್ತದೆ. ಹೊಸ ಕಾಲದ ಹೊಸ ಅನುಭವ ಪ್ರಪಂಚದ ಅನಂತಕೋನಗಳನ್ನು ಕಾಣಬಲ್ಲ ಮನಸ್ಸಿನ ವಿಶಿಷ್ಟ ಕ್ರಿಯೆಗಳನ್ನು ಯಥಾವತ್ತಾಗಿ ಚಿತ್ರಿಸಲು ತಕ್ಕ ಹೊಸ ತಂತ್ರವನ್ನು ನವ್ಯಕಾವ್ಯ ರೂಪಿಸಿಕೊಳ್ಳದೆ ಗತ್ಯಂತರವಿಲ್ಲ . . . . ಇಂದಿನ ಜಗತ್ತಿನ ಸಮಸ್ಯೆಗಳು ಜಟಿಲ; ಕ್ಲಿಷ್ಟ. ಇಂದಿನ ಭಾವಗಳು ಭಾವಸಂಕರದ ಕಲಸು ಮೇಲೋಗರ. ಇಂದಿನ ಜ್ಞಾನಸಂಪತ್ತು ಅಪರಿಮಿತ ಎಂದು ಅರಿತವನಿಗೆ ಇಂದಿನ ಕಾವ್ಯವೂ ಜಟಿಲವಾದರೆ ಯಾವ ಆಶ್ಚರ್ಯವೂ ಆಗಲಾರದು."[೧]

ಈ ಮೇಲಿನ ವಿವರಣೆಯಿಂದ ನವ್ಯಕಾವ್ಯದ ಒಂದು ಸ್ಪಷ್ಟ ಕಲ್ಪನೆ ತಮಗೆ ಆಗಿರಬಹುದಾಗಿ ಭಾವಿಸುತ್ತೇನೆ. ಆದರೆ ಒಂದು ಮಾತು ಮಾತ್ರ ನಿಜ; ಸಾಮಾನ್ಯ ವಾಚಕರ ದೃಷ್ಟಿಯಲ್ಲಿ ಈ ಪರಿವರ್ತನೆ ಒಂದು ಅನಾವಶ್ಯಕ ಗೊಂದಲವಾಗಿ ತೋರಿದರೆ ಆಶ್ಚರ್ಯವಿಲ್ಲ. ಅಲ್ಲದೆ, ಇವರು ತಿಳಿದುಕೊಂಡಿರುವಷ್ಟು ಭಾವನಿಷ್ಠ ಕಾವ್ಯ ಸಂಪ್ರದಾಯ ('ರಸ ಸಂಪ್ರದಾಯ' ಎಂದು ಇದಕ್ಕೆ ಇನ್ನೊಂದು ಹೆಸರನ್ನು ಶ್ರೀ ಗೌರೀಶ ಕಾಯ್ಕಿಣಿಯವರು ಈಚೆಗೆ ಉಪಯೋಗಿಸಿದ್ದಾರೆ.) ಅತಿರೇಕಕ್ಕೆ ಹೋಗಿದೆಯೆ? ಅದನ್ನು ವಿರೋಧಿಸಿ ನಿಲ್ಲಲು ಇಷ್ಟೊಂದು ತೀವ್ರ ಪ್ರತಿಕ್ರಿಯೆಯ ಆವಶ್ಯಕತೆ ಇದೆಯೆ? ಎಂಬುದನ್ನು ಬೇಕಾದರೆ ಸಾವಧಾನವಾಗಿ ವಿಚಾರಿಸಬಹುದು. ಭಾವಗೀತೆಯ ಚರಣಗಳನ್ನೇ ಮೆಲುಕಾಡಿಸಿ ಸುಖಪಡೆಯುತ್ತಿರುವ ನಮ್ಮ ಓದುಗರು ಅದರ ಇಂಗಿತವನ್ನೇ ಇನ್ನೂ ಸಂಪೂರ್ಣ ಅರಗಿಸಿಕೊಳ್ಳದವರಾಗಿದ್ದಾರೆ. 'ಗರಿ'ಯಿಂದ 'ಮುಗಿಲ ಮಲ್ಲಿಗೆ'ಯ ವರೆಗೆ ವಿಪುಲವೂ ವೈವಿಧ್ಯಪೂರ್ಣವೂ ಆದ ಕಾವ್ಯಸೃಷ್ಟಿ ಮಾಡಿದ ಬೇಂದ್ರೆಯವರನ್ನು ಬರಿಯ ಲಾವಣಿ ಕವಿಗಳೆಂದೇ ಎಷ್ಟೋ ಜನ ಭಾವಿಸಿರುವುದುಂಟು ಈಗಲೂ. ಕುವೆಂಪು ಅವರ "ರಾಮಾಯಣ ದರ್ಶನ"ವನ್ನು ಓದದೆ, ಅರ್ಥಮಾಡಿಕೊಳ್ಳದೆ, ಗದ್ದುಗೆಯ ಮೇಲಿಟ್ಟು ಪೂಜೆ ಮಾಡುವವರೂ ಉಂಟು. ಪರಿಸ್ಥಿತಿ ಹೀಗಿರುವಾಗ, ನವ್ಯ ಪ್ರಯೋಗಗಳ ರಸಾನುಭವದತ್ತ ರಸಿಕರು ಸಾಕಷ್ಟು ಲಕ್ಷ್ಯ ವಹಿಸುತ್ತಿಲ್ಲ. ಅಲ್ಲದೆ, ಭಾವಗೀತೆಗಿದ್ದ ಗೇಯಗುಣ ಜನರ ಮನಸ್ಸನ್ನು ಆಕರ್ಷಿಸಿದಂತೆ ಆ

---

೧ 'ಕನ್ನಡ ಸಾಹಿತ್ಯ ಸಮೀಕ್ಷೆ' (೧೯೫೮) ಯಲ್ಲಿಯ ಅಡಿಗರಲೇಖನ—ಮೈಸೂರು ಕಲಾಕ್ಷೇತ್ರದ ಪ್ರಕಟನೆ.

ಪ್ರಚಾರಸೌಲಭ್ಯ ಈ ಹೊಸಕವಿತೆಗೆ ಇಲ್ಲ. ರೋಮ್ಯಾಂಟಿಕ್ ಕವಿಗಳು ಸಾಮಾನ್ಯ ಜನರಲ್ಲಿ ಕಾವ್ಯದ ಬಗ್ಗೆ ಪ್ರೀತಿ-ಅಭಿರುಚಿಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಈಗ ಒಮ್ಮೆಲೆ ಆ ಬಗ್ಗೆ ಅನಾಸ್ಥೆ ಉಂಟಾಗುವಂತಾಗಬಾರದು. ನವ್ಯಕಾವ್ಯ ಜನರ ಹೃದಯಗೋಚರವಾಗುವಂತೆ ಪ್ರಕಟಗೊಳ್ಳುವ ಬಗ್ಗೆ ನಮ್ಮ ಕವಿಗಳು ಕೊಂಚ ವಿಚಾರಿಸಿದರೆ ತಪ್ಪೇನಿಲ್ಲ. ರಸಿಕರನ್ನು ಕೆಲಮಟ್ಟಿಗಾದರೂ ಕವಿ ತನ್ನ ಕೈಯಲ್ಲಿ ತೆಗೆದುಕೊಂಡಿರಬೇಕಾಗುತ್ತದೆ. ಇವರಿಬ್ಬರ ಸಮಾನ ಬಾಂಧವ್ಯವನ್ನು ಹೇಗೆ ಉಂಟುಮಾಡಬೇಕೆಂಬುದು ಇಂದಿನ ಕಾವ್ಯದ ಒಂದು ಸಮಸ್ಯೆಯಾಗಿದೆ. ಆದರೆ ಓದುಗರ ಮಟ್ಟವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಕವಿ ತನ್ನ ಕೃತಿರಚನೆಗೆ ತೊಡಗಲಾರ. ಅವರವರ ಅಭಿರುಚಿ, ಸಂಸ್ಕಾರಗಳಿಗೆ ತಕ್ಕಂತೆ ಓದುಗರಲ್ಲಿಯೂ ಅವರವರ ಮಟ್ಟಗಳಿವೆ.[೧] ಕೆಲವೊಂದು ಮಟ್ಟದ ವಾಚಕರ ಗಮನ ಈಗ ನವ್ಯಕಾವ್ಯದತ್ತ ಹರಿದಿದೆಯೆನ್ನುವದರಲ್ಲಿ ಸಂಶಯವಿಲ್ಲ. ಅವರಲ್ಲಾದರೂ ಆ ಬಗ್ಗೆ ಪರಸ್ಪರ ಚರ್ಚೆ-ಸಂವಾದ-ವಾಚನ ಹೆಚ್ಚಾಗಿ ನಡೆದಷ್ಟೂ ಒಳ್ಳೆಯದು. ಓದುಗರ ತಿಳಿವಳಿಕೆಯೂ ತಿಳಿಯಾಗಿ, ಕವಿಗಳ ಕಲಾವಂತಿಕೆಯೂ ಒಂದು ಹದಕ್ಕೆ ಬಂದಾಗ, ಎಲ್ಲವೂ ಸರಿಹೋಗಬಹುದು ಎಂದು ಆಶಿಸೋಣ.

ಕವಿಗಳಲ್ಲಿಯೇ ನವ್ಯಕಾವ್ಯದ ಬಗ್ಗೆ ಉಂಟಾಗಿರುವ ಪ್ರತಿಕ್ರಿಯೆಯನ್ನೂ ಗಮನಿಸಬಹುದು. ಹಿರಿಯ ತಲೆಮಾರಿನ ಕವಿಗಳು ಸಾಮಾನ್ಯವಾಗಿ-ಒಬ್ಬಿಬ್ಬರನ್ನುಳಿದು-ನವ್ಯಕಾವ್ಯದ ಧೋರಣೆಯನ್ನು ವಿರೋಧಿಸುವವರೇ ಆಗಿದ್ದಾರೆ. ಕೆಲವರು ಅದರಲ್ಲಿ ಕೃತಿ-ವಿಕೃತಿ ಎರಡನ್ನೂ ಕಂಡಿದ್ದಾರೆ, ಹಾಗೂ ತಮ್ಮ ಪರಂಪರಾನುಗತಿಯಲ್ಲಿ ಮುಂದುವರಿದಿದ್ದಾರೆ. ಕೆಲವೊಂದು ನವ್ಯ ಕೃತಿಗಳಲ್ಲಿಯ ಲಯಗತಿಯನ್ನೂ ಲಯಶಿಲ್ಪವನ್ನೂ, ರಚನೆಯ ತಂತ್ರದಲ್ಲಿಯ ಹೊಸಮಾರ್ಗಗಳನ್ನೂ ಶಕ್ತಿಯನ್ನೂ ಮೆಚ್ಚಿಕೊಂಡರೂ, "ಇದರಲ್ಲಿ ಒಂದು ಪಂಗಡ ಸೌಂದರ್ಯದ ಬದಲು ವಿಕಾರದ ಕಡೆಗೆ, ಸಾಮರಸ್ಯಕ್ಕಿಂತ ವಿಷಮತೆಯ ಕಡೆಗೆ, ಶಾಂತಿ-ಸಮಾಧಾನಗಳಿಗಿಂತ ಉದ್ವೇಗದ ಕಡೆಗೆ, ತಿಳಿಗಿಂತ ಕದಡಿನ ಕಡೆಗೆ, ಸರಳತೆಗಿಂತ ಚಪಲತೆಯ ಕಡೆಗೆ, ಭಾವಾರ್ಥಗಳ ಏಕಸೂತ್ರತೆಗಿಂತ ಬಹುಗಮನದ ಕಡೆಗೆ, ನಾಟಕೀಯತೆ, ಅಣಕಗಳ ಕಡೆಗೆ ಓಲುತ್ತದೆ. ಒಂದು ಅಂಸಂತೃಪ್ತಿಯೂ, ಭಂಗವೂ ಇದರ ಮನಸ್ಸನ್ನು ಕಹಿ ಮಾಡಿಸಿದೆ. ನಿಜವಾದ ಲೋಕಾನುಭವವಿಲ್ಲದೆ ಈ ತಂತ್ರವನ್ನು ಬಳಸಿದವರಲ್ಲಿ ಬರಿಯ ಕೆಂಬೂತವೃತ್ತಿ ಕಾಣುತ್ತದೆ"[೨] ಎಂದು ಅಭಿಪ್ರಾಯ ಪಡುತ್ತಾರೆ. ತರುಣ ಕವಿಗಳಲ್ಲಿ ಕೆಲವರು ಭಾವಗೀತೆ ಹಾಗೂ ನವ್ಯಕವಿತೆ ಎರಡರ ಮಿತಿಯನ್ನೂ ಅರಿತುಕೊಂಡು ಅವುಗಳನ್ನು ಸಮನ್ವಯಗೊಳಿಸಲು ಯತ್ನಿಸುತ್ತ ಹೊಸಪಾಕವೊಂದನ್ನು ಸೃಷ್ಟಿಸುತ್ತಿದ್ದಾರೆ. ಈ ಮೊದಲು ಭಾವಪ್ರಧಾನ ಕಾವ್ಯದಲ್ಲಿ ಸಾಕಷ್ಟು ಕೃಷಿಗೈದು ಈಗ ನವ್ಯದ ಕಡೆಗೆ ಒಲಿದ ಕವಿಗಳ ಶೈಲಿಯಲ್ಲಿ ಸಹಜವಾಗಿಯೇ ಒಂದು ಹದ ಕಂಡುಬರುತ್ತಿದೆ. ಹೊಸಪೀಳಿಗೆಯ ಕವಿಗಳನ್ನು ನವ್ಯತೆ ಸಹಜವಾಗಿಯೇ ಆಕ್ರಮಿಸಿಕೊಂಡಿದೆ. ಅವರಲ್ಲೂ ಪರಸ್ಪರ ಪ್ರಭಾವದಿಂದ ಪ್ರಯೋಗಪ್ರಿಯತೆ ಕಂಡು ಬರುತ್ತಿದೆ.

ಅದೇನೇ ಇದ್ದರೂ, ಇಂದಿನ ಹೊಸ ಜಗತ್ತನ್ನು, ಅದರ ಎಲ್ಲ ಜಟಿಲತೆಯನ್ನು, ಕ್ಲಿಷ್ಟತೆಯನ್ನು, ವಿರೋಧಾಭಾಸವನ್ನು, ಅನುಭವದ ಸಂಕೀರ್ಣತೆಯನ್ನು ಆಧುನಿಕ ಮನುಷ್ಯನ ಅಂಜಿಕೆ, ನಿರಾಶೆಗಳನ್ನು ನವ್ಯಕವಿತೆ ನೈಜವಾಗಿ, ಪ್ರಾತಿನಿಧಿಕವಾಗಿ ಚಿತ್ರಿಸಬಲ್ಲುದು. ಇದೆಲ್ಲದರ ಭಾರವನ್ನು ಸರಿಯಾಗಿ ನಿರ್ವಹಿಸುವಂತೆ ಭಾಷೆಯಲ್ಲಿ ಹೊಸ ಜೀವವನ್ನು ತುಂಬಿ, ಅದನ್ನು ಹದನುಗೊಳಿಸಿ ಭಾವಾಭಿವ್ಯಕ್ತಿಗೆ ಯೋಗ್ಯ ಸಾಧನವಾಗುವಂತೆ ನವ್ಯಕವಿ ನೋಡಿಕೊಳ್ಳುತ್ತಾನೆ. ತನ್ನ ಅನುಭವಕ್ಕೆ ಬೇರೆ ಬಣ್ಣವನ್ನು ಬಳಿಯಲು ಹೋಗದೆ, ಅದಕ್ಕೆ ವಿವರಣೆಯನ್ನು ಕೊಡದೆ, ತಾತ್ವಿಕ ಮುಸುಕಿನಲ್ಲಿ ಮರೆಯಾಗಿಸದೆ, ತನ್ನತನದ ಕಲಾವಂತಿಕೆಯನ್ನು ಆದಷ್ಟು ಶುದ್ಧರೂಪದಲ್ಲಿ ಉಜ್ವಲವಾದ ಪ್ರತಿಮೆ, ಸಂಕೇತಗಳಲ್ಲಿ, ಧ್ವನಿಯ ಏರಿಳಿತದಲ್ಲಿ, ನಾಟಕೀಯತೆಯಿಂದ ತನ್ನದೇ ಆದ

---

೧ "The public thinks it chooses its authors; not at all; it is the artist who chooses his public; one is always worthy of the other . . . . scorn the vulgar public is to esteem certain individuals the more. Where is one to find them? It is only in the long sequence of time that they can of themselves make their choice, one here, another there, each of them solitary. Slowly, through successive generations is formed a public that is itself admirable." Andre Gide *Pretexts*, page 130.

೨ ವಿ. ಸೀ. 'ಹೆಜ್ಜೆಪಾಡು' ಮುನ್ನುಡಿ.

ಛಂದಸ್ಸಂಗೀತದಲ್ಲಿ ಪ್ರತ್ಯಕ್ಷಗೊಳಿಸುತ್ತಾನೆ. ಸಾಮಾಜಿಕ ಸಮಸ್ಯೆಗಳಲ್ಲಿ ಪೂರ್ಣ ಮುಳುಗೇಳದೆ ತನ್ನ ವ್ಯಕ್ತಿತ್ವದ ಅಂಚಿನಲ್ಲಿ ನಿಂತು ಮಾನವೀಯ ತಿಳಿವಳಿಕೆ, ಸಹಾನುಭೂತಿ ಸೂಕ್ಷ್ಮ ನಿರೀಕ್ಷಣೆಗಳಿಂದ ಅದನ್ನು ಅನುಭವಿಸಿ, ನಿರೂಪಿಸುತ್ತಾನೆ.೧

ನಮ್ಮ ರೋಮ್ಯಾಂಟಿಕ್ ಸಂಪ್ರದಾಯದ ಕವಿಗಳಲ್ಲಿ ಅತ್ಯುತ್ತಮರಾದ ಕೆಲವರು ಕೊಟ್ಟ ಹಾಗೆ ನಮ್ಮ ಇಂದಿನ ಸ್ಥಿತಿಗತಿಯ ನಿರ್ಣಾಯಕ ಪ್ರತಿಮೆಯನ್ನೂ ಕೊಡಬಲ್ಲ ಹಾಗೂ ನಾವು ಮುಂದೆ ಪಡೆಯಬಹುದಾದುದರ ಪ್ರವಾದೀ ಪ್ರತಿಮೆಯನ್ನೂ ಸೃಷ್ಟಿಸಬಲ್ಲ ಕವಿಯನ್ನು ನಾವೀಗ ಎದುರು ನೋಡುತ್ತಿದ್ದೇವೆ. ನಮ್ಮ ಬದುಕಿನ ಪ್ರವೃತ್ತಿಗಳ ಮೇಲೆ ತನ್ನ ಮುದ್ರೆಯನ್ನೊತ್ತಬಲ್ಲ ಹಾಗೂ ತನ್ನ ಒಳಗಣ್ಣಿನ ತೀಕ್ಷ್ಣತೆಯಿಂದ ಆ ಪ್ರವೃತ್ತಿಗಳನ್ನು ಬದಲಿಸಬಲ್ಲ ಕವಿತೆ ಇನ್ನು ಮುಂದೆ ಬರಬಹುದೆಂದು ಆಶಿಸುತ್ತೇವೆ. ಮುಂದಿನ ಹತ್ತು ವರ್ಷಗಳಲ್ಲಿ, ನಮ್ಮಲ್ಲಿ ಈಗ ನಡೆದಿರುವ ನವ್ಯಕಾವ್ಯದ ಪ್ರಯೋಗಕ್ಕೆ ಒಂದು ನಿಶ್ಚಿತ ಸ್ವರೂಪ ಬರಬಹುದಾದ್ದರಿಂದ ಅದರ ಬೆಲೆಯನ್ನು ಈಗಲೇ ಕಟ್ಟುವದು ಅಷ್ಟೊಂದು ಯೋಗ್ಯವಾಗಲಾರದು. ಎಲ್ಲ ಮಾರ್ಗದ ಕಾವ್ಯಕ್ಕೂ ಅದರದೇ ಆದ ಅಡೆತಡೆಗಳಿರುವದು ಸ್ವಾಭಾವಿಕ. ಒಂದು ಬಂಧನದಿಂದ ಬಿಡುಗಡೆ ಪಡೆದು ತನ್ನದೇ ಆದ ದಾರಿಯನ್ನೂ, ರೂಪವನ್ನೂ ಕಂಡುಕೊಳ್ಳುತ್ತಿರುವ ಕನ್ನಡ ನವ್ಯಕಾವ್ಯ ತನ್ನ ಮಾರ್ಗದ ಅಡ್ಡಿ ಆತಂಕಗಳನ್ನೂ ಎದುರಿಸಿ ಕಾಲಕ್ರಮೇಣ ಒಳ್ಳೆಯ ಕೃತಿಗಳನ್ನು ಕೊಡಬಲ್ಲುದು ಎನ್ನುವಲ್ಲಿ ಸಂದೇಹವಿಲ್ಲ.

### ೫

ಕನ್ನಡದ ಕಾವ್ಯಮಾರ್ಗವನ್ನು ಅವಲೋಕಿಸಿದರೆ ಅದು ಪರಂಪರೆಯಿಂದ ಪರಂಪರೆಗೆ ತನ್ನ ಜೀವರಸವನ್ನು ಹೊಯ್ಯುತ್ತಲೇ ಇರುವುದನ್ನು ಕಾಣಬಹುದು. ಒಂದು ಸಂಪ್ರದಾಯದ ಅವನತಿಯ ಕಾಲದಲ್ಲಿ ಹಾಗೂ ಮತ್ತೊಂದು ಸಂಪ್ರದಾಯ ಸ್ಥಿರವಾಗಿ ರೂಪುಗೊಳ್ಳುವ ಪೂರ್ವದಲ್ಲಿ ಆದರ ಗತಿ ಕೆಲಮಟ್ಟಿಗೆ ಕುಂಠಿತವಾದಂತೆ ಕಂಡುಬಂದರೂ, ಅದು ಮುಂದೆ ಅಲ್ಪಾವಕಾಶದಲ್ಲಿಯೇ ಹೊಸ ನೀರನ್ನು ತುಂಬಿಕೊಂಡು ಹೊಸ ರಭಸದಲ್ಲಿ ಮುಂದುವರಿಯುತ್ತ ಬಂದಿದೆ. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಪ್ರಕಟವಾಗಿರುವ ಕವನ ಸಂಗ್ರಹಗಳನ್ನು–ಅವು ಮೂವತ್ತಕ್ಕೂ ಮೇಲ್ಪಟ್ಟಿವೆ–ನವ್ಯ-ಅನವ್ಯ ಎನ್ನುವ ಧೋರಣೆಯನ್ನಿಟ್ಟುಕೊಳ್ಳದೆ, ಆಯಾ ಕಾವ್ಯಮಾರ್ಗದ ಹಿನ್ನೆಲೆಯಲ್ಲಿಯೇ ಅವುಗಳನ್ನು ಪರಿಶೀಲಿಸಲು ಇಲ್ಲಿ ಹವಣಿಸಿದ್ದೇನೆ. ಈ ಅವಧಿಯಲ್ಲಿ ಪ್ರಕಟವಾಗಿರುವ ಎಲ್ಲ ಕವನ ಸಂಗ್ರಹಗಳನ್ನೂ ಇಲ್ಲಿ ಒಳಗೊಂಡಿದೆಯೆಂದಾಗಲಿ, ಇಲ್ಲವೆ ಇಲ್ಲಿ ಹೇಳಿರುವ ಮಾತುಗಳು ಅವುಗಳ ಸಂಪೂರ್ಣ ವಿಮರ್ಶೆಯೆಂದಾಗಲಿ ಯಾರೂ ಭಾವಿಸಬಾರದು.

'ಅರಳು–ಮರಳಿ'ನ ನಂತರ ಬೇಂದ್ರೆಯವರ ನಾಲ್ಕು ಕವನ ಸಂಗ್ರಹಗಳು–'ನಮನ', 'ಸಂಚಯ', 'ಉತ್ತರಾಯಣ',–'ಮುಗಿಲ ಮಲ್ಲಿಗೆ'–ವರುಷಕ್ಕೊಂದರಂತೆ ಪ್ರಕಟವಾಗಿವೆ. ಈ ನಾಲ್ಕು ಸಂಗ್ರಹಗಳೂ ಅವರ ಉಳಿದ ಕವನ ಸಂಗ್ರಹಗಳಂತೆಯೇ ಸಂಕೀರ್ಣ ಸ್ವರೂಪದವಾಗಿವೆ. ಬಹಳ ಪೂರ್ವದಲ್ಲಿಯೇ ಬರೆದ ಕವನಗಳ ಜೊತೆಗೆ ಹೊಚ್ಚ ಹೊಸ ಕವನಗಳೂ ಸೇರಿಕೊಂಡಿವೆ. 'ಸಂಚಯ' ದಲ್ಲಿ: 'ಮೂರು ಆರರ ಪ್ರಾಯದಲ್ಲಿಯೆ ಮೂಡಿದವು ನವಭಾವನೆ| ಆರು ಮೂರಕೆ ಮೋರೆ ತಿರುವಿರೆ ಉಣುವೆ ಅಂದಿನ ಕಾವನೆ' ಎಂದಿದ್ದಾರೆ. ಅಂತೆಯೇ ಅವರ ಕಾವ್ಯದ ಆಶಯ ಮೊದಲಿನಿಂದ ಕೊನೆಯವರೆಗೂ ಘಾರೆ ಹಿಡಿದಿದೆ. 'ಮುಗಿಲ ಮಲ್ಲಿಗೆ'ಯಲ್ಲಿ ರವೀಂದ್ರರಿಗೆ ಸಂಬಂಧಿಸಿದ ಅನೇಕ ಕವನಗಳು ಬಂದಿವೆ. ಆದರೂ ಅವು ಒಂದರಂತೆ ಒಂದಿಲ್ಲ. ಬೇಂದ್ರೆಯವರ ಸ್ವತಂತ್ರವಾದ ಕಾವ್ಯಶಕ್ತಿ ಅಪ್ರತಿಹತವಾಗಿರುವದೇ ಇದಕ್ಕೆ ಕಾರಣ. ಸಂವೇದನೆಯಲ್ಲಿ, ಅಭಿವ್ಯಕ್ತಿಯಲ್ಲಿ ಅದು ಎಂದಿನಂತೆ ಚೈತನ್ಯಪೂರ್ಣವಾಗಿಯೇ ಇದೆ. 'ಉತ್ತರಾಯಣ'ದ ನವೀನ ಕವನಗಳಲ್ಲಿ ಕೆಲಮಟ್ಟಿಗೆ ಶೈಥಿಲ್ಯವುಂಟಾಗಿರುವದರಿಂದ ಶಬ್ದಶ್ಲೇಷೆ ತನ್ನ ಮೊದಲಿನ ಕಾವನ್ನು ಕಳೆದುಕೊಂಡಿರುವಂತೆ

---

೧. "The business of poetry is not to simplify or to explain but to present . . . . What matters to the modern poet is the essential excitement, the exaltation and thrill which he finds, not a preconceived general notion of what the subjects of poetry are or not . . . . Their work in consequence may often be lacking in sweetness, but sweetness is not the only test of poetry. Modern poets have sometimes ventured into distressing and confused corners of experience because they hear in them the authentic call of the creative spirit . . . . The new poetry is not very succulent, but it is healthy"

C. M. Bowra "The Creative Experiment"

ಭಾಸವಾಗುತ್ತದೆ. ಬೆಂಕಿಯೊಳಗಿದ್ದ ಗುಣವನ್ನು ಬಿಸಿ ನೀರಿನಲ್ಲಿಯೂ ಬಯಸುವದು ತಪ್ಪಾದೀತು.

'ನವ್ಯಕವಿತೆಗಳು' ಸಂಗ್ರಹದಿಂದ ಮತ್ತೊಂದು ದಿಸೆಯಲ್ಲಿ ಓದುಗರಿಗೆ ಹೊಸ ಪ್ರಯೋಗಗಳ ರುಚಿಯನ್ನು ತೋರಿಸಿದ ವಿನಾಯಕರು (ವಿ. ಕೃ. ಗೋಕಾಕ) 'ಉಗಮ' ಮತ್ತು 'ದ್ಯಾವಾಪೃಥಿವಿ'ಗಳಲ್ಲಿ ತಮ್ಮ ಪ್ರತಿಮಾದೃಷ್ಟಿಗೆ ನವೀನ ರೂಪವನ್ನು ಕೊಟ್ಟು ನೋಡಿದ್ದಾರೆ. ಬಾನು ಬುವಿಗಳ ವಿಸ್ತಾರಕ್ಕೆ ಪ್ರಸ್ತಾರವನ್ನು ಬರೆದು, ಹಕ್ಕಿ ತನ್ನ ಗೂಡಿಗೆ ಮರಳಿ, ಮೊಟ್ಟೆಯ ಮೇಲೆ ಕಾವು ಕೂರುವಂತೆ ಇವರ ಕಾವ್ಯವಾಣಿ ಮತ್ತೆ ಮತ್ತೆ ಧ್ಯಾನಸ್ಥವಾಗುವುದನ್ನು ಮರೆತಿಲ್ಲ. 'ಊರ್ಣನಾಭ'ದಲ್ಲಿಯೂ ಅವರ ಚಿಂತನೆಯ ಹಂತ ಹಂತವನ್ನೂ, ತಂತು ತಂತುವನ್ನೂ ಎಣಿಸಬಹುದು. ಇವರ ಕವಿತೆಗಳಲ್ಲಿ, ವಿಚಾರದ ಹಂದರದ ಮೇಲೆ ಕಾವ್ಯದ ಬಳ್ಳಿ ಸೊಂಪಾಗಿ ಬೆಳೆಯದಿರುವದು ಒಮ್ಮೊಮ್ಮೆ ಕೊರತೆಯಾಗಿ ಕಂಡುಬಂದರೂ, ಇವರ ಕಾವ್ಯದ ಉದ್ದೇಶಕ್ಕೆ ಭಂಗಬರುವಂತೆ ತೋರುವುದಿಲ್ಲ. ವಸ್ತುವಿನಲ್ಲಿ ಹೊಸತನ ಸಾಕಷ್ಟಿದ್ದರೂ, ಅದು ಒಂದು ಶಿಸ್ತಿಗೆ ಒಳಪಟ್ಟು ಇವರ ಕಾವ್ಯದಲ್ಲಿ ರೂಪುಗೊಳ್ಳುತ್ತದೆ. ಆದುದರಿಂದ, ಅವರ ಕಾವ್ಯಶೈಲಿಯ ಚುರುಕು ಅಲ್ಲಲ್ಲಿ ತಟ್ಟಿದರೂ, ಓದುಗರನ್ನು ದಿಗ್ಭ್ರಮೆಗೊಳಿಸುವದಿಲ್ಲ.

'ಜೀವದ ಸರಪಣಿಯಿದು ಉದ್ದ, ಉದ್ದುದ್ದ', 'ಅಲ್ಲ ಕರುಣೆ ತಪತಪ ತೋಯಿಸುವ ಮಳೆ, ಅದಕಿದೆ ಬೇರೆ ಕಳೆ' 'ವ್ಯಕ್ತಿತ್ವದ ಉಗಮವಿಲ್ಲಿ,–ಸಾಸ-ಕರುಣೆ ಹೊಂದಿದಲ್ಲಿ' ಇವೇ ಮೊದಲಾದ ಸಾಲುಗಳಲ್ಲಿ ಅವರ ಕಾವ್ಯದ ಕಾಣ್ಕೆ ಸಹಜವಾಗಿ ಸೂಚಿತವಾಗುತ್ತದೆ. ಗಂಭೀರವಾದ ನಡಿಗೆ ಅವರ ಕಾವ್ಯಶೈಲಿಯ ಮತ್ತೊಂದು ಮುಖ:

"ಓರ್ವ ಬೆಂಗದಿರನನೆ ತಾನು ಸುತ್ತಿದರೂ
ಓರ್ವ ತಂಗದಿರನೆಡೆ ಕಣ್ಣನೆತ್ತಿದರೂ
ಬಾಳಿಹಳು ಕೋಟಿ ಚಂದ್ರರ ಕನಸು ಕಂಡು
ತಾಯಿ ಭೂದೇವಿ.
ಬೆಳೆದಿಹಳು ಕೋಟಿ ಸೂರ್ಯರ ನನಸನುಂಡು"

('ಭಾರತಿಯ ಕಾರ್ಯಗೌರವ')

'ನಲ್‌ವಾಡು'ಗಳಲ್ಲಿ ಆನಂದಕಂದರು ಸುಂದರವಾದ ಜಾನಪದ ಪ್ರೀತಿ ಗೀತಗಳನ್ನು ಅವುಗಳ ಸಹಜತೆ ಕೆಡದಂತೆ ಕೊಟ್ಟಿದ್ದಾರೆ. ಈ ದಿಸೆಯಲ್ಲಿ ಇವರಿಂದ ಇನ್ನೂ ಹೆಚ್ಚಿನ ಕಾಣಿಕೆಗಳನ್ನು ಅಪೇಕ್ಷಿಸಬಹುದಾಗಿದೆ. 'ನನ್ನ ಮನಸ್ಸು ದಿನ ಜೀವನಕ್ಕೆ ಮಣಿಯುತ್ತದೆ. ಇಲ್ಲಿನ ನೋವು, ನಿರಾಶೆ, ಪ್ರೀತಿ, ಔದಾರ್ಯ, ಸ್ನೇಹದ ನೆರವು, ಕಾರುಣ್ಯ ನನಗೆ ತುಂಬಾ ಪ್ರಿಯ' ಎಂಬುದಾಗಿ 'ಹೆಜ್ಜೆಪಾಡಿ'ವಿನಲ್ಲಿ ವೀ. ಸೀ. ಹೇಳಿಕೊಂಡಿದ್ದಾರೆ. ಜೊತೆಗೆ ರೂಪಾಂತರಗೊಂಡ ಭಾರತದ ಬದುಕು ಈ ಸಂಗ್ರಹದಲ್ಲಿ ಸ್ವಲ್ಪಮಟ್ಟಿಗೆ ಪ್ರತಿಬಿಂಬಿಸಿದೆ. ಈ ಸಂಗ್ರಹ 'ದ್ರಾಕ್ಷಿ ದಾಳಿಂಬೆ' ಗಿಂತ ಮುಂದಿನ ಹೆಜ್ಜೆಯಾದರೂ ಬರವಣಿಗೆ ಮೊದಲಿನಂತೆಯೇ ನೇರವಾದುದು. 'ನಮ್ಮ ಕವಿತೆಯನ್ನು ರೋಮ್ಯಾಂಟಿಕ್ ಎಂದು ಕರೆದು ಪ್ರೀತಿಯಿಲ್ಲದ ಮಾತನ್ನಾಡುವವರುಂಟು' ಎಂಬ ನೋವು ಅವರ ಮುನ್ನುಡಿಯ ಉದ್ದಕ್ಕೂ ಹರಿದಿದೆ. ಅವರವರ ದಾರಿಯ ಕಾಣ್ಕೆ ಅವರವರದು. ಆದುದರಿಂದ ಇಷ್ಟೊಂದು ಅಸಮಾಧಾನಕ್ಕೆ ಇಲ್ಲಿ ಕಾರಣವಿರಲಿಲ್ಲ ಎಂದು ತೋರುತ್ತದೆ. 'ಹೃದಯವಿಹಾರಿ' ಯಲ್ಲಿ ಪು. ತಿ. ನ. ಅವರು ಮೊದಲಿನ ವೇಷದಲ್ಲಿಯೇ ಹಲವು ಹಾಡುಗಳನ್ನೂ ಕವನಗಳನ್ನೂ ಕೊಟ್ಟಿದ್ದಾರೆ. ಅವರದೇ ಆದ ಗೀತಗುಣ ಇವುಗಳಲ್ಲಿ ಅಲ್ಲಲ್ಲಿ ಕಂಡುಬರುತ್ತಿದ್ದರೂ, ಬಣ್ಣಗಾರಿಕೆಯಲ್ಲಿ ಹಿಂದೆ ಬಿದ್ದು ಒಂದು ರೀತಿ ಜಡವಾಗಿದೆ. 'ಆ ಮರ' ಎಂಬ ಕವಿತೆಯ ಛಂದದಲ್ಲಿ ಇವರು ತಮ್ಮ ಕವನಗಳ ಇನ್ನು ಮುಂದಿನ ಮುಂಬರಿವನ್ನು ಸೂಚಿಸಿದ್ದಾರೆ. ಬಹುಶಃ ಓದುಗರೂ ಅದನ್ನೇ ಅಪೇಕ್ಷಿಸಿಯಾರು. ದಿನಕರ ದೇಸಾಯಿಯವರ 'ಭತ್ತದ ತೆನೆ' ಯ ಬಿಡಿಗವಿತೆಗಳು ಹುಲುಸಾಗಿವೆ. ಸಾಮಾಜಿಕ ರಾಜಕೀಯ ಜೀವನದ ಅವರ ವಿಡಂಬನೆ ಭತ್ತದ ಕವಚದಂತೆಯೇ ಚೂಪಾಗಿದ್ದರೂ ಅದರಲ್ಲಿ ಬಾಳಿಗೆ ಅನ್ನವನ್ನೊದಗಿಸಬಲ್ಲ ಉತ್ತರ ಕನ್ನಡ ಜಿಲ್ಲೆಯ 'ಹಳಗನ' ಅಕ್ಕಿ ಇದೆ.

ಯಸ್. ವೆಂಕಟರಾಜರ 'ಮಾನಸ ಗಂಗೆ' ಅವರ ಕಾವ್ಯರಚನಾ ವೈಪುಲ್ಯವನ್ನು ಎತ್ತಿತೋರಿಸುತ್ತದೆ. ಇಲ್ಲಿಯ ಕವನಗಳ ಛಂದಸ್ಸು ಗತಾನುಗತಿಕವಾಗಿದ್ದರೂ, ಭಾವದ ಒತ್ತಡ ಸಾಕಷ್ಟಿದೆ. 'ಎನಿತೊ ಪದರಿನ ಹೊದಿಕೆಯಲಿ ಬಚ್ಚಿಟ್ಟ ಬದುಕಿನ ಮಾಣಿಕ' ಅವರ ಕವನಗಳಲ್ಲಿ ಅಲ್ಲಲ್ಲಿ ಹೊಳೆಯುತ್ತದೆ. 'ಮಾನಸ ಸರೋವರ' ಕಾವ್ಯಾನಂದರ (ಸಿದ್ಧಯ್ಯ ಪುರಾಣಿಕ) ಹಲವಾರು ಕಾವ್ಯಗುಣಗಳಿಗೆ ಕನ್ನಡಿ ಹಿಡಿದಿದೆ. ಅವರ ಸ್ವತಂತ್ರವಾದ ಕಲ್ಪನಾಶಕ್ತಿ ಹಿಂದಿನ ಎರಡು ಕವನ ಸಂಗ್ರಹಗಳಂತೆ ಇಲ್ಲಿಯೂ ತೀವ್ರತೆಯನ್ನು ಪಡೆದಿದೆ. ಇವರ ಶಬ್ದಸಂಪತ್ತು ಅದ್ಭುತವಾದುದು. ಆದರೆ ಅದರ ಬಳಕೆಯಲ್ಲಿ ಅಷ್ಟೇ ಹಿತ-ಮಿತವನ್ನು ಸಾಧಿಸುವದು ಅಗತ್ಯ. ಇವರ ಕವನಗಳಲ್ಲಿ 'ಎಲ್ಲೊ ಒಂದೆಡೆ ಭಾವ

ಬುದ್ಧಿಯು ಹಸೆಗೆ ನಿಲ್ಲುವ ಹಾಗಿದೆ'–ಆಗಿನ ಸಂದರ್ಭಗಳಲ್ಲಿ ಅದಕ್ಕೆ ಇನ್ನಿಲ್ಲದ ಸೌಂದರ್ಯವೂ ಅರ್ಥವಂತಿಕೆಯೂ ಒದಗಿರುತ್ತವೆ. ಬಿ. ಎಚ್. ಶ್ರೀಧರರ 'ಮಂಜುಗೀತ'ದಲ್ಲಿ ಇಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಎಲ್ಲ ವಿಷಯಗಳ ಸಂವೇದನೆ ತುಂಬಿಕೊಂಡಿದ್ದರೂ, ಅವರು ಉಪಯೋಗಿಸುವ ನಾನಾ ಬಗೆಯ ಶೈಲಿಗಳು ಮೂಲ ವಿಗ್ರಹವನ್ನು ಮರೆಮಾಡಿಬಿಡುತ್ತವೆ. ಕಯ್ಯಾರ ಕಿಞ್ಞಣ್ಣರೈ ಅವರ 'ಪುನರ್ನವ' ಅವರ ಹಿಂದಿನ ಸಂಕಲನಗಳ ಮಾದರಿಯಲ್ಲಿಯೇ ಇದ್ದು, ಹೆಚ್ಚಿನ ಪ್ರಗತಿಯನ್ನು ಕಂಡುಕೊಂಡಿಲ್ಲ.

ಕೆ. ಎಸ್. ನರಸಿಂಹಸ್ವಾಮಿಯವರ ಇಂದಿನ ಕಾವ್ಯರಚನೆ ಹೆಚ್ಚಿನ ವಿಸ್ತಾರವನ್ನೂ, ಶಕ್ತಿಯನ್ನೂ ಒಳಗೊಳ್ಳುತ್ತಿದೆ. ಅದು ತನ್ನ ಮೊದಲಿನ ಚಲುವಿನ ನಿಲವನ್ನು ಕಳೆದುಕೊಳ್ಳದೆ, ಕಲಾಕೌಶಲ್ಯದಲ್ಲಿ ಒಂದಿಷ್ಟೂ ಮರವೆಯನ್ನೂ ತೋರ್ಪಡಿಸದೆ, ಹೊಸ ಬದುಕಿನ ಹದಕ್ಕೆ ಸರಿಯಾಗಿ, ಭಾಷೆ, ನುಡಿಕಟ್ಟನ್ನು ಕಲಾತ್ಮಕವಾಗಿ ಬಳಸಿಕೊಂಡು ಮುಂದುವರಿಯುತ್ತಿದೆ. 'ಶಿಲಾಲತೆ,' 'ಮನೆಯಿಂದ ಮನೆಗೆ' ಸಂಗ್ರಹದಲ್ಲಿಯ ಕೆಲವು ಕವಿತೆಗಳು ಅವರ ಹೊಸ ಮನೋಧರ್ಮವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ. 'ಪದ ಪದಕವಿಲ್ಲ, ತಲೆ ಭಾರವಿಲ್ಲ, ನಿಮ್ಮುಸಿರು ನನ್ನ ಕವಿತೆ' ಎಂಬ ಅವರ ಮಾತು ಸತ್ಯಪೂರ್ಣವಾಗಿದೆ. 'ಇಹದ ತಳಹದಿಯಿಂದ ದಿಟದ ದರ್ಶನವರಳಿ ಹಂಬಲಿಸಿ ಹಾಡಾಗಬೇಕು' ಎಂಬ ಅವರ ಪ್ರಾಮಾಣಿಕ ದರ್ಶನ ವಿಚಾರವಂತಿಕೆಯ ಬೆಳವಣಿಗೆಯಿಂದ ಕೂಡಿದೆ. "ಆದರೆ, ಅವರ ಅನುಭವ ತೆಳು, ಪರಿಮಿತ. ಆದಕ್ಕೆ ವ್ಯಾಪ್ತಿಯಿಲ್ಲ. ಜೀವನದ ಮೇಲೆಯೇ ತೇಲುವ ಕವಿ ಅವರು. ಬಾಳಿನೊಳಹೊಕ್ಕು ಆಳವನ್ನು ನೋಡುವ ಕಣ್ಣು ಅವರಿಗಿಲ್ಲ" (ಅಡಿಗ) ಎಂಬ ಅಭಿಪ್ರಾಯದ ಪುನರ್ವಿಮರ್ಶೆಗೆ ಈ ಎರಡು ಸಂಗ್ರಹಗಳು ಸ್ವಲ್ಪಮಟ್ಟಿಗೆ ಅವಕಾಶವೀಯುಬಹುದಾಗಿದೆ. ನರಸಿಂಹಸ್ವಾಮಿಯವರು ಜೀವನವನ್ನು ನೋಡುವದೃಷ್ಟಿ 'ನಾ ಕಂಡ ಕವನ' ದಲ್ಲಿ ಸುವ್ಯಕ್ತವಾಗಿದೆ. ಅದರ ಕೊನೆಯ ನುಡಿ ಇದು:

'ಹಾವಿಗೆಷ್ಟು ಸುಖ, ಹಕ್ಕಿಗಷ್ಟೆ ಸುಖ, ವೇಷ
ಹುಲಿಯ ತೊಗಲು
ಸುಖದುಃಖದಂಚು; ಸಂತೋಷಮಿಂಚು; ಅಲ್ಲಿರಲು
ಕಪ್ಪುಮುಗಿಲು
ಕಡೆಗೆಲ್ಲ ಕರಗಿ ಉಳಿದೀತು ಗಗನ, ಎಲೆಲ್ಲು ನೀಲಗಗನ;
ಏನೇನು ನಡೆದರೂ ಅದರ ಕೆಳಗೆ ಇದು ನಾನು ಕಂಡ
ಕವನ.'

ಕಳೆದ ಏಳೆಂಟು ವರ್ಷಗಳಿಂದ ನವ್ಯಕಾವ್ಯಮಾರ್ಗದಲ್ಲಿ ಅತ್ಯಂತ ಶ್ರದ್ಧೆಯಿಂದ ಕಾವ್ಯರಚನೆಗೆ ತೊಡಗಿರುವ ಗೋಪಾಲಕೃಷ್ಣ ಅಡಿಗರು ಅನನ್ಯವಾದ ರೀತಿಯಲ್ಲಿ ಕೃತಿನಿರ್ಮಾಣ ಕಾರ್ಯವನ್ನು ಮಾಡಿದ್ದಾರೆ. 'ಚಂಡಮದ್ದಳೆಯ'ಯ ನಂತರ ಬಂದಿರುವ 'ಭೂಮಿಗೀತ' ಮಹತ್ತರವಾದ ಸಾಧನೆಯು ಪ್ರತೀಕವಾಗಿದೆ. ನವ್ಯಕಾವ್ಯದ ಬಗೆ ಅವರು ಆಡಿರುವ ಮಾತುಗಳಲ್ಲಿಯೂ ಅವರ ಈ 'ಕೃತಿ'ಗಳಲ್ಲಿಯೂ ಇರುವ ಅಪೂರ್ವ ಹೊಂದಾಣಿಕೆ "ಇವರ ಕಾವ್ಯಸಿದ್ಧಾಂತ ಜೀವನ ಸಿದ್ಧಾಂತ ಒಂದೇ ಕೇಂದ್ರದಿಂದ ಬಂದುದು" (ಯು. ಆರ್. ಅನಂತಮೂರ್ತಿ) ಎಂಬ ಸತ್ಯವನ್ನು ಮನಗಾಣಿಸಿ ಕೊಡುತ್ತದೆ. ಅನುಭವದ ಸಂಕೀರ್ಣ ಸ್ವರೂಪವನ್ನು ಪ್ರತಿಮಾ ಪ್ರಧಾನವಾಗಿ ರೂಪಿಸಿ, ಬಳಿಕೆ ಮಾತಿನ ಸ್ವಾರಸ್ಯವನ್ನೆಲ್ಲ ಅದಕ್ಕೆ ಧಾರೆಯೆರೆದು, ತನ್ನದೇ ಆದ ಛಂದಸ್ಸಂಗೀತದಲ್ಲಿ ಮೈದಾಳಿ ನಿಲ್ಲುವ, ಪ್ರತಿಯೊಂದು ಪದವನ್ನೂ ಸ್ಪಂದಿಸಿ ತೋರಬಲ್ಲ ಇವರ ಕವಿತಾ ಸಾಮರ್ಥ್ಯ ಕನ್ನಡ ಕಾವ್ಯದಲ್ಲಿ ಬೇರೆಲ್ಲಿಯೂ ಈ ರೀತಿ ಇಷ್ಟೊಂದು ವೈಶಿಷ್ಟ್ಯಪೂರ್ಣವಾಗಿ ಕಾಣಸಿಗದು. ಅನುಭವದ ತೀವ್ರತೆ, ಆತ್ಮವಿಮರ್ಶೆ, ಸತ್ಯಾನ್ವೇಷಣೆಯ ಛಲ ಇವರ ಕಾವ್ಯದ ವೈಶಿಷ್ಟ್ಯಗಳಾಗಿವೆ. ಹೇಳುವ ರೀತಿಯಲ್ಲಿಯ ವ್ಯಂಗ್ಯ ನಾಟಕೀಯತೆಗಳು ಕವನದ ಒಟ್ಟು ಪರಿಣಾಮಕ್ಕೆ ಅದ್ಭುತವಾದ ರೀತಿಯಲ್ಲಿ ನೆರವಾಗುತ್ತವೆ. "ವ್ಯಕ್ತಿ–ಸಮಾಜ, ಭಾವ–ಬುದ್ಧಿ, ಮಾಂಸ–ಮನಸ್ಸು ಇವುಗಳ ಸಮನ್ವಯ ಕಾರ್ಯವೇ ನವ್ಯ ಕಾವ್ಯ. ಎಲ್ಲಿಯವರೆಗೆ ಸಮನ್ವಯ ಸಾಧ್ಯವಾಗಿಲ್ಲವೋ ಅಲ್ಲಿಯವರೆಗೂ ಅದೇ ಕಾವ್ಯವಸ್ತು. ಪ್ರಕೃತಿ, ಕವಿ, ಸುತ್ತಣ ಸಮಾಜ–ಇವುಗಳು ತಾನೇ ಎಲ್ಲ ಕಾವ್ಯಗಳ ವಸ್ತು?" ಎನ್ನುತ್ತಾರೆ ಅಡಿಗರು. ತಮ್ಮ ದೃಷ್ಟಿ ಬಹುಮಟ್ಟಿಗೆ Tragic ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ 'ಎಲ್ಲೆಲ್ಲು ಹೆಂಗೆ ಮನೆ, ಬೇನೆ, ಸಂಕಟ, ನಗೆ' ಎಂಬ ಸಂವೇದನೆ, 'ಈಡಿಪಸ್ಸಿನ ಗೂಢ ಪಾಪಲೇಪಿತನಾನು' ಎಂಬ ಸತ್ಯಾನ್ವೇಷಣೆ, ಇವರ ಕಾವ್ಯದಲ್ಲಿ. ಈ ಹಿನ್ನೆಲೆಯಲ್ಲಿ ಅವರ ಕಾವ್ಯದ ಅಭ್ಯಾಸವನ್ನು ಮಾಡಿದರೆ ಅವರ ಕಾವ್ಯಹೃದಯದ ರುದ್ರಸೌಂದರ್ಯ ನಮಗೆ ಗೋಚರವಾಗುತ್ತದೆ.

ಅವರ ಭಾವನೆಯ ಉತ್ಕಟತೆಯನ್ನೂ, ತೀವ್ರತೆಯನ್ನೂ, ಜೊತೆಯಲ್ಲಿ ವೈಚಾರಿಕ ಬುದ್ಧಿಯ ಮಿಂಚನ್ನೂ ಈ ಸಾಲುಗಳು ಹೇಗೆ ಪ್ರತಿಧ್ವನಿಸುತ್ತವೆ ನೋಡಿ:

"ತೆಗೆದುಕೋ ನೀ ಕೊಟ್ಟ ಎಲ್ಲ ವಸ್ತ್ರವಿಲಾಸ:
ಈ ಕೋಟು, ಈ ಶರಟು, ಈ ಶರಾಯಿ;
ಈ ಭಗ್ನ ಜೋಪಡಿಯು ನಿನ್ನದೇ; ತೆಗೆದುಕೋ;
ಬತ್ತಲಾಗದೆ ಬಯಲು ಸಿಕ್ಕದಿಲ್ಲಿ.
ಅಲ್ಲದಿರೆ ಬೀದಿಯಲಿ ನಾ ಸರೀಕರ ಕೂಡೆ ತಲೆಯೆತ್ತಿ
ನಡೆಯಲಾರೆ;
ಬತ್ತಲಾಗದೆ ಕತ್ತಿಕಿತ್ತೆಸೆಯ ಬಲ್ಲುದೆ ಕವಚಕುಂಡಲ
ಹೃದಯದಮೃತಕಲಶ"

['ಭೂಮಿಗೀತ'—ಭಾಗ ೩]

ಸಮಕಾಲೀನ ಜೀವನದ ಅಸ್ತವ್ಯಸ್ತವನ್ನು ಚಿತ್ರಿಸುವ ಈ ಪ್ರತಿಮೆ:

"ಈಗ ಈ ಲೋಕ ಅಸ್ತವ್ಯಸ್ತ: ಗಡಿಯಾರ
ಬಿಚ್ಚಿ ಯಂತ್ರೋಪಯಂತ್ರಗಳ ಚೆಲ್ಲಾಪಿಲ್ಲಿ
ಚೆಲ್ಲಿ, ಕೈಕಟ್ಟಿ ಕುಳಿತ ರಿಪೇರಿಯವನಂತೆ.
ಯಾವ ತಿರುಗಣೆ ಮೊಳೆಯನೆಲ್ಲಿ ಹಾಕಲಿ? ಮತ್ತೆ ಈ
ಸುರುಳಿ ತಂತಿಯನೆಲ್ಲಿ ತುರುಕಲಿ?
ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇವೆ. ಇಲ್ಲ
ಸಾವಯವಶಿಲ್ಪದ ಸಮಗ್ರೀಕರಣ ಬಲ"

['ಶರದ್ಗೀತ'—ಭಾಗ ೨]

ಅಲ್ಲದೆ, ಬಾಳಿನಲ್ಲಿಯ ಅಸಹಾಯಕತೆಯನ್ನೂ, ಅದರ ಅಪೂರ್ಣತೆಯ ಪ್ರಜ್ಞೆಯನ್ನೂ ಕೆರಳಿಸುವ 'ಭೂಮಿಗೀತದ' ಕೊನೆಯ ಭಾಗದಲ್ಲಿ ಬರುವ ಈ ಪಂಕ್ತಿಗಳು:

"ಕೆಲರು ಹೇಳುವರು ಸ್ವಿಚ್ಚಲ್ಲೊ ತಿಳಿಯದೆಂದು;
ಮೂಲದ ಕಚೇರಿಯ ವಿಳಾಸ ಮರೆತಿದೆ ಎಂದು;
ಇಲ್ಲೆ ಎಲ್ಲೋ ಇರುವುದೆನ್ನುವರು ಉಳಿದವರು
ಕತ್ತಲಲ್ಲಿ, ಕಣ್ಣು ಕಾಣದ ಬೀದಿಯಿಕ್ಕಟ್ಟನಲಿ
ಗೋಡೆ ತಡಕುತೆ ಇನ್ನು ತೆವಳಬೇಕು.
ಹೆಳವನ ಹೆಗಲಮೇಲೆ ಕುರುಡ ಕೂತಿದ್ದಾನೆ:
ದಾರಿ ಸಾಗುವದೆಂತೊ ನೋಡಬೇಕು."

"ಪೂರ್ಣತೆಯ, ಪ್ರಗತಿಯ, ಭ್ರಮೆಯನ್ನು ಹುಟ್ಟಿಸಿ ಬದುಕನ್ನು ಸರಳ ಮಾಡಿಸುವ ಕಾವ್ಯಕ್ಕಿಂತ, ಅಪೂರ್ಣತೆಯ ಪ್ರಜ್ಞೆಯನ್ನು ಉಳಿಸಿ, ನೋಯಿಸಿ, ಕುದಿಸಿ, ಬೆಳಕನ್ನು ಕಾಣಲು ಕತ್ತಲಲ್ಲೇ ತಡಕುತ್ತ ನಡೆಯಬೇಕಾದ ಅನಿವಾರ್ಯತೆಯನ್ನು ಜೀವಕ್ಕೆ ಕಲಿಸುವ ಕಾವ್ಯ ಶ್ರೇಷ್ಠವಾದುದು"[೧] ಹೌದೆ? ಈ ಬಗ್ಗೆ ನಮ್ಮಲ್ಲಿ ವಿಚಾರ ವಿಮರ್ಶೆ ಇಂದು ಅಗತ್ಯವಾಗಿ ನಡೆಯಬೇಕಾಗಿದೆ.

ಕಣ್ಣಿಗೆ ಕಂಡೂ, ಎಲ್ಲ ವಸ್ತುವನ್ನೂ ಚುಚ್ಚುತ್ತ ಹೋಗುತ್ತಿದ್ದ ವ್ಹಿ. ಜಿ. ಭಟ್ಟರ ವಿಡಂಬನೆಗೆ ಈಗ ತಾರ ತಮ್ಯ ಭಾವನೆ ಒದಗಿರುವುದು ಅವರ ಕಾವ್ಯದ ಸುದೈವವೆಂದೇ ಹೇಳಬಹುದು. 'ಕಿಷ್ಕಿಂದೆ'ಯಲ್ಲಿ ಅಭಿವ್ಯಕ್ತಿಗೊಂಡಿರುವ ಅವರ ಜೀವನೋತ್ಸಾಹಕ್ಕೆ ವಾತ್ಸಲ್ಯಭಾವ ಓಲಗ ಹಿಡಿದಿದೆ, 'ಊದಬತ್ತಿಯ ಪರಿಮಳದಂತೆ ಕಿಷ್ಕಿಂದೆಯೊಳಿದೆ ಆನಂದ' ಎಂದು ಸಂಸಾರದ ಸಾರವನ್ನು ಅವರ ಕಾವ್ಯ ಕಂಡುಕೊಂಡಿದೆ. 'ಮಾಗಹತ್ತಿದೆ ಕಸಕು ಹುಳಿಯ ಕಾಯಿ'. ಅವರ ನೋಟದಲ್ಲಿ ಮೂಡಿದ ಈ ಅಂತರ ಹಿಂದೆಂದೂ ಇರದ ಚೆಲುವನ್ನು ಅವರ ಕಾವ್ಯಕ್ಕೆ ತೊಡಿಸಿ, ಅವರ ಭಾವನೆಯನ್ನು ಹೀಗೆ ಮಿಡಿದಿದೆ:

"ಈ ಗಾಳಿಯ ಬೆನ್ನಮೇಲೆ
ಮೂರ್ತಿಯೊಂದ ಕೆತ್ತಬೇಕು
ಅದಕೆ ಎಲ್ಲ ಸಾಧನ
ಈ ದೇಹಾ ಈ ವಿದ್ಯಾ
ಜನನ ಮರಣ ವೇದನಾ"

('ಮೂರ್ತಿ'—ಕಿಷ್ಕಿಂದೆ.)

'ಕಾಲದಕರೆ'ಗೆ ಕಿವಿಗೊಟ್ಟ ಗಂಗಾಧರ ಚಿತ್ತಾಲರ ಕಾವ್ಯ 'ಮನುಕುಲದ ಹಾಡಿ'ನಲ್ಲಿ ತನ್ನ ವಿಸ್ತಾರವನ್ನೂ, ಬೆಳವಣಿಗೆಯನ್ನೂ ಕಂಡುಕೊಂಡಿದೆ. 'ಸಮುದ್ರ ಗೀತಗಳ' ತರುವಾಯ ಆ ಛಂದಸ್ಸಿನ ಚಕ್ಕಂದ–ಉಕ್ಕಂದವನ್ನು ಪುನಃ ನಾವು ಕಾಣುವದು 'ಮನುಕುಲದ ಹಾಡಿನಲ್ಲಿ'. ಇದರಲ್ಲಿಯೂ ಐದು ಸಮುದ್ರ ಗೀತಗಳಿವೆ. 'ಪೈಲು', 'ಸೂರ್ಯಗೀತ'ಗಳಲ್ಲಿ ಇವರ ಶೈಲಿಯ ಉತ್ಕಟತೆಯನ್ನೂ, ತನ್ನತನವನ್ನೂ ಕಾಣಬಹುದು. 'ಹರಿವ ನೆತ್ತರಿನ ಆವಾಜು' ಅಲ್ಲಿ ಕೇಳಿಬರುತ್ತದೆ.

"ಅಗೆದಲ್ಲೂ ಹರಡಿಹುದು ಕಡಿದಲ್ಲೂ ಚಿಕ್ಕೆ ಸಿಡಿಸಿಹುದು
ಈ ಜಗದ ಚೊಕ್ಕ ಜೀವಂತ ಬೇರು!"

ಇವೇ ಮೊದಲಾದ ಸಾಲುಗಳಲ್ಲಿ ಶಬ್ದರಚನೆಗೆ ಅವರು ಪಡುವ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆತಿದೆಯೆನ್ನಬಹುದು.

---

೧ 'ಭೂಮಿಗೀತ'ದ ಮುನ್ನುಡಿಯಲ್ಲಿ ಯು. ಆರ್. ಅನಂತಮೂರ್ತಿ

ಜಿ. ಎಸ್. ಶಿವರುದ್ರಪ್ಪನವರು ಇಂದಿನ ಮಹತ್ವದ ಕವಿಗಳಲ್ಲಿ ಒಬ್ಬರು. ' ದೀಪದ ಹೆಜ್ಜೆ ' ಇವರ ಕಾವ್ಯ ಸಾಧನೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ' ಕಾಲವನ್ನು ಗೆಲ್ಲುವುದಕ್ಕಾಗಿ, ಅಥವಾ ಕಾಲದ ಸೆರೆಯಿಂದ ಬಿಡಿಸಿಕೊಳ್ಳುವುದಕ್ಕಾಗಿ ' ನಡೆಯುವ ಮನುಷ್ಯ ಪ್ರಯತ್ನದ ಹಲವಾರು ಹೆಜ್ಜೆಗಳ ಪಾಡು ಇಲ್ಲಿಯ ಕವಿತೆಗಳ ವಸ್ತುವಾಗಿದೆ. ಕವಿಯ ಚಿಂತನಪರತೆ, ಭಾವದ ಹರಹು ಈ ಕವಿತೆಗಳ ವ್ಯಾಪ್ತಿಯನ್ನು ಹೆಚ್ಚಿಸಿದೆ. ' ನುಗ್ಗು ಎದೆಯೊಳ ಸುಳಿಯ ತಳದಾಳಕೆ ' ಎಂಬ ಶೋಧನೆ, ಸ್ವವಿಮರ್ಶೆ, ಇಲ್ಲಿ ತಕ್ಕಮಟ್ಟಿಗೆ ನಡೆದಿದೆ. ಆ ದಿಸೆಯಲ್ಲಿ ಕೆಲವು ಉತ್ತಮ ಕಾಣಿಕೆಗಳನ್ನೂ ಕವಿ ಕೊಟ್ಟಿದ್ದಾರೆ. ಛಂದಸ್ಸನ್ನೂ ಇವರು ಬೇಕಾದ ಹಾಗೆ ಹಿಗ್ಗಿಸಿಕೊಳ್ಳಬಲ್ಲರು. ಆದರೆ ಒಂದು ಕೊರತೆಯೆಂದರೆ, ಇವರ ಕವಿತೆಗಳಿಗೆ ' ಸಾವಯುವ ಶಿಲ್ಪ ' ಇಲ್ಲದಿರುವದು. ವಸ್ತು ಹಾಗೂ ಛಂದಸ್ಸು, ಭಾವ ಹಾಗೂ ಭಾಷೆ ಇವುಗಳಲ್ಲಿ ಇನ್ನಿಷ್ಟು ಬಿಗಿ ಹೊಂದಿಕೆ ಬೇಕು ಎನಿಸುತ್ತದೆ. ಬಿಡಿಬಿಡಿಯಾಗಿ ಬರುವ ಶಬ್ದಚಿತ್ರಗಳು ಮನೋಜ್ಞವಾಗಿದ್ದರೂ, ಅವುಗಳ ಸಂಯೋಜನೆಯಲ್ಲಿ ಒಂದು ಬಗೆಯ ರಸಕ್ರಿಯೆ ನಡೆದಂತೆ ತೋರುವದಿಲ್ಲ. ಪ್ರಕೃತಿ ಚಿತ್ರಗಳನ್ನು ವಾತ್ಸಲ್ಯಭಾವದೊಡನೆ ಪಾಕಗೊಳಿಸಿ ಕೊಡುವಾಗ ಇವರ ಕಾವ್ಯ ತುಂಬ ಯಶಸ್ವಿಯಾಗುತ್ತದೆ:

" ಸುತ್ತ ಗಿಡಬಳ್ಳಿಗಳ ತುಟಿಯೊಳಗೆ ಮಿನುಗಿತ್ತು
ಮೊದಲ ಮೊಲೆ ಹಾಲು.
ಬಾನ ನೀಲಿಗೆ ತುಡಿವ ನೆಲದ ಬಯಕೆಯ ಬುಗ್ಗೆ
ಹಸುರಾಗಿ ಚಿಮ್ಮಿರಲು, ಕೊಂಬೆದೊಟ್ಟಿಲ ತುಂಬ
ಉಯ್ಯಾಲೆಯಾಡಿತ್ತು ಹಕ್ಕಿಕೊರಳು !" (' ಪ್ರಶ್ನೆ ')

ಇದೇ ದೃಷ್ಟಿಯಿಂದ ' ಕಾರ್ತೀಕ 'ದಲ್ಲಿಯ ನಿಸರ್ಗ ಚಿತ್ರಗಳು ಚೆಲುವಾಗಿವೆ. ಮಗುವಿನ ಬೆರಗುಗಣ್ಣು ಅದಕ್ಕೊಂದು ಆತ್ಮೀಯತೆಯ ಮೆರುಗನ್ನು ತಂದುಕೊಡುತ್ತದೆ: ' ಯಾರು ಕೊಟ್ಟರೋ ಬಾನಿಗೊಂದು ಬಂಗಾರದ ಮೆಡಲು, ' ' ಈ ಪಾರ್ಕಿನ ಮರಮರವೂ ನೂರು ಹಕ್ಕಿಯಿಂಚರದಲಿ ಗಿಲಗಂಚಿಗಳಾಗಿವೆ ' ಮೊದಲಾದುವನ್ನು ನೋಡಬಹುದು. ಇವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಸೌಂದರ್ಯದೃಷ್ಟಿ ಮೆಟ್ಟಿನಿಂತಿದೆ. ' ಶ್ರೀರಾಮಕೃಷ್ಣ ವಚನವೇದ 'ದಲ್ಲಿ ಬರುವ ಬಂಗಾಳಿ ಗೀತೆಗಳ ಕನ್ನಡ ಅನುವಾದವನ್ನು ಇವರು ' ತೀರ್ಥವಾಣಿ 'ಯಲ್ಲಿ ತುಂಬ ಸೊಗಸಾಗಿ ತಂದುಕೊಟ್ಟಿದ್ದಾರೆ.

" ' ದೀಪಧಾರಿ 'ಯಲ್ಲಿ ಕೆಲವು ಕವಿತೆಗಳು ನವ್ಯವಾಗಿವೆ. ಆದರೆ ನವ್ಯತೆಯ ಕಡೆಗೆ ಸಾಗುವಾಗ ಕಣ್ಣವಿಯುವರು ಎಚ್ಚರವಹಿಸಿದ್ದು ಬಹಳ ಸಂತೋಷದ ಸಂಗತಿಯಾಗಿದೆ. "[೧] " ' ಮಣ್ಣಿನ ಮೆರವಣಿಗೆ 'ಯಲ್ಲಿ ಭಾವಗೀತೆಯ ಸರಾಗ ಭಾವಪೂರ್ಣತೆ, ಅದರೊಂದಿಗೆ ಅನುಸ್ಯೂತವಾದ ಭಾಷೆಯ ಅನುರಣನ (resonance), ಅದರಲ್ಲಿಯೂ ನವ್ಯತಂತ್ರದ ಅಂಶಗಳನ್ನು ಅಳವಡಿಸಿಕೊಂಡು ಅರಳಿದ ವಿಸ್ತುವಿನ್ಯಾಸ–ಈ ತ್ರಿಗುಣಾತ್ಮಕ ತಥ್ಯವು ' ನವೀನ ಕವಿತಾವಿಧಾನ 'ದ ಒಂದು ಆಕೃತಿಯನ್ನು ನಮ್ಮ ಮುಂದೆ ಇರಿಸಿದೆ . . . . ವ್ಯಂಗ್ಯವೋ ವಿನೋದವೋ, ವೈಚಾರಿಕತೆಯೋ, ವರ್ಣನಾ ವಿಶೇಷವೋ— ಯಾವ ವಸ್ತುವಿನ್ಯಾಸವೇ ಆಗಿರಲಿ, ಯಾವ ಕವನದಲ್ಲಿಯೂ ಕವಿ ಸಹೃದಯನಿಗೆ ವಂಚನೆ ಮಾಡುವದಿಲ್ಲ. ತೃಪ್ತಿಪಡಿಸುವರೇ ಹೊರತು ಚಕಿತ, ಸ್ತಂಭಿತ, ಮಾಡುವದಿಲ್ಲ. ತೀರ ಪಾರದರ್ಶಕವಲ್ಲವಾದರೂ ಇವರ ಕವನ ಬಿಂಬ ಅಷ್ಟು ಅಪಾರದರ್ಶಕವೂ ಅಲ್ಲ. ತುಸು ಚಿನ್ನಾಟವಾಡಿದಮೇಲೆ ಮಗಿಗೆ ಉಣಿಸುವ ತಾಯಿಯಂತೆ ಇವರ ಕಾವ್ಯಶಕ್ತಿ ಮತ್ತು ಶೈಲಿ. "[೨]

" ಅವರ ಕವನಗಳನ್ನು ಓದುತ್ತಿರುವಂತೆ ಗದ್ಯಕ್ಕೆ ಹತ್ತಿರವಾದ, ಸರಳವಾದ ಮತ್ತು ಸೂಚ್ಯವಾದ ಅವರ ಭಾಷೆ ಓದುಗರನ್ನು ಸೆಳೆಯುತ್ತದೆ. ಭಾಷೆಯ ವಿಷಯದಲ್ಲಿ ಮತ್ತು ಅದನ್ನು ನಡೆಸುವ ಲಯದ ವಿಷಯದಲ್ಲಿ ಅವರು ಹೊಸತನವನ್ನು ಚೆನ್ನಾಗಿ ಸಾಧಿಸಿದ್ದಾರೆ. ಇವರ ಕವನಗಳಲ್ಲಿಯ ಮೋಹಕ ಗುಣ ಇಂಗ್ಲೀಷಿನಲ್ಲಿ ಹೇಳುವ "negative capability". ಈ ಸಾಲುಗಳು ಅದಕ್ಕೆ ಉತ್ತಮ ಉದಾಹರಣೆಗಳು :

" ಒಳಗು ಹೊರಗೆಲ್ಲ ಒಂದೆ ರೀತಿ
ಯುದ್ಧ ರಂಗದಲಿ ಸನ್ನದ್ಧವಾಗಿದೆ ರಥವು
ಎಲ್ಲಿ ಆ ಸಾರಥಿ ? . . . . . .
ಓ ! ಇದು ಈಗ ನಮ್ಮ ಸರತಿ. "

[' ಯುಗಾದಿ ']

ಹೇಳುವ ವಿಷಯಕ್ಕಿಂತ ಹೇಳುವ ರೀತಿಯಲ್ಲಿಯೇ ಹೆಚ್ಚು ಹಿತವಿರುವದು :

" ಬಿದ್ದಿವೆ
ಒಡಮುರಿದೆದ್ದಿವೆ ಗಿರಿ ಗಹ್ವರ–

---

೧ ' ನಡೆದುಬಂದದಾರಿ ' ಸಂಪುಟ ೧

೨ ಶ್ರೀ ಗೌರೀಶ ಕಾಯ್ಕಿಣಿ—' ಮಣ್ಣಿನ ಮೆರವಣಿಗೆ 'ಯ ಹಿನ್ನುಡಿಯಲ್ಲಿ.

ಯುಗಯುಗಗಳ ನೋವೆ!
ದರಿ ಕಂದರದೊಳಗಿನ್ನೂ ಹರಿದಾಡಿದೆ ಸಂಶಯವೆ."

['ಮಣ್ಣಿನ ಮೆರವಣಿಗೆ']

ಕವಿಯು ನೋಡುವಾಗ ಈ ರೀತಿಯ ರಾಸಾಯನಿಕ ಕ್ರಿಯೆ ನಡೆಯಬೇಕು. 'ಮಣ್ಣಿನ ಮೆರವಣಿಗೆ'ಯ ಮೂರನೆಯ ಭಾಗವು ಅರ್ಥವನ್ನು ಧ್ವನಿಸಿ ಹೇಳುವ ವಿಧಾನದಿಂದಲೂ, ಲಲಿತ ಪದಸಂಯೋಜನೆಯಿಂದಲೂ, ಸಾಲುಗಳ ನಿಧಾನವಾದ, ಹೆಚ್ಚು ಗದ್ದಲವಿಲ್ಲದ ನಡಿಗೆಯಿಂದಲೂ ಮತ್ತು ಕೊನೆಯಲ್ಲಿ ಕಾಣುವ ಸಂಯಮಪೂರ್ಣ ಜೀವನ ದೃಷ್ಟಿಯಿಂದಲೂ ಅತ್ಯಂತ ಉತ್ತಮ ಭಾಗವಾಗಿದೆ. ಒಟ್ಟಿನಲ್ಲಿ ಕಣವಿಯವರದು ಈ ರಾಗಮೇಳದಲ್ಲಿ ತನ್ನದೆ ವಿಶಿಷ್ಟತೆಯನ್ನು ಹೊಂದಿದ ಎಳೆ."೧

'ಬುವಿ ನೀಡಿದ ಸ್ಫೂರ್ತಿ'ಯ ನಂತರ ಬೇರೆ ಸಂಗ್ರಹ ಬಂದಿರದಿದ್ದರೂ, ರಾಮಚಂದ್ರಶರ್ಮರ ಹೆಸರು ಇಲ್ಲಿ ಉಲ್ಲೇಖನೀಯವಾಗಿದೆ. ಮನಸ್ಸಿನ ಆಳದಲ್ಲಿರುವ ಗುಪ್ತಕಾಮನೆಗಳನ್ನು ಅವುಗಳಿಗೆ ತಕ್ಕ ರೂಪಕ, ಚಿತ್ರ, ಸಂಕೇತ, ಸ್ಮೃತಿಗಳಿಂದ ನವ್ಯತಂತ್ರದ ಸ್ವತಂತ್ರವಾದ ಛಂದಸ್ಸಿನಲ್ಲಿ ರೂಪುಗಳಿಸಿಕೊಡಲು ಇವರು ಪ್ರಯತ್ನಿಸಿದ್ದಾರೆ. 'ಏಳುಸುತ್ತಿನ ಕೋಟೆ', 'ಗೌರೀಶಂಕರ' ಮೊದಲಾದ ಯಶಸ್ವೀಕವಿತೆಗಳನ್ನು ಬಿಟ್ಟರೆ, ಉಳಿದವುಗಳಲ್ಲಿಯ ವಿಧಾನ ಬೇಸರ ತರುವಂತಿದೆ. ಕಾಮಜೀವನದ ವಿಕೃತಿಯೇ ಸಾಮಾನ್ಯವಾಗಿ ಇವರ ಎಲ್ಲ ಕವಿತೆಗಳ ವಸ್ತುವಾಗಿರುವುದರಿಂದ ಅದರಲ್ಲಿ ವೈವಿಧ್ಯವನ್ನು ತಂದು ಬೆರಗುಗೊಳಿಸುವಂತಹ ಪ್ರತಿಭೆ ಇಲ್ಲಿ ವ್ಯಕ್ತವಾಗಿಲ್ಲ. ಹೇಳುವ ವಿಷಯ ತೀರ ಸಾಮಾನ್ಯವಾದುದೇ ಇದ್ದಾಗಲೂ ಇವರು ಅದರಲ್ಲಿ ಹೆಚ್ಚಿನ ಜಾಣ್ಮೆಯನ್ನು ತೋರ್ಪಡಿಸುವ ಹವಣಿಕೆ ಕಂಡುಬರುತ್ತದೆ. ಉದ್ದೇಶಪೂರ್ವಕವಾಗಿ, ಚಿತ್ರಕ್ಕೆ ಚಿತ್ರಗಳನ್ನು ಜೋಡಿಸಲು ಪ್ರಯತ್ನಿಸಿ ಬರೆದ ಸಾಲುಗಳೇ ಇವರ ಕವಿತೆಗಳಲ್ಲಿ ಹೆಚ್ಚಾಗಿವೆ. ಇದರಿಂದ ಅಸ್ಪಷ್ಟತೆಗೆ ವಿನಾಕಾರಣ ಎಡೆಗೊಟ್ಟಂತಾಗಿದೆ.

ಎಂ. ಅಕಬರ ಅಲಿಯವರ ಕವಿತೆ ಪ್ರಗತಿಶೀಲತೆಯಿಂದ ನವ್ಯಕ್ಕೆ ಒಲಿಯುತ್ತಿರುವದನ್ನು 'ನವಚೇತನ' ಸಂಗ್ರಹದಲ್ಲಿ ಕಾಣಬಹುದು. 'ಹಾವು ಹೆಡೆಬಿಡಿಸಿದಾಗ' ಎಂಬುದು ಇಲ್ಲಿಯ ಒಂದು ಉತ್ತಮ ಕವನ. ಇವರು ಬಳಸುವ ಪ್ರತಿಮೆಗಳು ಸತ್ವಪೂರ್ಣವಾಗಿದ್ದು ಶೈಲಿ ಗಂಭೀರತೆಯನ್ನು ಕಳೆದುಕೊಳ್ಳದೆಯೂ ವಿಡಂಬನ ಸೂಚಿಯಾಗಿದೆ. ಅಮರ್ದು, ಎರ್ದೆ, ಬರ್ದಿಲ, ಮೇಣ್, ತೋಂಟ ಮೊದಲಾದ ಶಬ್ದಗಳು ಗತಕಾಲದ ಗುರುತುಗಳಂತೆ ಇವರ ಶೈಲಿಯಲ್ಲಿ ಇನ್ನೂ ಉಳಿದುಕೊಂಡಿವೆ. ಇವರ ಕಾವ್ಯದ ಪ್ರಗತಿ ನಿಧಾನವಾಗಿದ್ದರೂ ಭರವಸೆಯನ್ನು ಹುಟ್ಟಿಸುವಂತಹುದು.

ಭುಜೇಂದ್ರ ಮಹಿಷವಾಡಿಯವರ 'ಕಟ್ಟುವಕೈ'ಯಲ್ಲಿ ಕಾವ್ಯಗುಣ ತೂಕಡಿಸದಂತೆ ನೋಡಿಕೊಳ್ಳಬೇಕಾದುದು ಅಗತ್ಯವೆನಿಸುತ್ತದೆ. 'ಚೈತ್ರಾಗಮನ'ದಲ್ಲಿ ಬಸುಪಟ್ಟದ ಅವರು ಸಹಜವಾದ ಕಾವ್ಯಶಕ್ತಿಯನ್ನು ತೋರ್ಪಡಿಸಿದ್ದರೂ, ಅದಿನ್ನೂ ಬಲಿತು ಬಲಗೊಳ್ಳಬೇಕಾಗಿದೆ. 'ದೀಪಾವತಾರ'ದ ಛಂದಸ್ಸಿನಲ್ಲಿ ಸಿದ್ದಣ್ಣ ಮಸಳಿಯವರು ತಮ್ಮ ಮೊದಲಿನ ಸಂಕಲನಕ್ಕಿಂತ ಕೆಲಮಟ್ಟಿನ ಪ್ರಗತಿಯನ್ನು ತೋರಿಸಿದ್ದಾರೆ. ಆದರೆ, ಅನ್ಯಕವಿಗಳ ಪ್ರತಿಭೆಯಲ್ಲಿ ಮಿಂದು ಬಂದ ಉಕ್ತಿ ವಿಶೇಷಗಳನ್ನು ಇವರು ಅರಿತೋ, ಅರಿಯದೆಯೋ ತಮ್ಮವೆಂಬಂತೆ ಕವಿತೆಗಳಲ್ಲಿ ಉಪಯೋಗಿಸಿಬಿಡುತ್ತಾರೆ. ಈ ಅಪಾಯಕರವಾದ ಹಾದಿಯಿಂದ ಅವರ ಕಾವ್ಯ ಬೇಗ ಪಾರಾದಷ್ಟೂ ಒಳ್ಳೆಯದು. 'ನೆಲಸಂಪಿಗೆ'ಯಲ್ಲಿ ಬಿ. ಎ. ಸನದಿಯವರು ವ್ಯಕ್ತಪಡಿಸುವ ಮಾತಿನ ಜಾಣತನ ತನ್ನ ವಾಚ್ಯತೆ ಹೋಗಲಾಡಿಸಿಕೊಂಡಾಗ ಹೃದ್ಯವಾಗಬಹುದು. 'ಜೀವತೀರ್ಥ'ದಲ್ಲಿ ಕೋ. ಚೆನ್ನಬಸಪ್ಪನವರು ತಮ್ಮ ಸಾಮರ್ಥ್ಯದ ಎಲ್ಲೆಯನ್ನು ಗುರುತಿಸಿಕೊಂಡಿದ್ದಾರೆ. ರೋಮ್ಯಾಂಟಿಕ್ ಹಾಗೂ ನವ್ಯಕಾವ್ಯ ಎರಡರಿಂದಲೂ ಕಾವ್ಯದ ಸೌಂದರ್ಯಕ್ಕೆ ಬೇಕಾಗುವ ಒಳ್ಳೆಯ ಅಂಶಗಳನ್ನು ಸ್ವೀಕರಿಸುವ ಹವ್ಯಾಸವುಳ್ಳ ಸಿ. ಪಿ. ಕೆ. ಅವರ 'ತಾರಾಸಖ' ಆಯಾ ಕವಿಗಳ ಪ್ರಭಾವದಿಂದ ಮುಕ್ತವಾಗಿರದಿದ್ದರೂ ಆಶಾದಾಯಕವಾಗಿದೆ. 'ಚಿನ್ಮಯಿಯಿಂದ ಬೆಳಕಿಗೆ ಬಂದ ದೇವೇಂದ್ರಕುಮಾರ ಹಕಾರಿ' 'ಸುಗ್ಗಿಯ ಕಣ'ವನ್ನು ಕೊಟ್ಟ ವಿರೂಪಾಕ್ಷ, 'ಮಧುಸಂಚಯ'ದ 'ಜೀ. ವಿ.', 'ರುದ್ರಾಕ್ಷಿ'ಯ ರಾಜಶೇಖರ, 'ಕಾವ್ಯಕಾವೇರಿ'ಯ ಎಲ್. ಜಿ. ಸುಮಿತ್ರ ಇವರ ಕಾವ್ಯದ ಬೆಳವಣಿಗೆಯನ್ನು ಕಾದು ನೋಡಬೇಕಾಗಿದೆ.

ನವೀನ ಪ್ರಜ್ಞೆಯಿಂದ ಜಾಗ್ರತರಾಗಿರುವ ಹೊಸ ಪೀಳಿಗೆಯ ಕವಿಗಳಲ್ಲಿ ಕೆಲವರು ವಿಶೇಷವಾದ ಕುತೂಹಲವನ್ನು ಹುಟ್ಟಿಸಿದ್ದಾರೆ. 'ಮನಸು ಗಾಂಧಿಬಜಾರು'ದಲ್ಲಿ ನಿಸಾರ್ ಅಹಮದ್ ಅವರು ಭಾವಪೂರ್ಣತೆಯಿಂದಲೇ

---

೧ ಡಿ. ಕೆ. ಸೀತಾರಾಮಶಾಸ್ತ್ರಿ–'ಕನ್ನಡದಲ್ಲಿ ನವ್ಯಕವಿತೆ'–'ಜಯಕರ್ನಾಟಕ' ಆಗಸ್ಟ ೧೯೫೮.

ತಾವು ಕಟ್ಟುವ ಚಿತ್ರಗಳಲ್ಲಿ, ಪ್ರತೀಕಗಳಲ್ಲಿ ನವೀನತೆಯ ಸೊಗಸನ್ನು ತಂದಿದ್ದಾರೆ. 'ಮುಗುಳು' ಸಂಗ್ರಹದಿಂದ ಧೈರ್ಯವಾಗಿ ಮುಂದುವರಿಯುತ್ತಿರುವ ಚಂದ್ರಶೇಖರ ಕಂಬಾರ ಈಚಿನ ಕವಿತೆಗಳಲ್ಲಿ ಸಾಧಿಸಿರುವ ಪ್ರಗತಿ ಗಮನಾರ್ಹವಾಗಿದೆ. 'ಬಾನುಲಿ'ಯಿಂದ ಪ್ರಕಾಶಗೊಂಡ ಚಂದ್ರಶೇಖರ ಪಾಟೀಲರ ಕಾವ್ಯರಚನೆ ವೈಚಾರಿಕತೆಯನ್ನೂ, ವಿಡಂಬನೆಯಲ್ಲಿ ವಿವೇಕವನ್ನೂ ಬೆಳೆಸಿಕೊಂಡಷ್ಟೂ ಶಕ್ತಿಪೂರ್ಣವಾಗಬಲ್ಲುದು. ಜಿ. ಎಸ್. ಸಿದ್ಧಲಿಂಗಯ್ಯ ಮತ್ತು ಹೆಚ್. ಜಿ. ಸಣ್ಣಗುಡ್ಡಯ್ಯ ಇವರು ತಮ್ಮ 'ರಸಗಂಗೆ' ಹಾಗೂ 'ಅಭೀಪ್ಸೆ'ಗಳಲ್ಲಿ ದಿಟ್ಟತನದ ಹೆಜ್ಜೆಯಿಟ್ಟಿದ್ದಾರೆ. 'ಇವರು ತಮ್ಮ ಸ್ವಂತ ಅನುಭವದ ಗುಪ್ತನಿಧಿಯ ಕಡೆಗೆ ಕೈಚಾಚುತ್ತಿರುವುದು ಶುಭಲಕ್ಷಣ' (ಅಡಿಗ)ವೆನಿಸಿದರೂ ಅದನ್ನು ಕಾಲಸಂಯಮದಿಂದ ನಿರೂಪಿಸುವುದರ ಕಡೆಗೆ ಹೆಚ್ಚು ಲಕ್ಷ್ಯವೀಯಬೇಕಾದುದು ಅಗತ್ಯ. ಗಿರಡ್ಡಿ ಗೋವಿಂದರಾಜರ 'ರಸವಂತಿ' ರಸಸಂಪ್ರದಾಯದ ಕೆಲವು ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡು ತನ್ನ ಹಾದಿಯನ್ನು ರೂಪಿಸಿಕೊಳ್ಳುವಂತೆ ತೋರುತ್ತದೆ.

ಇದೂ ಅಲ್ಲದೆ, ಅಡಿಗರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಸಾಕ್ಷಿ'ಯ ಪ್ರಥಮ ಸಂಪುಟದ ಕವಿಗಳಾದ ಎ. ಕೆ. ರಾಮಾನುಜನ್, ಎಸ್. ಚೆನ್ನಯ್ಯ, ಪೂ. ಚಂ. ತೇ. ಕೀರ್ತಿನಾಥ, ಸಮತೀಂದ್ರ ನಾಡಿಗ, ಪಿ. ಲಂಕೇಶಪ್ಪ ಮೊದಲಾದವರನ್ನೂ, ಅರವಿಂದ ನಾಡಕರ್ಣಿ, ಹಾಗೂ ಶಂಕರ ಮೊಖಾಶಿಯವರನ್ನೂ ಇಲ್ಲಿ ಎತ್ತಿ ಹೇಳಬಹುದಾಗಿದೆ.

ಕನ್ನಡದಲ್ಲಿ ಈಚೆಗೆ ನಡೆದಿರುವ ಕಾವ್ಯರಚನೆಯ ವೈವಿಧ್ಯ, ಅದರಲ್ಲಿ ಹೊಸ ಬದುಕು ಆವಿಷ್ಕಾರಗೊಳ್ಳುತ್ತಿರುವ ರೀತಿ, ಆಯಾ ಮಾರ್ಗದ ಕಾವ್ಯರಚನೆಯಲ್ಲಿಯ ಗುಣದೋಷ, ಜೊತೆಯಲ್ಲಿ ವೈಯಕ್ತಿಕವಾಗಿ ಆಯಾ ಕವಿಯ ಗತಿ-ಪ್ರಗತಿ-ಇವುಗಳ ಪರಿಚಯವನ್ನೂ ಸ್ವಲ್ಪ ಮಟ್ಟಿಗಾದರೂ ರಸಿಕರಿಗೆ ಉಂಟುಮಾಡಿಕೊಡುವದೇ ಈ ಪರಿಶೀಲನೆಯ ಉದ್ದೇಶವಾಗಿದೆ. ಮೇಲಿನ ವಿವೇಚನೆಯಲ್ಲಿ ಎಲ್ಲಿಯಾದರೂ ಒಂದು ಮಾತು ಹೆಚ್ಚು ಇಲ್ಲವೆ ಕಡಮೆ ಎನಿಸಿದ್ದರೆ ಸಹೃದಯರು ಮನ್ನಿಸಬೇಕಾಗಿ ಕೋರುತ್ತೇನೆ. 'ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?' ಎಂಬ ಮಾತು ನನ್ನ ಧ್ಯಾನದಲ್ಲಿಯೂ ಇದೆ. ಆದುದರಿಂದ ಮೂಲ ಕಾವ್ಯವನ್ನೋದಿ ಪಡೆಯುವ ಸಂಸ್ಕಾರವೇ ಮಿಗಿಲಾದದ್ದು. ಹಾಗೆ ಓದಿ ರಸಗ್ರಹಣ ಪಡೆಯಲು ಈ ಸಮಾಲೋಕನೆಯಿಂದ ಕಿಂಚಿತ್ತಾದರೂ ನೆರವಾಗಬಹುದೆಂದು ಆಶಿಸಿದ್ದೇನೆ. ಕಾವ್ಯವನ್ನು ಓದುವದು ಯಾವಾಗಲೂ ಒಳ್ಳೆಯದು. ಅದರಲ್ಲೂ, ನಮ್ಮ ಸ್ವಂತ ಬದುಕನ್ನೇ ಕಡೆದು ತೆಗೆದ ಕಾವ್ಯವನ್ನು ಸಮಕಾಲೀನ ಕಾವ್ಯವನ್ನು–ಓದುವದು ಇನ್ನೂ ಹೆಚ್ಚು ಒಳ್ಳೆಯದು.[೧]

ಕವಿತೆಯನ್ನು ಬರೆಯುವದು ಬಹು ಸುಲಭ ಎಂದು ನಮ್ಮಲ್ಲಿ ಅನೇಕರ ಭಾವನೆಯಾಗಿದೆ. ನಿಜವಾದ ಒಳ್ಳೆಯ ಕವಿತೆಯನ್ನು ಬರೆಯುವುದು ಅಷ್ಟು ಸುಲಭವಲ್ಲ. ("Poetry is an art, not a dumping ground for emotion") ಕವಿಯ ಅಖಂಡ ಜೀವನಾನುಭವದ ಪ್ರತೀಕವಾಗಿ ಬರುವ ಕವಿತೆ ಅದೊಂದು ಸರ್ವೋತ್ಕೃಷ್ಟವಾದ ಕಲೆಯೂ ಅಹುದು. ಆದುದರಿಂದ ಅದನ್ನು ಸರ್ವಾಂಗ ಪರಿಪೂರ್ಣವಾಗಿ, ಸಂಪುಷ್ಟವಾಗಿ ರೂಪಿಸುವಲ್ಲಿ ಕವಿಯು ಮರಹು, ಆಲಸ್ಯಗಳಿಗೆ ಎಡೆಗೊಡದೆ, ಸತತವಾದ ಪರಿಶ್ರಮದಿಂದಲೂ, ಚಿತ್ತೈಕಾಗ್ರತೆಯಿಂದಲೂ, ಕಲಾ ಸಂಯಮದಿಂದಲೂ ಸಾಧಿಸಬೇಕಾಗುತ್ತದೆ. "ಘನತರ ಚಿತ್ರದ ರೂಹ ಬರೆಯಬಹುದಲ್ಲದೆ, ಪ್ರಾಣವ ಬರೆಯಬಹುದೆ? ಅಯ್ಯ" ಎಂದು ಅಲ್ಲಮಪ್ರಭು ಕೇಳಿದ್ದಾರೆ ಒಂದೆಡೆ. ಪ್ರಾಣವನ್ನೂ ಬರೆಯಬಲ್ಲ ಶಕ್ತಿ ಕಾವ್ಯಕ್ಕಿದೆ. ಅಂಥ ಕಾವ್ಯವನ್ನೂ ಕನ್ನಡ ಮರೆಯಲಿಕ್ಕಿಲ್ಲವಷ್ಟೆ?

---

೧. "A good poem is a contribution to reality. The world is never the same once a good poem has been added to it. A good poem helps to change the shape and significance of the universe, helps to extend every one's knowledge of himself and the world around him." — Dylon Thomas

ಸಣ್ಣ ಕತೆ

# ಕಣ್ಣು*

ಲೇ: ಸೋನುತಾಯಿ ಜಿ. ತೋರಗಲ್

" ರತ್ನಾ ಬಾಮ್ಮಾ ಸಾಧ್ಯವಾದಷ್ಟು ಬೇಗನೆ ತಯಾರಾಗು. ಈಗ ನಿನ್ನನ್ನು ನೋಡಲಿಕ್ಕೆ ಬರುವರು" ಎಂದು ತಂದೆ ಹೇಳಿದರು. ಮುಂದೆ ಐದು ನಿಮಿಷಗಳಲ್ಲಿ, ರತ್ನಾ ಸಿಂಗರಿಸಿಕೊಂಡು ಪಡಶಾಲೆಗೆ ಬಂದು ನೋಡಲಿಕ್ಕೆ ಬಂದವರ ತಂಡದಲ್ಲಿ ಕುಳಿತಳು. ಕುಳಿತವರಲ್ಲಿ ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನು ಕೇಳುತ್ತಿದ್ದರು.

" ಏನಮ್ಮಾ ನಿನ್ನ ಹೆಸರೇನು ?

" ರತ್ನಾ "

" ಎಷ್ಟು ಕಲಿಯುತ್ತಿರುವಿ ?

" F. Y. ನಲ್ಲಿದ್ದೇನೆ"

" ವಯಸ್ಸೆಷ್ಟು ? "

" ಹದಿನೇಳು"

" ಮ್ಯಾಟ್ರಿಕ್ ಯಾವ ವರ್ಷದಲ್ಲಾಯಿತು ? "

" ಕಳೆದ ವರುಷವೇ ಆಯಿತು"

" ಹೆಣಿಕೆ, ಹೊಲಿಗೆ ಬರುವದೇ ? "

" ಬರುತ್ತದೆ"

" ಹಾಡಲು ಬರುವದೇ ? "

" ಹೂಂ, ತಕ್ಕಮಟ್ಟಿಗೆ ಬರುತ್ತೆ "

" ಹಾಗಾದರೆ ಒಂದು ದೇವರನಾಮ ಹೇಳಮ್ಮ"

" ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವನು . . . . . . ಎಂಬ ದಾಸರ ಕೀರ್ತನೆಯನ್ನು ಭಾವಪೂರ್ಣವಾಗಿ ಹೇಳಿದಳು. ಕೇಳಿದವರು ತಲೆದೂಗಿದರು. ನೋಡಿಯಾಯಿತು, ಮುಂದೆ ಹತ್ತು ಹದಿನೈದು ನಿಮಿಷಗಳಲ್ಲಿ ಬಂದವರು ಹೋದರು. ಇನ್ನು ಉತ್ತರ ಏನು ಹೇಳುವರೋ ಯಾರಿಗೆ ಗೊತ್ತು ಎಂದು ರತ್ನಳ ತಂದೆ ತಾಯಿ ಚಾತಕ ಪಕ್ಷಿಯಂತೆ ದಾರೀ ನೋಡುತ್ತಿದ್ದರು. ರತ್ನಳನ್ನು ತೋರಿಸಿ ತೋರಿಸಿ ತಂದೆ ತಾಯಿಗಳಿಗೆ ಬೇಸರ ಬಂದಿತ್ತು. ಒಂದು ದಿನ ಪತ್ರ ಬಂದಿತು, " ರತ್ನಾ ಒಕ್ಕಣ್ಣು ಹುಡುಗಿ, ನಮಗೆ ಬೇಡ " ಎಂದು. ಅಯ್ಯೋ ! ತಂದೆ ತಾಯಿಗಳಿಗೆ ವಜ್ರಾಘಾತ.

ರತ್ನಾ ಗುಂಡುಗುಂಡಾಗಿ ಗುಲಾಬಿ ವರ್ಣದ ದುಂಡನೆಯ ಮೊಗದ ಹುಡಿಗಿ. ನೀಳವಾದ ಎರಡು ಜಡೆಗಳನ್ನು ಬಿಟ್ಟು ತಲೆಯಲ್ಲಿ ಹೂ ಮುಡಿದು ನಡೆದರೆ ದೃಷ್ಟಿ ತಾಗುವದೇನೋ ಎಂದೆನಿಸುವುದು. ಆದರೆ ದೇವರು ಅವಳಿಗೆ ಒಂದೇ ಕಣ್ಣು ಕೊಡಬೇಕೆ ? ಯಾವ ವಿದ್ಯೆಗಳಿಗೂ ಅವಳಲ್ಲಿ ಕೊರತೆ ಇರಲಿಲ್ಲ. ಓದು ಬರೆಯುವುದರಲ್ಲಿ ಮುಂದು, ಹೊಲಿಗೆ ಹೆಣಿಕೆಗಳಲ್ಲಿ ಎತ್ತಿದ ಕೈ, ಆಟಪಾಟಗಳಲ್ಲಿ ಮೊದಲನೇ ಬಹುಮಾನ ಇವಳದೇ, ಕತೆ ಕಾದಂಬರಿ ಬರೆಯುವದರಲ್ಲಿ ಒಳ್ಳೆಯ ಜಾಣೆ. ಆದರೆ ಒಂದೇ ಕೊರತೆ 'ಒಕ್ಕಣ್ಣು'. ದೇವರು ಎಲ್ಲವನ್ನೂ ಕೊಟ್ಟು ಕಣ್ಣು ಏಕೆ ಮರೆತಿರಬಹುದು ?

ರತ್ನಳಿಗೆ ಉಳಿದ ಯಾವುದಕ್ಕೂ ಕೊರತೆ ಇರಲಿಲ್ಲ. ಆದರೆ ತನ್ನಿಂದ ತನ್ನ ತಂದೆ ತಾಯಿ ಕಷ್ಟಪಡುತ್ತಾರಲ್ಲಾ ಎಂಬ ಕಳವಳ. ಅದಕ್ಕೆ ಯಾರು ಹೊಣೆ ? ಅವಳನ್ನು ನೋಡಿ ಹೋದವರೆಲ್ಲ 'ನ'ಕಾರ ಉತ್ತರವನ್ನೇ ಕೊಡುತ್ತಿದ್ದರು ಹೊರತು ಅವಳ ಗುಣಗಳನ್ನು ನೋಡುತ್ತಿರಲಿಲ್ಲ. ತನ್ನನ್ನು ತಾನು ಸಿಂಗರಿಸಿಕೊಂಡು ಕನ್ನಡಿಯಲ್ಲಿ ನೋಡಿದಾಗ ಅವಳ ಮನಸ್ಸು 'ಅಯ್ಯೋ' ಎನ್ನುತ್ತಿತ್ತು. ಇನ್ನೊಂದು ಕಣ್ಣಿದ್ದರೆ? ಆದರೆ ಹಣೆಯ ಬರಹ ಯಾರು ತಪ್ಪಿಸಬಹುದು ? ಅವಳ ಜೀವನಸಾಗರ ಹಾಲಿನದಿದ್ದರೂ ಒಕ್ಕಣ್ಣು ಉಪ್ಪಿನ ಹರಳಾಗಿತ್ತು. ಜೀವನ ನೌಕೆ ದಡ ಕಾಣದೆ ಹೊಯ್ದಾಡುತ್ತಿತ್ತು. ಆದರೂ ತನ್ನ ಜೀವನವನ್ನು ಚೆನ್ನಾಗಿಸಿ, ಮಾನಮರ್ಯಾದೆಯಿಂದ ಬದುಕಿ ಸಾಯಬೇಕೆಂಬುದೊಂದೇ ಅವಳ ಹಗಲಿರುಳಿನ ಹಂಬಲ. ಕುಳಿತಾಗ ನಿಂತಾಗ ಎಷ್ಟೆಷ್ಟೋ ಗಾಳಿಗೋಪುರಗಳನ್ನು ಕಟ್ಟುವಳು.

" ಅಯ್ಯೋ ನಾನು ಹೋದ ಜನ್ಮದಲ್ಲಿ ಯಾವ ಅಪರಾಧ ಮಾಡಿರುವೆನೆಂದು ಈ ಜನ್ಮದಲ್ಲಿ ನನ್ನ ಅವಸ್ಥೆ ಹೀಗೆ. ನನ್ನ ಪತಿಯನ್ನು ಹರನೆಂದು–ಹರಿಯೆಂದು ನೋಡಿಕೊಳ್ಳುವೆ. ಎಲ್ಲ ದುಃಖವನ್ನೂ ಅವನಿಗಾಗಿ ಸಹಿಸುವೆ. ಅವನ ನಿರಾಶೆಯ ಹೆಣಕ್ಕೆ ಸಂಜೀವಿನಿಯಾಗುವೆ. ಅವನ ನೋಯುವ

---

* ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ದಿವಂಗತ ಶೇಷಮ್ಮ ಭಾಸ್ಕರರಾಯರ ಕನ್ನಡ ಸಣ್ಣ ಕಥಾಸ್ಪರ್ಧೆಯಲ್ಲಿ ಎರಡನೇ ಬಹುಮಾನ ಗಳಿಸಿದ ಕಥೆ.

ಮನಸ್ಸಿಗೆ ಅಮೃತಧಾರೆ ಎರೆಯಬಲ್ಲೆ. ನನ್ನ ಕಣ್ಣಾಲಿಗಳಲ್ಲಿ ಅವನನ್ನು ಮಲಗಿಸಿ ರಮಿಸಬಲ್ಲೆ. ಅವನಿಗಾಗಿ ತಾಯಿಯಾಗಿ, ಅಕ್ಕನಾಗಿ, ಮಂತ್ರಿಯಾಗಿ, ದಾಸಿಯಾಗಿ, ಪತ್ನಿಯಾಗಿ ಕುಣಿಯಬಲ್ಲೆ, ಅಳಬಲ್ಲೆ, ನಗಬಲ್ಲೆ. ನನ್ನ ಜೀವನವನ್ನೇ ಅವನಿಗೆ ಮುಡಿಪಿಡಬಲ್ಲೆ. ಗುಡಿಸಲನ್ನು ಗುಡಿಯನ್ನಾಗಿ ಮಾಡಬಲ್ಲೆ. ಆದರೆ ನಾನೆಂಥ ದುರ್ದೈವಿ? ಯಾವ ಗಂಡಿನ ಮನಸ್ಸಿಗೂ ನಾನು ಒಪ್ಪಿಗೆಯಾಗಲಿಲ್ಲ. ಇನ್ನೂ ನನ್ನ ಹಣೆಯಲ್ಲಿ ಎಷ್ಟು ಜನಗಳ ಮುಂದೆ ತಪ್ಪಿತಸ್ಥಳಂತೆ ಕುಳಿತು ಅವರು ಕೇಳಿದ ಪ್ರತಿ ಪ್ರಶ್ನೆಗೆ ಅಪರಾಧಿಯಂತೆ ಉತ್ತರ ಕೊಡಬೇಕೊ? ಇನ್ನೂ ಎಷ್ಟುಜನ ಈ ಒಕ್ಕಣ್ಣು ನೋಡಿ 'ನ'ಕಾರ ಹೇಳಬೇಕೊ? ಇನ್ನೂ ಎಷ್ಟು ವರ್ಷ ನನ್ನ ತಂದೆ ತಾಯಿಗಳು ಕೊರಗಬೇಕೊ? ದೇವರೆ, ಈ ಒಕ್ಕಣ್ಣಿನ ಹೆಣ್ಣನ್ನು ಯಾವ ಕಾರ್ಯಕ್ಕಾಗಿ ಈ ಜಗದ ಸೆರೆಮನೆಯಲ್ಲಿ ತಂದಿರುವೆ? ಈ ಹೇಸಿ ನೀಚ ಪ್ರಪಂಚದಿಂದ ನನ್ನನ್ನು ದೂರಮಾಡು. ನಾನೇ ನಾನಾಗಿ ಕಲ್ಪನೆಯ ಸ್ವರ್ಗದಲ್ಲಿ ಸಾವಿತ್ರಿ, ರತಿ, ದ್ರೌಪದಿಯಾಗಿ ಬಾಳಬಲ್ಲೆ. ನನ್ನ ತಂದೆ ತಾಯಿಗಳಿಗೆ ನಾನು ಲಗ್ನವಾಗಲೇಬೇಕೆಂಬ ಹಂಬಲವೇಕೆ? ಮದುವೆಯಾಗದೆ ಮನುಷ್ಯಳಾಗಿ ಬಾಳಲಾರೆನೆಂದು ಅವರ ಭಾವನೆಯೆ? ನನ್ನನ್ನು ದಡ್ಡಳನ್ನಾಗಿ ಮಾಡಿ ಅದೂ ಒಂದು ಕಣ್ಣು ಏಕೆ ಕೊಡಲಿಲ್ಲ? ಮುಕ್ಕಣ್ಣನೇ ನೀನೇ ನನಗೊಂದು ಕಣ್ಣನ್ನೇಕೆ ಕೊಡಲಿಲ್ಲ? ಕಣ್ಣಿಲ್ಲದಿದ್ದರೆ ಗೃಹಿಣಿಯಾಗಲು ಬಾರದೆ? ಕಣ್ಣು ಕೊಡದ ದೇವರ ತಪ್ಪೆ? ಅಥವಾ ಇಲ್ಲದ ಕಣ್ಣನ್ನು ಸದ್ಗುಣಗಳಲ್ಲಿ ತೇಲಿಸಿ ನೋಡುವ ಕಣ್ಣಿಲ್ಲದ ಗಂಡುಗಳ ತಪ್ಪೆ? ಈ ವಿಜ್ಞಾನ ಯುಗದಲ್ಲಿ ಕಣ್ಣಿಲ್ಲದವರು ಕಣ್ಣು ಪಡೆದವರಿದ್ದಾರೆ. ಅದೂ ಸಹ ನನಗೆ ಲಭಿಸದೆ ಹೋಗಬೇಕೆ? ತಂದೆ ತಾಯಿ ಕಣ್ಣುಕೊಟ್ಟು ನನಗೆ ಕಣ್ಣು ತರಿಸಲು ಸಿದ್ಧರಿದ್ದರೂ ವಿಜ್ಞಾನ ಮುಗ್ಗರಿಸಬೇಕೆ? ಎಂಥೆಂಥ ಡಾಕ್ಟರರೂ ನನ್ನಂಥ ಹುಟ್ಟುಕುರುಡಿಗೆ ದೃಷ್ಟಿದಾನ ಕೊಡದೆ ಹೋಗಬೇಕೆ? ಕಣ್ಣಿಲ್ಲದ ನಾನು ಬಾಳಲು ಅನರ್ಹಳೇ? ಕಣ್ಣಿಲ್ಲದ ಹೆಲನ್‌ಕೆಲರಳಲ್ಲಿದ್ದ ಪ್ರತಿಭಾಶಕ್ತಿ ಅಣುವಾದರೂ ಎಷ್ಟು ಮಂದಿ ಕಣ್ಣಿದ್ದವರಲ್ಲಿದೆ? ಇಂದಿನ ಪ್ರಪಂಚದಲ್ಲಿ ದೇಹಸೌಂದರ್ಯವೇ ಸೌಂದರ್ಯ. ಅದಕ್ಕೇ ಬೆಲೆ. ಸದ್ಗುಣವೂ ಸೌಂದರ್ಯವೆಂದು ನಂಬುವ ನರನಿಲ್ಲ. ಮನೋವೈಶಾಲ್ಯತೆಯನ್ನು ಕಾಣುವ ಜನವಿಲ್ಲ. ಏನೇ ಇರಲಿ. ಇಂದಿಗೆ ನಾನು ಯಜ್ಞಪಶು. ಲಗ್ನವಿಲ್ಲದೆ ನಾನು ಬಾಳಬಹುದೆಂದು ಹೇಳಿದರೂ ನನ್ನ ತಾಯಿ ಒಪ್ಪಳು. ಏನು ಮಾಡಲಿ?

* * *

"Hello Miss ರತ್ನಾ" ಎಂದು ತಾನೀ ಕೂಗಿದ.

"Hello ತಾನೀ ಏನು ಎಲ್ಲ ಪಿರಿಯಡ್ಸ ಮುಗಿದವೆ? ಪರೀಕ್ಷೆಯಂತೂ ಸಮೀಪ ಸಮೀಪ ಬರುತ್ತಿದೆ. ಅಭ್ಯಾಸ ನನ್ನನ್ನು ಬಿಟ್ಟು ದೂರ ದೂರ ಸರಿಯುತ್ತಿದೆ. ನನ್ನ ದೈವ" ಎಂದು ಕಾಲೇಜು ಕಾಂಪೌಂಡಿನಲ್ಲಿ ಹೋಗುತ್ತಿದ್ದ ರತ್ನಾ ಉತ್ತರಿಸಿದಳು.

"ಏನ್ರೀ ರತ್ನಾ, ನೀವೆ ಹೀಗಂದ್ರೆ ಹೇಗೆ? ನೀವೆಲ್ಲ ಸ್ಕಾಲರ ಜನ. ಆಮೇಲೆ ನಮ್ಮ ಗತಿ?"

"ನಿಮಗೇನಾಗಿದೇರಿ? ಅದಕ್ಕೆ ನೀವೂ ಸ್ಕಾಲರಸಿಪ್ ತೆಗೆದುಕೊಳ್ಳೊದು. ಅದಿರಲಿ ಯಾಕೋ ಈ ಹೊತ್ತು ಬಹಳ ಸಂತೋಷದಲ್ಲಿದ್ದಂತೆ ಕಂಡುಬರುತ್ತೆ?"

ತಾನೀ ನಸುನಗುತ್ತ "ಮೋಡ ಸುಳಿದರೆ ನವಿಲು ನರ್ತಿಸದೆ? ನೋಡಿ ರತ್ನಾ ಈಗೆರಡು ದಿನಗಳಿಂದ ನಿಮ್ಮ ಮುಖವೇ ಕಂಡಿರಲಿಲ್ಲ. ಈ ಹೊತ್ತೂ ಕಾಣುತ್ತೀರೋ ಇಲ್ಲವೋ ಎಂದುಕೊಂಡಿದ್ದೆ. ದೇವರ ದಯ ತಾವು ಉದಯಿಸಿದಿರಿ."

"ಏನ್ರೀ ಹೀಗೆಲ್ಲ ಮಾತನಾಡಿದ್ರೆ, ಇಷ್ಟು ಕಾಲೇಜ ಕಟ್ಟೆ ಹತ್ತಿದರೂ ಕೂಡ ಇಂಥ ಮಾತು ಬಿಟ್ಟೇ ಇಲ್ಲವಲ್ಲ"

"ಮನಸ್ಸಿಗೆ ಅನ್ನಿಸಿದ್ದು ಹೇಳಿದರೆ ಸಿಟ್ಟೆ? ರತ್ನಾ, ನಿಮಗೆ ಈ ಸೀರೆ ಚೆನ್ನಾಗಿ ಒಪ್ಪುತ್ತೆ ನೋಡಿ"

"ಛಿ! ಎಂಥ ಮಾತು? ಹೀಗೆಲ್ಲ ಹರಟೆದರೆ ಹೊರಟ್ಹೋಗ್ತೀನಿ. ಅಯ್ಯೊ, ಗಂಟೆಯಾಯಿತು, ಇದೊಂದು ಪೀರಿಯಡ್ ಮುಗಿಸಿಕೊಂಡು ಮನೆಗೆ ಹೋಗಬೇಕು."

"ಒಳ್ಳೇದು Good bye."

"bye . . . bye" ಎಂದು ರತ್ನಾ ತನ್ನ ವರ್ಗ ಸೇರಿದಳು.

ತಾನೀ ರತ್ನಳಿಗಿಂತ ಒಂದು ವರ್ಷ ಮುಂದೆ ಕಲಿಯುತ್ತಿದ್ದ. ಆದರೂ ರತ್ನಳಲ್ಲಿ ಆಸಕ್ತಿಯುಂಟಾಗಿ ತಾನಾಗಿಯೇ ಅವಳ ಜೊತೆ ಮಾತನಾಡುತ್ತಿದ್ದ. ದಿನಕ್ಕೆ ಒಂದು ಸಲವಾದರೂ ರತ್ನಳ ಮುಖ ನೋಡಲೇ ಬೇಕು. ಒಂದು ತಾಸು ತಪ್ಪಿದರೂ ಅಡ್ಡಿ ಇಲ್ಲ. ರತ್ನಳ ಭೆಟ್ಟಿಯಾಗಲೇ ಬೇಕು. ಇಲ್ಲದಿದ್ದರೆ ಚಡಪಡಿಕೆಯಾಗುತ್ತಿತ್ತು. ಎಲ್ಲಿಲ್ಲದ ಅಸಮಾಧಾನ ಅವನಲ್ಲಿ ತಲೆದೋರುತ್ತಿತ್ತು.

ರತ್ನಳು ಅವನ ಸ್ನೇಹ ಕಡಿಯಲು ಪ್ರಯತ್ನಿಸಿದ್ದಳು. "ತಾನೀ ಯಾರು? ಅವನೇಕೆ ಸುತ್ತಿ ಸುತ್ತಿ ಬಂದು ಮಾತನಾಡಿಸುವನು?" ಕಾಲೇಜಿನ ಹುಡುಗರು ಏನೆನ್ನಬಹುದು? ನಾನು ದಾರಿ ತಪ್ಪಿಸಿ ಹೋದರೂ ಅದೇ ದಾರಿಯಲ್ಲಿ ಪ್ರಸನ್ನನಾಗುವನು. ಆದರೆ ಅವನ ನಡತೆಯಲ್ಲಿ ಅಸ್ವಾಭಾವಿಕತೆ

ಇಲ್ಲವಲ್ಲಾ ? ಅವನಿಗೆ ನನ್ನ ಬಗ್ಗೆ ಕುಕಲ್ಪನೆ ಇರಬಹುದೆ ? ಛೆ ! ಸಾಧ್ಯವಿಲ್ಲ, ಅವನೆಂದೂ ಹತ್ತು ಜನರೆದುರು ನನ್ನನ್ನು ಕುಚೇಷ್ಟೆಗಾಗಿ ಮಾತನಾಡಿಸುವದಿಲ್ಲ. ಗೇಲಿ ಮಾಡುವುದಿಲ್ಲ. ನನ್ನೆದುರು ಅದೆಂಥ ಗಾಂಭೀರ್ಯದಿಂದ ನಡೆದು ಬರುವನು ? ಗೆಳೆಯರಲ್ಲಿಯೂ ಒಂದಾಗಿರುವನು. ನನಗಿಂತಲೂ ಜಾಣ. ನನ್ನಿಂದ ಅಭ್ಯಾಸ ಅರಿಯಲು ಜಕಟೇಕೆ. ? ಬಡವನೆನ್ನಲೆ ? ಸಾಧ್ಯವಿಲ್ಲ, ಹಣಕ್ಕೂ ಕೊರತೆ ಇಲ್ಲ. ಏನು ನನ್ನ ಬಗ್ಗೆ... ಏನಾದರೂ ಕಲ್ಪಿಸಿಕೊಂಡಿರಬಹುದೇ ? ಅದೂ ಹೇಗೆ ಸಾಧ್ಯ ? ಅವನು ಶ್ರೀಮಂತ-ನಾನು ಸಾದಾ ಮನೆತನದ ವಳು. ಅವನ ಜಾತಿ ಬೇರೆ ನನ್ನ ಜಾತಿ ಬೇರೆ. ಅದೇನೆ ಇರಲಿ. ಆದಷ್ಟು ಅವನನ್ನು ತಪ್ಪಿಸಿ ಸ್ನೇಹ ಮುರಿದೇ ಹಾಕುವೆ ಎಂದು ಏನೇನೊ ಯೋಚಿಸಿದಳು.

* * *

ಮನೆಯಲ್ಲಿ ವರಗಳ ಗೊಂದಲ. ತಾಯಿ ತಂದೆಗಳ ಕೊರಗು. ಕಾಲೇಜಿನಲ್ಲಿ ತಾನಿಯ ತೊಂದರೆಗಳಲ್ಲಿಯೇ ಎರಡು ವರ್ಷಗಳುರುಳಿದವು. ದಿನ ದಿನಕ್ಕೆ ತಾನಿಯ ಸಂದರ್ಶನ ಕಡಿಮೆ ಮಾಡಲು ರತ್ನಾ ಪ್ರಯತ್ನಿಸುತ್ತಿದ್ದಳು. ಈಗೊಂದು ತಿಂಗಳಿಂದ ಅವಳು ಅವನನ್ನು ಮಾತನಾಡಿಸಿರಲೇ ಇಲ್ಲ. ಎಂದಿನಂತೆ ಒಂದು ದಿನ ರತ್ನಾ ಲಾಯಬ್ರರಿಯಲ್ಲಿ ಕಾಲಿಕ್ಕುತ್ತಿರುವಾಗ ತಾನೀ ಎದುರಿಗೆ ಬಂದು ಒಂದು ಕಾಗದ ಕೊಟ್ಟ. "ಏನಿದು ತಾನೀ ?" ಎಂದು ಕೇಳಿದರೆ "ಓದಿ ನೋಡಿ. ನನಗೆ ತಲೆ ಸಿಡಿಯುತ್ತಿದೆ. ಒಳ್ಳೇದು ಬರುವೆ. ಬಾಯ್ ಬಾಯ್." ರತ್ನಾ ಏನಾದರೂ ಕೇಳಬೇಕೆನ್ನುವಾಗಲೇ ಅವನು ಮಿಂಚಿಹೋಗಿಬಿಟ್ಟಿದ್ದ. ರತ್ನಾ ಆದನ್ನು ಓದಿದಳು. ಅದು ಹೀಗಿತ್ತು.

. . . . ರತ್ನಾ,

ಓದುವಾಗ, ನಿಂತಾಗ, ಕುಳಿತಾಗ, ಮಾತನಾಡುವಾಗ ನಿಮ್ಮ ಮೂರ್ತಿ ಏಕೆ ಬಂದು ನಿಲ್ಲುತ್ತದೆ? ಇದರಿಂದ ಪರೀಕ್ಷೆ ಪಾಸು ಆಗುವೆನೋ ಇಲ್ಲವೋ ಎಂಬ ಅಧೈರ್ಯ ನನ್ನಲ್ಲಿ ಮೂಡುತ್ತಿದೆ. ನಾನು ಕುಹಕನೆಂದಿರಾ ? ಹಲವು ಹೂ ಸುತ್ತುವ ಕಿಡಿಗೇಡಿ ಭೃಂಗವೆಂದಿರಾ ? ಜೀವನದಲ್ಲಿ ತನಗೊಪ್ಪುವ ಜೊತೆಯನ್ನು ಒಮ್ಮೆ ನಿರ್ಧರಿಸಿದ ಮೇಲೆ ಅದನ್ನು ಪಡೆಯಬೇಕೆಂಬ ಆಶೆ ನೀಚವೆ ? ಜಾತಿಯಲ್ಲಿ ನಿಮಗೆ ಅಂಥ ಶ್ರದ್ಧೆಯೆ ? ನನ್ನೊಡನೆ ಮಾತನಾಡಿದರೂ ಸಹ ಜಾತಿಗೆಡುವಿರೆಂಬ ಭಾವನೆ ನಿಮ್ಮಲ್ಲಿ ಮೂಡಿದೆಯೆ? ನನ್ನಲ್ಲಿ ನೀವು ಕಂಡ ಹೇಯ ನಡತೆ ಯಾವದು? ನೀವು ನನ್ನಲ್ಲಿ ಯಾವದೇ ಗುಣವನ್ನು ಸೇರಿರದಿದ್ದರೆ ಬಿಡಿ. ನಾನು ನಿಮಗೆ ಬೇಡವಾಗಿದ್ದರೆ ಬಿಡಿ. ಆದರೆ ನಾನು ಮಾತ್ರ ಮನದ ಸುಪ್ಪತ್ತಿಗೆಯಲ್ಲಿ ನಿಮ್ಮನ್ನು ಓಲಾಡಿಸಿ ನನ್ನ ಕಣ್ಗೊಂಬೆಯಲ್ಲಿ ನಿಮ್ಮನ್ನು ನಿಲಿಸಿ ಚಿರಂತನ ಪ್ರೇಮ ಧಾರೆಯನ್ನೆರೆಯುತ್ತಿರುವೆ. ನೀವು ಒಪ್ಪಿದರೆ ಇಂದೇ ನನ್ನ ಸೌಭಾಗ್ಯ ಒಡತಿಯಾಗಬಹುದು.

ಎಂದೆಂದಿಗೂ ನಿಮ್ಮವನೇ ಆದ
ತಾನೀ.

ರತ್ನ ಇದನ್ನು ಓದಿದಳು. ಸಾವಿರ ಬಾಣಗಳು ಒಮ್ಮೆಲೆ ನಟ್ಟಂತಾದವು. ಅಯ್ಯೋ ಇದೇನು ಘಾತ ! ನನ್ನ ಜಾತಿಗೆ ಅವನ ಜಾತಿಗೆ ಎಷ್ಟು ಭೇದ ? ತಾನೀ ಅದ್ಹೇಗೆ ವಿಚಾರ ಮಾಡಿರುವನು ? ಎಂಥ ಹುಚ್ಚು ಕಲ್ಪನೆ? ಇದೆಂದಾದರೂ ಸಾಧ್ಯವೆ ? ನನಗೆ ಅವನಿಗೆ ಅಜಗಜಾಂತರವಿರುವಾಗ ನನ್ನನ್ನು ಹೀಗೆ ತಿಳಿದುಕೊಳ್ಳಬೇಕೆ? ಅದು ಅಷ್ಟು ಸುಲಭ ಸಾಧ್ಯವೆ ? ನನ್ನನ್ನು ಒಕ್ಕಣ್ಣಿ ಎಂದು ಜನ ಒದ್ದೊಗೆಯುತ್ತಿರುವಾಗ ಇವನು ಒಲಿದು ಬಂದನೆ ? ನನ್ನಲ್ಲಿ ಅವನು ಮೆಚ್ಚಿದ್ದೇನು ? ಯಾವ ಕಣ್ಣಿನಿಂದ ಅವನು ನನ್ನನ್ನು ನೋಡಿದ ? ಅವನು ನನಗೆ ಬೇಕೆ ? ಛೆ ! ಸಾಧ್ಯವಿಲ್ಲ. ಅಂಥ ವಿಚಾರ ಕನಸಿನಲ್ಲಿ ಕೂಡ ಮಾಡಿಲ್ಲ. ನನ್ನ ಜಾತಿಯನ್ನು ನಾನು ಕಾಯ್ದುಕೊಳ್ಳದಿದ್ದರೆ ಜೀವನದಲ್ಲಿ ನಾನು ಏನು ಸಾಧಿಸಿದ ಹಾಗಾಯಿತು ? ಇದೆಂದಿಗೂ ಸಾಧ್ಯವಿಲ್ಲ. ತಾನೀ, ಈ ಹೊತ್ತಿನ ನಿನ್ನ ನಡತೆ ನಿನ್ನ ಚೀಟಿ ನನ್ನ ತಲೆಯಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ, ನಿನಗೆ ಏನಾಗಿದೆ ? ನೀನು ನನ್ನನ್ನು ಆ ರೀತಿಯಾಗಿ ತಿಳಿದುಕೊಳ್ಳಬಹುದೆಂದು ನನ್ನ ದಡ್ಡ ಬುದ್ಧಿಗೆ ಹೊಳೆದಿರಲಿಲ್ಲ. ನಿನ್ನ ಗೆಳೆತನವಾಗುವ ಮೊದಲೆ ನೀನು ಹೀಗಿದ್ದಿ ಎಂದು ತಿಳಿದಿದ್ದರೆ ನಿನ್ನ ನೆರಳಿಗೆ ಕೂಡ ಹಾಯುತ್ತಿರಲಿಲ್ಲ. ತಾನೀ, ನಿಜವಾಗಿಯೂ ನನ್ನನ್ನು ಪರೀಕ್ಷಿಸಿ ನೋಡು. ನನ್ನ ಆಳದಲ್ಲಿ ನಿನ್ನ ವಿಷಯದಲ್ಲಿ ಅಂಥ ಯಾವವೂ ಕುಕಲ್ಪನೆಗಳಿಲ್ಲವೆಂದು ನನ್ನ ಯಾವ ನಡತೆ ನಿನಗೆ ಹಾಗೆ ತಿಳಿದುಕೊಳ್ಳಲು ಹಚ್ಚಿತು ? ತಾನೀ, ಹೇಳು. ನಿನ್ನ ಗೆಳೆತನವನ್ನು ನಾನಾಗಲೇ ಸಂಪಾದಿಸಿರುವೆ. ಈಗ ಆ ಗೆಳೆತನವನ್ನು ಬಿಡುವುದೂ ಕಷ್ಟ. ಆದರೆ ಇಷ್ಟು ಮಾತ್ರ ಹೇಳಬಲ್ಲೆ, ಆ ಕಲ್ಪನೆ ತಪ್ಪೆಂದು. ಯಾಕೆಂದರೆ ನಾವು ಸಜಾತಿಯವರಲ್ಲ. ಮತ್ತು ನಾನೆಂದೂ ನಿನಗಾಗಿ ಆಶೆ ಮಾಡಿಲ್ಲ. ಹಾಗೆಂದೂ ವಿಚಾರ ಮಾಡಿಲ್ಲ. ನಾನು ಕಾಲೇಜ ಕಟ್ಟೆ ಹತ್ತಿದ್ದರೂ ಕೂಡ ಅಂತರ ಜಾತಿಯ ವಿವಾಹ ಮಾಡಿಕೊಳ್ಳುವೆನೆಂದು ತಿಳಿದುಕೊಳ್ಳಬೇಡ. ನನ್ನ ತಂದೆ ತಾಯಿ ಮನ ಒಪ್ಪಿ ಕೊಟ್ಟ

ಮನೆಗೆ ಅಗ್ನಿಸಾಕ್ಷಿಯಾಗಿ ಒಬ್ಬನ ಕೈ ಹಿಡಿದು ಮರ್ಯಾದೆಯಿಂದ ಸಂಸಾರ ಸಾಗಿಸಿ ಈ ಜೀವನವನ್ನು ನೀಗ ಬೇಕೆಂದಾಸೆ. ತಾನೀ, ತಿಳಿಯಿತೆ? ಏನು? ಈಗ ಆ ವಿಚಾರ ಮರವಾಗಿ ಬಿಟ್ಟಿದೆಯೆ? ಅಯ್ಯೋ ತಾನೀ ಇದೇನು ಅನರ್ಥ ಮಾಡಿಕೊಂಡೆ? ನಿನ್ನ ಜೀವನದಲ್ಲಿ ನಾನು ಮುಳ್ಳಿನ ದಾರಿಯಾಗಿ ಬಂದೆನಲ್ಲ. ಬೆಂಕಿಯ ಭೂತವಾಗಿ ನಿನ್ನನ್ನು ಆವರಿಸಿದೆನಲ್ಲ. ತಾನೀ, ನಾನೇನು ಮಾಡಲಿ? ನನ್ನನ್ನು ಸಂಪೂರ್ಣ ಮರೆತುಬಿಡು. ತಾನೀ, ನಾನು ಸತ್ತೆನೆಂದು ತಿಳಿ. ಏನು ಹೃದಯ ಮರೆಯುವದು ಅಸಾಧ್ಯವೆನ್ನುವಿಯಾ? ನನ್ನ ಜೀವನದಲ್ಲಿ ಆಗಬಾರದ್ದೆಲ್ಲವೂ ಆಗತೊಡಗಿದೆ. ಒಬ್ಬರಿಗೆ ಕಲ್ಲಾಗಿ ಕಂಡದ್ದು ಇನ್ನೊಬ್ಬರಿಗೆ ದೇವರಂತೆ ಕಾಣುತ್ತದಲ್ಲ. ಎಲ್ಲ ಅನರ್ಥಕ್ಕೆ ಹೆಣ್ಣೇ ಕಾರಣವೆನ್ನುವರು. ಹಾಗಾದರೆ ನಾನೊಂದು ಅನರ್ಥಕಾರಿಯಾದ ಹೆಣ್ಣೆ? ನಾನು ಹುಟ್ಟದ್ದಿಲ್ಲ ಮಣ್ಣೇ? ಎಲ್ಲವೂ ನನ್ನ ಹಣೆ ಬರಹ ಎಂದು ಏನೇನೋ ಯೋಚಿಸುತ್ತ ಹೆಜ್ಜೆ ಹಾಕುತ್ತಿದ್ದಾಗ ಮನೆ ಬಂದಿತು.

* * *

ರತ್ನಾ ತಾನಿಯನ್ನು ಪ್ರತ್ಯಕ್ಷ ಕಂಡು ಅವನ ವಿಚಾರ ಸರಣಿಯನ್ನು ಸಾಮೋಪಾಯದಿಂದ ತಿರುಗಿಸಬೇಕೆಂದ್ರ ಬಯಸಿದ್ದಳು. ಆದರೆ ತಾನೀ ಆ ದಿನದಿಂದ ಕಂಡಿರಲೇ ಇಲ್ಲ. ಅವನ ಬಗ್ಗೆ ಯಾರನ್ನು ಕೇಳುವುದಕ್ಕೂ ರತ್ನಳಿಗೆ ಸಂಕೋಚ. ಅವನ ಮನೆ ಗೊತ್ತಿದ್ದರೂ ಅಲ್ಲಿ ಹಾಯವಳೂ ಅಲ್ಲ. ಈ ಹೊಯ್ದಾಟದಲ್ಲಿಯೇ ವಾರ ಕಳೆದು ಹೋಯಿತು.

ರತ್ನಳನ್ನು ಈ ಹೊತ್ತು ಮತ್ತೆ ನೋಡಲು ಬರುವವರಿದ್ದರು. ತಾಯಿ ತಂದೆಗಳು ಅದಕ್ಕಾಗಿ ಸಿದ್ಧತೆ ನಡೆಸಿದ್ದರು. ಆದರೆ ರತ್ನಳಿಗೆ ಮಾತ್ರ ಅದು ಮರಣ ಶಿಕ್ಷೆ ಇದ್ದ ಹಾಗೆ. ಆದರೇನು? ಲಗ್ನವಿಲ್ಲದೆ ಮುಕ್ತಿ ಎಲ್ಲಿ? ನಾನು ಬ್ರಹ್ಮಚಾರಿಯಾಗಿ ಉಳಿದರೆ ನನ್ನ ತಾಯಿ ತಂದೆಗಳಿಗೆ ಶಾಂತಿ ಹೇಗೆ? ಹಾಗೆಯೇ ಉಳಿದರೆ ಸಮಾಜದಲ್ಲಿ ಸ್ಥಾನವೆಲ್ಲಿ? ಅದಕ್ಕಾಗಿ ಲಗ್ನವಾಗಲೇಬೇಕು. ನೋಡಿದವರ ಕಣ್ಣಿಗೆ ನಾನು ಚೆಪ್ಪೆಯ ಅನ್ನವಾಗಲೇಬೇಕು. ನನ್ನ ಪ್ರಾರಬ್ಧದಲ್ಲಿ ಇನ್ನೂ ಏನೇನು ಬರೆದಿದೆಯೋ ಯಾರಿಗೆ ಗೊತ್ತು? ಒಮ್ಮೆ ತಾನೀ ಅವಳೆದುರು ಬಂದು ನಿಂತಂತಾಯಿತು. ಕೈ ಮಾಡಿ ಕರೆದಂತಾಯಿತು. "ಬಾ ರತ್ನಾ ಬಾ ನೀನು ಇಷ್ಟೇಕೆ ಅಧೀರಳಾಗಿರುವಿ? ಕೈ ಹಿಡಿದು ಕರೆದು ಕಣ್ಣು ರೆಪ್ಪೆಯಲ್ಲಿ ಮಲಗಿಸಿ ಚಪ್ಪಡಿಸುವೆ. ಏಕೆ ತಳಮಳಿಸುವೆ? ಜಾತಿಗೆ??? ಥೆ! ಪ್ರೀತಿಯೊಂದಿದ್ದರೆ ಸಾಕು. ಅದರಲ್ಲಿ ಜಾತಿ ಏಕೆ? ರತ್ನಾ ನಾನು ನಿನಗೆ ಬೇಡವಾಗಿದ್ದರೂ ನೀನು ನನಗೆ ಬೇಕು. ನೀನಿಲ್ಲದಿದ್ದರೆ ನನ್ನ ಜೀವನವು ಮರುಭೂಮಿಯಾಗುವದು. ನೀನು ಎಲ್ಲರಿಗೂ ಕುರುಡಿಯಾಗಿ ಕಂಡರೆ ನಿನ್ನ ಒಂದೇ ಕಣ್ಣಲ್ಲಿ ಸಾವಿರ ಕಣ್ಣುಗಳ ತೇಜಸ್ಸನ್ನು ನಾನು ಕಾಣಬಲ್ಲೆ. ಅಷ್ಟೇಕೆ ಕೊರಗುವಿ? ಬಾ ರತ್ನಾ ಈ ಪ್ರಪಂಚದಿಂದ ನಾವಿಬ್ಬರೂ ದೂರ ದೂರ ಹೋಗಿ ಆನಂದ ಮಂದಿರದಲ್ಲಿ ಹಾಡುತ್ತ, ನಗುತ್ತ, ನಮ್ಮ ಪ್ರಪಂಚವನ್ನೇ ಬೇರೆ ಮಾಡಿಕೊಂಡು ಇರೋಣ. ಬಾ. ನಿನ್ನನ್ನು ಅರಗಳಿಗೆಯೂ ಬಿಟ್ಟಿರಲಾರೆ ಬಾ ರತ್ನಾ ss . . . ."

"ಬಾಮ್ಮಾ ರತ್ನಾ ಹೊರಗೆ ನಿನಗಾಗಿ ಕುಳಿತಿದ್ದಾರೆ. ಎಂಬ ತಂದೆಯ ಕೂಗು ಅವಳನ್ನು ಕಲ್ಪನೆಯ ಪ್ರಪಂಚದಿಂದ ಎಚ್ಚರಿಸಿತು.

ಎಲ್ಲ ನೋಡಿಯಾಯಿತು. ಅವಳಿಗೆ ತನ್ನ ಹಣೆಯ ಬರಹವೇನೆಂದು ಮೊದಲೇ ಗೊತ್ತಿತ್ತು. ಅಸಮಾಧಾನದಿಂದ ರತ್ನಾ ಕೋಣೆಯಲ್ಲಿ ಕುಳಿತಾಗ ತಾಯಿ ತಂದೆ ಅವಳ ಲಗ್ನದ ವಿಷಯ ಮಾತನಾಡುತ್ತಿದ್ದರು.

"ರತ್ನಳನ್ನು ಮದುವೆ ಮಾಡಿಕೊಳ್ಳಲು ಯಾರೂ ಒಪ್ಪುತ್ತಿಲ್ಲ. ಇನ್ನು ಮುಂದೆ ಅವಳ ಗತಿ?" ಎಂದು ತಾಯಿ ಕೇಳಿದಳು.

"ಅದೇ ನನ್ನ ಜೀವನದಲ್ಲಿ ದೊಡ್ಡ ಸಮಸ್ಯೆಯಾಗಿದೆ"

"ನನಗಂತೂ ಅವಳ ಸಲುವಾಗಿ ನಿದ್ದೆ ನೀರಡಿಕೆಗಳು ಕೂಡ ಹಿಂಗಿ ಹೋಗಿ ಬಿಟ್ಟವೆ. ವಿಚಾರ ಮಾಡೀ ಮಾಡೀ ನನ್ನ ತಲೆ ತಿರುಗತೊಡಗಿದೆ"

"ಕಂಡ ಕಂಡವರನ್ನೆಲ್ಲ ಕೇಳಿ ಕೇಳಿ ತೋರಿಸಿ ತೋರಿಸಿ ನನಗೆ ಭ್ರಾಂತಿಯಾಗಿದೆ. ರತ್ನಳೇ ಒಂದು ಮಗನಾಗಿದ್ದರೆ ಎಷ್ಟು ಚೆನ್ನಾಗುತ್ತಿತ್ತು? ನಮ್ಮ ಪಾಲಿಗೆ ದೇವರು ಇಂಥ ಹುಡಿಗಿಯನ್ನು ಏಕೆ ಕೊಡಬೇಕಿತ್ತು? ಇನ್ನು ಏನೇ ಆಗಲಿ ಅವಳನ್ನು ಗ್ರ್ಯಾಜುಯೇಟ ಮಾಡಿ ಗಂಡುಮಗುವಿನಂತೆ ಇಟ್ಟುಬಿಡುವೆ. ನೀನೇಕೆ ಸುಮ್ಮನೆ ತೊಂದರೆ ಮಾಡಿಕೊಳ್ಳುವಿ?"

"ಇಲ್ಲ ನಿಮಗೆ ತಿಳಿಯದು. ಗಂಡಿಗೆ ಹೆಣ್ಣಿನ ಆಶೆಯ ಅರ್ಥವೇ ಆಗುವುದಿಲ್ಲ. ಹೆಣ್ಣು, ಆಶ್ರಯವಿಲ್ಲದೆ ಬದುಕಲಾರಳು. ನಾವು ತೀರಿ ಹೋದಮೇಲೆ ಮರುದಿನ ರತ್ನ ಯಾವ ಗಿಡದ ತೊಪ್ಪಲು?"

"ರತ್ನಳಿಗೆ ಅದೆಂಥ ಮಹಾ ವಯಸ್ಸಾಗಿದೆ ಎಂದು ಇಷ್ಟು ಆತುರ ಪಡುವಿ?"

"ಇನ್ನೆಷ್ಟು ವಯಸ್ಸಾಗಬೇಕು? ಇಪ್ಪತ್ತು ಮಿಕ್ಕಿ ಹೋಯಿತು. ನಮ್ಮಲ್ಲಿ ಹತ್ತು ವರ್ಷ ಮಿಕ್ಕುವಾಗಲೇ

ಮದುವೆ ಮಾಡುವ ಮನೆತನ. ನೀವೇ ಹೀಗೆ ಹಾರಿಸಿ ಮಾತನಾಡಿದರೆ ನಾನಾರಿಗೆ ಹೇಳಲಿ ?"

"ಇರಲಿ ನೋಡೋಣ"

"ಅಯ್ಯೋ ! ನಾನು ಬಂಜೆಯಾಗಿದ್ದರೂ ನನಗೆ ದುಃಖ ವಾಗುತ್ತಿರಲಿಲ್ಲ. ರತ್ನಳು ಹುಟ್ಟದಿದ್ದರೆ ಜಗತ್ತು ಹಾಳಾಗುತ್ತಿತ್ತೆ ? ಸೂರ್ಯ ಚಂದ್ರರು ಹುಟ್ಟುತ್ತಿರಲಿಲ್ಲವೆ? ನಮಗಾಗಿ ಎಂದು ದೇವರು ಇವಳನ್ನು ಹುಟ್ಟಿಸಿದನೇ ?" ಎಂದು ಬಿಸಿಯುಸುರಿದರು.

ರತ್ನಳಿಗೆ ಇದನ್ನು ಕೇಳಿ ತಲೆ ತಿರುಗಿದಂತಾಯಿತು. ತಲೆ ಜಜ್ಜಿಕೊಂಡಳು. ಕಣ್ಣುಗಳು ಹನಿಗೂಡಿದವು. ಅಷ್ಟರಲ್ಲಿ ಅವಳ ಗೆಳತಿ ತಿರುಗಾಡಲು ಕರೆಯಲು ಬಂದಳು. ಆಕೆಗೆ ತಿಳಿಯದಂತೆ ಕಣ್ಣೀರನ್ನು ಮರೆಮಾಡಿ ನಗಲು ಯತ್ನಿಸಿದಳು. ನಗಲು ಯತ್ನಿಸಿದಂತೆ ಅಳುಧ್ವನಿಯೇ ಬರುತ್ತಿತ್ತು ಹೊರತಾಗಿ ನಗು ಬರುತ್ತಿರಲಿಲ್ಲ. ಅವಳ ಗೆಳತಿಯೇ ಏನೇನೋ ಸುದ್ದಿ ಹೇಳುತ್ತಿದ್ದಳು. ರತ್ನಾ ಹೂಂ ಗುಟ್ಟುತ್ತಿದ್ದಳು.

ಎಷ್ಟೋ ದಾರಿ ನಡೆದಮೇಲೆ ಎದುರಿಗೆ ಗಂಡು ಹುಡುಗರ ತಂಡವೊಂದು ಬಂದಿತು. ಅವರಲ್ಲಿಯ ಒಬ್ಬನು,

"ಏನು ಕಣೋ ಮೊನ್ನೆ ನೋಡಿ ಬಂದ ಹೆಣ್ಣಿದು. ಹೇಗಿದೆ ಕಣ್ಯಾ? ಅಪ್ರತಿಮ ಸುಂದರಿಯೋ ನೋಡು. ಅವಳನ್ನು ಪಡೆಯಬೇಕಾದರೆ ಪುಣ್ಯಬೇಕು" ಎಂದು ಏನೇನೋ ಹಾಸ್ಯ ಮಾಡಿ ನಕ್ಕರು.

ರತ್ನಾ ತನ್ನ ತಾಯಿ ತಂದೆಗಳ ಮಾತನ್ನು ಮರೆಯಲೆಂದು ಹೊರಗೆ ಬಂದರೆ ಅಲ್ಲಿಯೂ ಅದೇ ಹಣೆ ಬರಹವೇ ಆಗಬೇಕೆ? ತಿರುಗಾಡಿ ತನ್ನ ಕೋಣೆಗೆ ಬಂದಾಗ ರಾತ್ರಿ ಎಂಟು ಹೊಡೆದಿತ್ತು. ಊಟ ಮಾಡುವದಿಲ್ಲವೆಂದು ಹೇಳಿ ತನ್ನ ಹಾಸಿಗೆಯ ಮೇಲೆ ಹೊರಳಾಡಿದಳು. "ಮನೆಗೆ ಬೆಂಕಿ ಹತ್ತಿದರೆ ಓಡಿಹೋಗಬಹುದು. ಮನಕ್ಕೆ ಬೆಂಕಿ ಹತ್ತಿದರೆ ಎಲ್ಲೋಡಬೇಕು? ಅಯ್ಯೋ ದೇವರೆ ನನ್ನಿಂದ ಜಗತ್ತಿಗೆ ಏನಾಗಬೇಕಿತ್ತು. ನನ್ನನ್ನು ಏಕೆ ಈ ನರಕ ಕುಂಡದಲ್ಲಿ ಹುಟ್ಟಿಸಿದೆ? ಎಲ್ಲರಿಗೂ ಬೇಡವಾದ ನಾನು ನಿನಗೂ ಬೇಡವಾದೆನೆ? ನೋಡು ಎಲ್ಲೆಲ್ಲಿಯೂ ನೀನಿರುವಿಯಂತೆ. ನನ್ನ ಗೋಳಾಟ ನಿನಗೆ ಅರ್ಥವಾಗಲೊಲ್ಲದೆ? ನನ್ನನ್ನು ದೂರ ಬಹುದೂರ ಕರೆದುಕೊಂಡು ಹೋಗು. ಅಲ್ಲಿ ಮನುಷ್ಯರ ಕಾಟವಿರಬಾರದು. ಕುರೂಪಿ ಸುರೂಪಿ ಎಂಬ ಭೇದವಿರಬಾರದು. ಇನ್ನೂ ಎಷ್ಟು ದಿನ ಈ ಅಗ್ನಿಯಲ್ಲಿ ಬೆಂದುಹೋಗಲಿ? ಇಂಥ ಕೆಟ್ಟ ಮಾತುಗಳನ್ನು ಎಷ್ಟು ಸಲ ಈ ಕಿವಿಗಳಿಂದ ಕೇಳಲಿ? ನನ್ನನ್ನು ಮರ್ಯಾದೆಯಿಂದ ಬದುಕಗೊಡು. ಮನುಷ್ಯಳನ್ನಾಗು ಮಾಡು ದೇವಾ ! ಹುಚ್ಚಿಯನ್ನಾಗಿ ಮಾಡಿ ಬೀದಿ ಬೀದಿ ಅಲೆಯಲು ಬಿಡಬೇಡ. ನನಗೆ ಲಗ್ನಬೇಡ, ಗಂಡಬೇಡ, ಮಕ್ಕಳು, ಬೇಡ, ಯಾರೂ ಬೇಡ. ಮನುಷ್ಯರ ಸ್ನೇಹ ಮೊದಲೇ ಬೇಡ. ಗಿಡ ಮರಗಳ ಜೊತೆಗೆ ಸ್ನೇಹ ಬೆಳೆಸುವೆ. ಪಶು ಪಕ್ಷಿಗಳ ಜೊತೆಗೆ ಹಾಯಾಗಿ ಆನಂದದಿಂದಿರುವೆ. ಆದರೆ ಭೂತಗಳಂತಿರುವ ಈ ಮನುಷ್ಯಲೋಕ ನನಗೆ ಬೇಡವಾಗಿದೆ. ನನಗೆ ಒಂದು ಕಣ್ಣಿಲ್ಲವೆಂದು ಹೇಳುವ ಈ ಗಂಡು ಪ್ರಪಂಚಕ್ಕೆ ಒಂದೂ ಕಣ್ಣಿಲ್ಲ. ಹೆಣ್ಣಿನ ಸೌಂದರ್ಯ ನೋಡುವವನ ಕಣ್ಣಲ್ಲಿದೆಯೆ ಹೊರತು ಸೌಂದರ್ಯ ಬೇರೆಯಿಲ್ಲ. ನನಗೆ ಸಮಗ್ರ ದೃಷ್ಟಿಯನ್ನು ನೀಡುವ ಹೃದಯದ ಕಣ್ಣು ಇದೆ. ಆ ಹೃದಯದ ಕಣ್ಣನ್ನು ಕಾಣುವ ಒಂದೂ ಕಣ್ಣು ಈ ಸಮಾಜಕ್ಕಿಲ್ಲ. ಆದರೆs.... ಆದರೆ ಆ ಕಣ್ಣು ತಾನಾಗಿದೆ ಎನ್ನಲೆ? ಏಕಾಕ್ಷಿ ಎಂದು ಜನ ನಕ್ಕಾಗ ಸಹಸ್ರಾಕ್ಷಿ ಎಂದು ತಾನೀ ಹೇಳುತ್ತಾನೆ. ಎಲ್ಲರೂ ನೂಕುತ್ತಿರುವಾಗ ಅವನು ಮಾತ್ರ ಕೈ ಮಾಡಿ ಕರೆಯುತ್ತಾನೆ. ನಾನೆಂದರೆ ರತಿ ಎಂದು ಹೇಳುತ್ತಾನೆ. ಜಗತ್ತಿನಲ್ಲಿ ಹುಟ್ಟಿ ನಾನೇನು ಮಾಡಿದ ಹಾಗಾಯಿತು? ನನಗಂತೂ ಮನಶ್ಶಾಂತಿ ದೊರೆಯುವದಿಲ್ಲ. ತಾನೀಗಾದರೂ ಏಕೆ ದೊರೆಯಬಾರದು? ಏಕೆ ದೊರೆಯಬಾರದು?? ಏಕೆ ದೊರೆಯಬಾರದು??? ಅಂಥ ಜಾತಿಯವರಿಗಿಂತಲೂ ತಾನಿ ಏಕೆ ಕಡಿಮೆ? ಜನ ಬೇಕಾದದ್ದು ಬೊಗಳಲಿ. ನಗಲಿ. ಚೇಷ್ಟೆ ಮಾಡಲಿ. ನಾನು ಉರಿದು ಅವನ ಮನೆ ಬೆಳಕಾಗಲಿ. ಅವನೊಬ್ಬನಾದರೂ ಸುಖಿಯಾಗಿರಲಿ. "ಕಲಂಕಿಣಿ" ಎಂದು ತಂದೆ ತಾಯಿ ಶಾಪ ಕೊಡಲಿ. ಭೂಮಿತಾಯಿ ಆದುರಲಿ ಎಂದವಳೇ ರಾತ್ರಿಯಾದ ಅರಿವಿಲ್ಲದೆಯೆ ತಾನೀss ಎಂದು ಕೂಗುತ್ತ ಅವನ ಮನೆ ಎಡೆಗೆ ಧಾವಿಸಿದಳು. ಮನೆ ಬಾಗಿಲು ತೆರೆದಿತ್ತು. ಒಳನುಗ್ಗಿದಳು. ತಾನೀs ತಾನೀss ತಾನೀsss ನಾನು, ರತ್ನಾ ಬಂದಿರುವೆ ನೋಡು ತಾನೀs.

"ಯಾರಮ್ಮಾ? ರತ್ನಾನೇ ನೀನು? ತಾನೀ ಬೇಕೆ? ಈಗೆಂಟು ದಿನಗಳ ಹಿಂದೆ ತಲೆನೋವೆಂದು ಕಾಲೇಜಿನಿಂದ ಬಂದವನು ಹೊರಗೆ ಕಾಲಿಕ್ಕಲೇ ಇಲ್ಲ. ಇದೇ ತಾನೇ ಅವನ ಶವವನ್ನು ಹೊತ್ತೊಯ್ದರು. ಸಾಯುವ ಮುಂದೆ ರತ್ನಾs ರತ್ನಾss ರತ್ನಾsss ಎಂದು ಕೂಗಿದನೇ ಹೊರತು ಮತ್ತೇನೂ ಎನ್ನಲಿಲ್ಲ."

ತಾನೀss ನೀನು ಕಣ್ಮರೆಯಾದೆಯಾ? ಅವೂ ಎರಡು ಕಣ್ಣುಗಳು ಮುಚ್ಚಿದವೆ? ಅಯ್ಯೋ ಆ ಎರಡು ಕಣ್ಣುಗಳೂ ಇಲ್ಲವೆ? ಇನ್ನು ಕಣ್ಣಿಲ್ಲ ಕಣ್ಣಿಲ್ಲ ಎಂದು ಕತ್ತಲೆಯಲ್ಲಿ ಕಾಣಿಸದಾದಳು.

# ಕರ್ಣಾಟಕದಲ್ಲಿ ಕಾಳಿದಾಸ ಜಯಂತಿ

## ಕನ್ನಡ ಸಾಹಿತ್ಯ ಪರಿಷದಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ ಬಿನ್ನಹ

ಭರತವರ್ಷದ ಕೀರ್ತಿಗೌರವಗಳನ್ನು ವಿಶ್ವದಲ್ಲಿ ಅಧಿಕಗೊಳಿಸಿದ ವಿಭೂತಿಪುರುಷರಲ್ಲಿ ಮಹಾಕವಿ ಕಾಳಿದಾಸನು ಒಬ್ಬನು. ನಮ್ಮ ರಾಷ್ಟ್ರದಲ್ಲಿ ಋಷಿಕವಿಗಳಾದ ವಾಲ್ಮೀಕಿ, ವ್ಯಾಸರ ಅನಂತರ ಸಾಹಿತ್ಯ ಪ್ರಪಂಚದಲ್ಲಿ ಸ್ಮರಣಾರ್ಹನಾದವನು ಕವಿಕುಲಗುರು ಕಾಳಿದಾಸ. ವಿಶ್ವದ ಮಹಾಕವಿಗಳಾದ ಷೇಕ್ಸ್‌ಪಿಯರ್, ಹೋಮರ್ ಡಾಂಟೆ, ರವೀಂದ್ರನಾಥ್, ಬರ್ನಾರ್ಡ್‌ಷಾ ಮುಂತಾದವರ ಪಂಕ್ತಿಯಲ್ಲಿ ಅಗ್ರಗಣ್ಯನು ಕವಿವರ್ಯಕಾಲಿದಾಸ. ಈ ಕವಿಯ ನಾಟಕಗಳು ಹಾಗೂ ಮಹಾಕಾವ್ಯಗಳು ಭಾರತೀಯ ಸಾಹಿತ್ಯ ಪ್ರಪಂಚದಮೇಲೆ ಮಿಗಿಲಾದ ಪ್ರಭಾವವನ್ನು ಬೀರಿವೆ. ವಿಶ್ವದ ಪ್ರತಿಭಾಶಾಲಿಗಳೂ ಮಹಾನುಭಾವಿಗಳೂ ಕಾಳಿದಾಸನ ರಸವತ್ಕೃತಿಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದಾರೆ. ಸ್ವರ್ಗ ಮತ್ತು ಮರ್ತ್ಯಗಳಿಗೆ ಪ್ರೇಮದ ಸೇತುವೆಯನ್ನು ಕಟ್ಟಿದ ಮಹಾ ಕಲಾನಿಪುಣ ಕವಿಶೇಖರ ಕಾಲಿದಾಸ ಎಂದು ಜರ್ಮನಿಯ ಪ್ರೊ|| ಗಯಟೆ ಹೇಳಿದ್ದಾರೆ. ಆತನ ಕಾವ್ಯಗಳು ಮಾನವ ಜನಾಂಗಕ್ಕೆ ಅಮರಸಂದೇಶ ನೀಡತಕ್ಕವುಗಳು. ಕಾಳಿದಾಸನ ಕೃತಿಗಳು ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ತರ್ಜುಮೆಯಾಗಿ ಈಗ ವಿಶ್ವಕ್ಕೆಲ್ಲ ಪರಿಚಿತವಾಗಿವೆ. ಆತನ ಕಥಾನಿರೂಪಣೆ, ಗಂಭೀರವಾದ ವರ್ಣನೆ, ಹೃದಯಂಗಮ ರಸಪ್ರತಿಪಾದನೆ, ಉಚಿತ ಹಾಗೂ ಮಧುರ ಪದಪ್ರಯೋಗ, ಪ್ರತಿಭಾನ್ವಿತ ಕಥಾವಸ್ತು ನಿರ್ಮಾಣ ಕೌಶಲ್ಯ, ತ್ರಿಕಾಲಾಬಾಧಿತವಾದ ದರ್ಶನ, ಮಿಗಿಲಾದ ಲೋಕಾನುಭವ, ಹೃದಯಂಗಮವಾದ ಉಪಮಾನಗಳು, ಶ್ರೇಷ್ಠವಾದ ವಿನಯಶೀಲತೆ,—ಇವು ರಸಿಕರ ಹೃದಯವನ್ನು ಸೂರೆಗೊಳ್ಳುತ್ತವೆ. "ಕಾವ್ಯೇಷು ನಾಟಕಂ ರಮ್ಯಂ ತೇಷುರಮ್ಯಾ ಶಕುಂತಲಾ" ಎಂಬ ಸುಭಾಷಿತವು ಕಾಲಿದಾಸನಿಗೆ ವಿದ್ವಾಂಸರು ಕೊಟ್ಟ ಪ್ರಶಸ್ತಿಪತ್ರದಂತಿದೆ. ಇಂತಹ ಕವಿಸಾರ್ವಭೌಮ ಕಾಲಿದಾಸನ ಜಯಂತಿಯನ್ನು ಸಮಗ್ರ ಭಾರತದಲ್ಲೆಲ್ಲಾ ನಡೆಸಲು ಏರ್ಪಡಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉದ್ದೇಶ ನಿಜಕ್ಕೂ ಶ್ಲಾಘ್ಯವಾದುದು.

ಕನ್ನಡ ಸಾಹಿತ್ಯದ ಒಂದು ಸಾವಿರ ವರ್ಷದ ಸುದೀರ್ಘವಾದ ಅವಧಿಯಲ್ಲಿ ಕಾಳಿದಾಸನ ಕಾವ್ಯಗಳ ಪರಿಣಾಮ ನಮ್ಮ ಸಾಹಿತ್ಯದ ಮೇಲೆ ಚೆನ್ನಾಗಿ ಆಗಿರುವುದನ್ನು ನಾವು ಮನಗಾಣಬಹುದು. ಬಹುಮಟ್ಟಿಗೂ ನಮ್ಮ ಕವಿಗಳು ಕಾಳಿದಾಸನ ಪ್ರಭಾವಕ್ಕೆ ಒಳಪಟ್ಟಿದ್ದಾರೆ. [ಪಂಪ, ಪೊನ್ನ, ರನ್ನ, ಹರೀಶ್ವರ, ಷಡಕ್ಷರದೇವ, ಸೋಮರಾಜ, ಸುರಂಗ ಇವರುಗಳ ಕಾವ್ಯಗಳಲ್ಲಿ ಇದನ್ನು ಕಾಣಬಹುದು.] ಕಾಳಿದಾಸರಿಗೆ ದಾಸರೆನಿಪರ್ ಕವಿಗಳ್, ಕವಿತಾಕಲಾನಿವಾಸನ ಕಾಳಿದಾಸನ, ಕಾಳಿದಾಸನ ರಸವೃತ್ತಿ, ಉಪಮಾ ಕಾಲಿದಾಸಸ್ಯ, ಕವಿಷು ಕಾಲಿದಾಸಃ ಶ್ರೇಷ್ಠಃ ಮೊದಲಾದ ನಮ್ಮ ಕವಿಗಳ ಉದ್ಗಾರಗಳು ಈ ರಾಷ್ಟ್ರಕವಿಯ ಬಗೆಗೆ ನಮ್ಮ ಕಬ್ಬಿಗರಿಗಿರುವ ಗೌರವಕ್ಕೆ ನಿದರ್ಶನವೆನಿಸಿವೆ. ಸುಮಾರು ೯ನೇ ಶತಕದಿಂದ ೧೯ನೇ ಶತಕದವರೆಗೆ ಕಾಲಿದಾಸನ ಕಾವ್ಯಗಳು ಹಾಗೂ ನಾಟಕಗಳು ಕನ್ನಡಕ್ಕೆ ಭಾಷಾಂತರವಾಗದಿರುವುದು ಆಶ್ಚರ್ಯಕರವಾಗಿದೆ. ಈ ಸಂದರ್ಭದಲ್ಲಿ ನಮ್ಮ ನೆರೆಯ ನಾಡಾದ ತೆಲುಗು ದೇಶದಲ್ಲಿ ನನ್ನಚೋಳನೆಂಬ ಮಹಾಕವಿಯಿಂದ ಕುಮಾರಸಂಭವವು ಭಾಷಾಂತರಿಸಲ್ಪಟ್ಟಿದೆ ಎಂಬುದು ಇಲ್ಲಿ ಗಮನಾರ್ಹವಾದ ವಿಷಯ. ಸಂಸ್ಕೃತ ಮಹಾಕವಿಗಳಾದ ವಾಲ್ಮೀಕಿ, ವ್ಯಾಸ, ಬಾಣ, ದಂಡಿ, ಶ್ರೀಹರ್ಷರ ಕೃತಿಗಳಾದ, ರಾಮಾಯಣ, ಮಹಾಭಾರತ, ವಿಷ್ಣುಪುರಾಣ, ಕಾದಂಬರಿ, ದಶಕುಮಾರ ಚರಿತೆ, ರತ್ನಾವಳಿಗಳು ಕನ್ನಡಕ್ಕೆ ಅನುವಾದವಾಗಿವೆ ಎಂಬುದನ್ನು ನಾವು ಕಂಡಿದ್ದೇವೆ. ಆದರೆ ಈ ಮಹಾಕವಿಯ ಕೃತಿಗಳು ಏತಕ್ಕಾಗಿ ಬಹುಕಾಲ ಕನ್ನಡಕ್ಕೆ ಬರಲಿಲ್ಲವೆಂಬುದು ಒಂದು ಸಮಸ್ಯೆಯೇ ಆಗಿದೆ. ೧೯ನೇ ಶತಮಾನದಿಂದ ಇಂದಿನವರೆಗೆ ಕೀರ್ತಿಕಾಯರಾಗಿರುವ ಮುಮ್ಮಡಿ ಕೃಷ್ಣರಾಜ ಒಡೆಯರು, ಮಹಾಕವಿ ಬಸವಪ್ಪ ಶಾಸ್ತ್ರಿಗಳು, ಕವಿತಿಲಕ ಅಯ್ಯಾ ಶಾಸ್ತ್ರಿಗಳು, ಎಸ್. ಜಿ. ನರಸಿಂಹಾಚಾರ್ಯರು, ಚುರಮುರಿ ಶೇಷಗಿರಿರಾಯರು, ಕವಿ ಮಲ್ಲಿಕಾರ್ಜುನಪ್ಪ ರೈನಾಪುರ್, ಮಹಾವಿದ್ವಾನ್ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಆಸ್ಥಾನವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಮೊದಲಾದವರೂ ಆಧುನಿಕರಾದ

ಶ್ರೀ ದ. ರಾ. ಬೇಂದ್ರೆ, ವೈ. ನಾಗೇಶಶಾಸ್ತ್ರಿ, ಪ್ರೊ|| ಪರಮೇಶ್ವರ ಭಟ್ಟ, ಪ್ರೊ|| ಎಸ್. ವಿ. ರಂಗಣ್ಣ, ಮೊದಲಾದವರೂ ಕಾಳಿದಾಸನ ಕೃತಿಗಳನ್ನು ಕನ್ನಡಕ್ಕೆ ತಂದು, ವಿಮರ್ಶಿಸಿ ಮಹೋಪಕಾರ ಮಾಡಿದ್ದಾರೆ. ಇಂದು ಸಂಸ್ಕೃತವನ್ನು ತಿಳಿಯದ ಕನ್ನಡಿಗರೂ ಕೂಡ ಕಾಳಿದಾಸನ ಪರಿಚಯ ಮಾಡಿಕೊಳ್ಳಬಹುದಾಗಿದೆ. ಕೈ|| ಬಸಪ್ಪ ಶಾಸ್ತ್ರಿಗಳು ಅಭಿಜ್ಞಾನ ಶಾಕುಂತಲವನ್ನು ಉತ್ತಮವಾಗಿ ಕನ್ನಡಕ್ಕೆ ಭಾಷಾಂತರಿಸಿ "ಅಭಿನವ ಕಾಲಿದಾಸ" ಎಂಬ ಬಿರುದನ್ನು ಪಡೆದಿದ್ದಾರೆ. ಕಾಳಿದಾಸನ ಕೃತಿಗಳನ್ನು ಕುರಿತಾದ ವಿಮರ್ಶಾಗ್ರಂಥಗಳು ಕನ್ನಡದಲ್ಲಿ ಆಗಿವೆ.

ಕರ್ನಾಟಕಕ್ಕೂ ಕಾಳಿದಾಸನಿಗೂ ಒಂದು ಬಗೆಯ ಸಂಬಂಧವಿದೆ. ಐಹೊಳೆಯ ಏಳನೇ ಶತಕದ ರವಿಕೀರ್ತಿಯ ಶಾಸನದಲ್ಲಿ ಕಾಳಿದಾಸನ ಹೆಸರು ಬಂದಿದೆ. ಬಿಜಾಪುರ ಜಿಲ್ಲಾ ಹಿಪ್ಪರಗಿಯಲ್ಲಿ ಕಾಳಿದಾಸನೆಂಬೊಬ್ಬ ಶರಣನ ಸ್ಮಾರಕವಿದೆ. ಬಸವೇಶ್ವರನ ವಚನಗಳಲ್ಲಿ "ಕಾಳಿದಾಸಂಗೆ ಕಣ್ಣನಿತ್ತೆ" ಎಂಬ ಉಲ್ಲೇಖವಿದೆ. ಮಹಾಕವಿ ಹರಿಹರನು ಕಾಳಿದಾಸನ ರಗಳೆಯನ್ನು ಬರೆದಿದ್ದಾನೆ. ಪ್ರೌಢರಾಯನ ಕಾವ್ಯದಲ್ಲಿ ಕಾಳಿದಾಸನ ಕಥೆ ಬಂದಿದೆ. ಕನ್ನಡ ಕಾಳಿದಾಸ, ಅಭಿನವ ಕಾಳಿದಾಸ ಎಂಬ ಬಿರುದುಗಳಿಗೆ ಕನ್ನಡಿಗರು ತವಕ ಪಡುತ್ತಾರೆ. ಕಾಳಿದಾಸನ ಕಾವ್ಯಗಳ ಬಗೆಗೆ ಕನ್ನಡ ನಾಡಿನ ವಿದ್ವಾಂಸರೂ ರಸಿಕರೂ ಬಹಳವಾಗಿ ಅಭಿಮಾನ ಪಡುತ್ತಾರೆ. 'ಕಾಳಿದಾಸನುಮಂ ಏಳಿಸಿದೆವು' 'ಕಾಳಿದಾಸಂಗಂ ನೂರ್ಮಡಿ' ಎಂಬ ಕೆಚ್ಚೆದೆಯ ಕವಿಗಳೂ ಕನ್ನಡದಲ್ಲಿ ಆಗಿಹೋಗಿದ್ದಾರೆ.

ಮೈಸೂರು ಸರ್ಕಾರದ ಘನವಾದ ಆದೇಶದಂತೆ ಕಳೆದ ವರ್ಷ ಕನ್ನಡ ಸಾಹಿತ್ಯ ಪರಿಷತ್ತು ಸಮಗ್ರ ಕರ್ಣಾಟಕದಲ್ಲಿ ಕಾಳಿದಾಸನ ಜಯಂತಿಯನ್ನು ಏರ್ಪಡಿಸಿತ್ತು. ಈ ಸಲ ಇದೇ ಫೆಬ್ರುವರಿ ಕಡೆಯ ವಾರದಲ್ಲಿ ಹಾಗೂ ಮಾರ್ಚಿ ಮೊದಲ ವಾರದಲ್ಲಿ ಬೆಂಗಳೂರು, ಮೈಸೂರು, ಚಿತ್ರದುರ್ಗ, ಮಡಕೇರಿ, ಕುಮುಟ, ಹುಬ್ಬಳ್ಳಿ, ರಾಯಚೂರು, ಬಿಜಾಪುರ, ಪಟ್ಟಣಗಳಲ್ಲಿ ಪರಿಷತ್ತು ಕಾಳಿದಾಸ ಜಯಂತಿಯನ್ನು ವೈಭವದಿಂದ ನಡೆಸಲು ಏರ್ಪಡಿಸಿದೆ. ವಿಖ್ಯಾತರಾದ ವಿದ್ವಾಂಸರನೇಕರು ಈ ಮಹಾಕವಿಯ ನಾಟಕಗಳು, ಕಾವ್ಯಗಳನ್ನು ಕುರಿತು ಭಾಷಣ ಮಾಡುತ್ತಾರೆ. ಆತನ ನಾಟಕಗಳನ್ನು ಆಡಿಸುವುದು ಆತನ ಅಮರ ಕೃತಿಗಳನ್ನು ವಾಚನ ಮಾಡಿಸುವುದು ಇತ್ಯಾದಿಗಳು ಈ ಪ್ರಸಂಗದಲ್ಲಿ ನಡೆಯುತ್ತವೆ. ಕನ್ನಡಕ್ಕೆ ಮಾತೃಸ್ಥಾನದಲ್ಲಿರುವ ಸಂಸ್ಕೃತದ ಈ ರಾಷ್ಟ್ರಕವಿಯ ಜಯಂತಿಯ ಕಾರ್ಯದಲ್ಲಿ ಸಹೃದಯರೆಲ್ಲರೂ ನೇರವಾಗಬೇಕೆಂದು ಪ್ರಾರ್ಥಿಸುವೆನು. ಅನುಕೂಲವುಳ್ಳ ಚಿಕ್ಕ ದೊಡ್ಡ ಊರುಗಳಲ್ಲಿ, ಶಾಲೆ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಕಾಳಿದಾಸ ಜಯಂತಿಯನ್ನು ಆಚರಿಸಿ ಆ ಮಹಾಕವಿಯ ಸಂದೇಶ ಶ್ರವಣಕ್ಕೆ ಜನತೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇದೇ ಸಂದರ್ಭದಲ್ಲಿ ಕನ್ನಡ ಪತ್ರಿಕಾಕರ್ತರೂ ಈ ಕವಿಯ ಕಾವ್ಯಗಳ ಮತ್ತು ನಾಟಕಗಳ ಬಗೆಗೆ ಲೇಖನವನ್ನು ಪ್ರಕಟಿಸಿಯೂ ಆಕಾಶವಾಣಿಯವರು ಈ ಕವಿಯ ಬಗೆಗೆ ಭಾಷಣಾದಿಗಳನ್ನು ಏರ್ಪಡಿಸಿಯೂ ಈ ಜಯಂತಿಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ನೆರವಾಗಬೇಕಾಗಿ ಪ್ರಾರ್ಥನೆ. ಇದೇ ಮಾರ್ಚಿ ಮೊದಲ ವಾರದಲ್ಲಿ ಈ ಜಯಂತಿ ನಡೆಸಬೇಕಾಗಿದೆ.

|| ಸಿರಿಗನ್ನಡಂ ಗೆಲ್ಗೆ-ಬಾಳ್ಗೆ ||

## ಪರಿಷತ್ತಿನ ಸದಸ್ಯರಲ್ಲಿ ವಿನಂತಿ

೧೯೬೨ರ ಪರಿಷತ್ತಿನ ಸದಸ್ಯತ್ವದ ಚಂದಾ ಆರು ರೂಪಾಯಿಗಳನ್ನು ದಯೆಯಿಟ್ಟು ಈ ಕೂಡಲೇ ಕಳಿಸಿ ಪರಿಷತ್ತಿಗೆ ನೆರವು ನೀಡಬೇಕೆಂದು ವಿನಯದಿಂದ ವಿನಂತಿಸುತ್ತೇವೆ.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ|| ಕಾರ್ಯದರ್ಶಿಗಳು.

# ಗ್ರಂಥಾವಲೋಕನ

**ಗೀತೆ; ಅಂತರ್ವಾಣಿ ಮತ್ತು ಗೀತೆಯ ಅಂತರ್ವಾಣಿ:** ಲೇಖಕರು: "ಅಮರವಾಣಿ" (ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯ), ಪ್ರಕಾಶಕರು: ಪ್ರಬೋಧ ಪುಸ್ತಕಮಾಲೆ, ವಿ. ವಿ. ರಸ್ತೆ, ಮೈಸೂರು. ಪುಟಗಳು ೨೪೮+೧೭, ಬೆಲೆ ರೂ. ೨-೦೦.

ಪ್ರಪಂಚದಲ್ಲೇ ಪ್ರಸಿದ್ಧವಾಗಿರುವ ಭಗವದ್ಗೀತೆಯನ್ನು ಕುರಿತ ಒಂದು ವಿವೇಚನೆ ಈ ಪುಸ್ತಕ. ಇಲ್ಲಿ ಮೂರು ಭಾಗಗಳಿವೆ. ಗೀತೆ; ಅಂತರ್ವಾಣಿ; ಗೀತೆಯ ಅಂತರ್ವಾಣಿ ಮತ್ತು ಮೂಲ ಕೃತಿ ಭಗವದ್ಗೀತೆಯ ಎಲ್ಲ ಶ್ಲೋಕಗಳು. (ಕನ್ನಡ ಲಿಪಿಯಲ್ಲಿ) ಅಲ್ಲದೆ ಶೈವಾಗಮಗಳು ಮತ್ತು ಭಗವದ್ಗೀತೆ ಎಂಬ ಅನುಬಂಧವೂ, ಶ್ರೀಮದ್ಭಗವದ್ಗೀತೆಯ ಶ್ಲೋಕಗಳ ಅಕಾರಾದಿ ಅನುಕ್ರಮಣಿಕೆಯೂ ಓದುಗರಿಗೆ ಉಪಯುಕ್ತವಾಗಿದೆ.

ಈ ಹೊತ್ತಗೆಗೆ ಪ್ರಸಿದ್ಧ ಶ್ರೀ ವಿನೋಬಾಜಿಯವರ ಮತ್ತು ಮೈಸೂರು ಗೀತಾಪ್ರಚಾರಿಣೀ ಸಭೆಯ ಸಂಚಾಲಕರಾದ ಶ್ರೀ ಶಂಕರಾನಂದ ಭಾರತೀಯವರ ಆಶೀರ್ವಚನ ಮತ್ತು ಮುನ್ನುಡಿಗಳ ರಕ್ಷೆಯಿದೆ.

ಭಗವದ್ಗೀತೆಯು ಸುಸಂಸ್ಕೃತ ಮಾನವನ ಅಂತರ್ವಾಣಿಯಾಗಿ ಅವನವನ ಹೃದಯಪರಿಪಾಕಕ್ಕೆ ಅನುಗುಣವಾದ ಆಶಯವನ್ನು ಬೋಧಿಸುವುದಾಗಿದೆ. ಭಗವದ್ಗೀತೆಗೆ ವ್ಯಾಖ್ಯಾನಗಳು ಹೇರಳವಾಗಿವೆ. ಅದು ಭಾಷಾಂತರವಾಗಿರುವ ಭಾಷೆಗಳ ಸಂಖ್ಯೆ ಬಹುಶಃ ಅದರಲ್ಲಿರುವ ಶ್ಲೋಕ ಸಂಖ್ಯೆಗಿಂತಲೂ ಮಿಗಿಲೇನೊ. ಅವರವರ ಅಭಿರುಚಿಗಳಿಗೆ ತಕ್ಕಂತೆ ಗೀತೆಯನ್ನು ಅರ್ಥಮಾಡಿಕೊಂಡು ಅದರಂತೆ ಬರೆದಿರುವುದು ಲೋಕದಲ್ಲಿ ಕಂಡುಬಂದಿದೆ. ಈ ವಿವಿಧ ರೀತಿಯ ವ್ಯಾಖ್ಯಾನಗಳಿಗೆ ಅವಕಾಶ ಕೊಡುವಂತೆ ಇರುವುದೂ ಗೀತೆಯ ವೈಶಿಷ್ಟ್ಯಗಳಲ್ಲೊಂದಾಗಿದೆ.

ಭಗವದ್ಗೀತೆ ವಿಶ್ವವ್ಯಾಪಕವೂ ಉಪನಿಷತ್ತುಗಳ ಸಾರವೂ ಆಗಿದೆಯೆಂಬುವ ಸತ್ಯವನ್ನು ಇಲ್ಲಿ ಸ್ಥಾಪಿಸಲಾಗಿದೆ. ಉಪನಿಷತ್ತುಗಳು ಹಸುಗಳು; ಅರ್ಜುನ ಕರು; ಗೀತಾಚಾರ್ಯನಾದ ಶ್ರೀಕೃಷ್ಣನೇ ಹಾಲು ಕರೆಯುವ ಗೋಪಾಲ; ಗೀತಾರ್ಥವೇ ಹಾಲು; ಸುಬುದ್ಧಿಗಳಾದವರು ಗೀತಾಮೃತಪಾನ ಮಾಡುವರು ಎಂಬ ಮಾತು ಪ್ರಸಿದ್ಧವಾದುದು, ಗೀತೆಯ ಶ್ರೇಷ್ಠತೆಯನ್ನು ಘೋಷಿಸುವಂತಹುದು.

ವಿಶ್ವ ಕಾವ್ಯೇತಿಹಾಸವೆನಿಸಿದ ಪಂಚಮವೇದವೆಂದು ಪ್ರಸಿದ್ಧವಾದ ಮಹಾಭಾರತದಲ್ಲಿ ಬರುವ ಶ್ರೀಮದ್ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಹಲವು ತತ್ತ್ವಗಳನ್ನು ಬಿಡಿಬಿಡಿಯಾಗಿ ತೆಗೆದುಕೊಂಡು ಇಲ್ಲಿ ಚರ್ಚಿಸಲಾಗಿದೆ. ಗೀತೆಯಲ್ಲಿ ಬರುವ ಪ್ರತಿಯೊಂದು ಉಪದೇಶವು ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂದು ಸಂದೇಹಗ್ರಸ್ತವಾದ ಸುಸಂಸ್ಕೃತ ಚಿತ್ತಕ್ಕೆ ಮಾಡಿದ ತತ್ತ್ವೋಪದೇಶವೆಂದು ಭಾವಿಸುವುದಾದರೆ ಗೀತೆ ಎಂದೆಂದಿಗೂ ಎಲ್ಲ ಮಾನವರ ಅಂತರ್ವಾಣಿಯಾಗಬಲ್ಲುದು. ಪಾಂಡವ-ಕೌರವ ಯುದ್ಧ ದೈವೀ ಮತ್ತು ಆಸುರೀ ಗುಣಗಳಿಗೆ ನಡೆದ ಹೋರಾಟವೆಂದು ಭಾವಿಸಬಹುದು. ಪ್ರತಿಯೊಬ್ಬ ಮಾನವನೂ ಗೀತೆಯನ್ನು ಸಾವಧಾನದಿಂದ ಅಧ್ಯಯನ ಮಾಡಬೇಕು.... ಸಾಧನೆಯ ಮೂಲಕ ಪರಮಾತ್ಮನ ಅಂತಃಪ್ರೇರಣೆಯನ್ನು ಅರಿತು ಜೀವನ ಸಂಗ್ರಾಮದಲ್ಲಿ ವಿಜಯಿಯಾಗಿ ಪರಮಾತ್ಮನಲ್ಲಿ ಅನನ್ಯ ಭಕ್ತನಾಗಿ, ಕೃತಕೃತ್ಯನಾಗಬೇಕು-ಎಂಬ ಗ್ರಂಥಕರ್ತರ ಈ ಅಭಿಪ್ರಾಯಗಳು ಮೆಚ್ಚತಕ್ಕವಾಗಿವೆ.

ಎರಡನೆಯ ಭಾಗ-ಗೀತೆಯ ಅಂತರ್ವಾಣಿ-ದಲ್ಲಿ ಅರ್ಜುನನಿಗೆ ಬಂದ ಸಂದೇಹಗಳು, ಅವುಗಳಿಗೆ ಭಗವಂತನು ಕೊಟ್ಟ ಸಮಾಧಾನಗಳು-ಇವನ್ನು ವಿವೇಚಿಸಲಾಗಿದೆ-ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಎಂಬ ಮೂರು ಹಂತಗಳಲ್ಲಿ. ಅನಂತರ ಭಕ್ತಿತತ್ತ್ವವನ್ನು ಕುರಿತು ವಿಸ್ತಾರವಾಗಿ ಚರ್ಚಿಸಲಾಗಿದೆ. (ಪುಟ ೧೩೬-೧೫೬). ಇಲ್ಲಿಯೂ ವಿಭಜನೆ ಚೆನ್ನಾಗಿದೆ. ಭಗವದ್ಗೀತೆಯಲ್ಲಿ ಬರುವ ಅರ್ಜುನನ ಪ್ರಶ್ನೆಗಳನ್ನೆಲ್ಲಾ ಒಟ್ಟಾಗಿ ಕ್ರೋಢೀಕರಿಸಿ, ಅವುಗಳಿಗೆ ಕೃಷ್ಣ ಕೊಟ್ಟ ಉತ್ತರಗಳನ್ನು ಜೋಡಿಸಿರುವುದರಲ್ಲಿ ಜಾಣ್ಮೆಯಿದೆ. ಇಲ್ಲಿಯೂ ಅದನ್ನು ಹಲವು ಭಾಗಗಳಾಗಿ ವಿಂಗಡಿಸಿ, ಸೂಕ್ತವಾದ ಶೀರ್ಷಿಕೆಗಳನ್ನು ಕೊಟ್ಟಿರುವುದು ಓದುಗರ ದೃಷ್ಟಿಯಿಂದ ಸಹಾಯಕವಾಗಿದೆ.

ನಿಷ್ಕಾಮ ಕರ್ಮ, ಸಮತೆ ಮತ್ತು ಅನನ್ಯ ಭಕ್ತಿಗಳು ಗೀತೆಯ ಸಾರಸರ್ವಸ್ವ. ಅದರಲ್ಲೂ ಮುಖ್ಯವಾದುದು ಭಗವಂತನಲ್ಲಿ ಮೂಡುವ ಅನನ್ಯ ಭಕ್ತಿ. ಇದರಲ್ಲಿ ಉಳಿದೆರಡೂ ಅಂತರ್ಗತವಾಗುತ್ತವೆ. (ಪುಟ ೧೩೬) ಭಕ್ತಿಯು ಹೇಡಿಯ ಸಾಧನವಲ್ಲ; ಬಲಹೀನನು ಆತ್ಮಶಕ್ತಿಯನ್ನು ಗಳಿಸಲಾರನು. ಸಾಮಾನ್ಯವಾಗಿ ಭಕ್ತರು ಸಾಧುಸ್ವಭಾವದವರು.... ಆದರೆ ದುರ್ಬಲ ಹೃದಯರಲ್ಲ; ಪರಮಾತ್ಮನಲ್ಲಿ ಭಕ್ತಿಯಿಲ್ಲದವನಿಗೆ ತ್ಯಾಗ, ಸಮತೆ, ಕಾರ್ಯಕೌಶಲ ಮತ್ತು ನಿಷ್ಕಾಮ ಬುದ್ಧಿಗಳು ಉದಿಸಲಾರವು; ಸಾತ್ವಿಕ ಶಕ್ತಿ ಅತ್ಯಂತ ಬಲಿಷ್ಠವಾದುದು. ರಾಜಸ ತಾಮಸಗಳು ನಶ್ವರ ಮತ್ತು ದುರ್ಬಲ-ಇದು ಗೀತೆಯ ತಿರುಳು-ಅಂತರ್ವಾಣಿಯೆಂದು ಗ್ರಂಥಕರ್ತರು ಸಕಾರಣವಾಗಿ ಸಮರ್ಥ ರೀತಿಯಿಂದ ಪ್ರತಿಪಾದಿಸಿರುತ್ತಾರೆ.

ಅಲ್ಲಲ್ಲೇ ಅನೇಕ ಕಡೆ ತಾತ್ತ್ವಿಕವಾಗಿ ಭಿನ್ನಾಭಿಪ್ರಾಯಗಳಿದ್ದರೂ, ಭಗವದ್ಗೀತೆಯನ್ನು ಕುರಿತ ಈ ವಿವೇಚನೆ ಉಪಯುಕ್ತವಾಗಿದೆ. ಓದುಗರಿಗೆ ತುಂಬ ಪ್ರಯೋಜನಕಾರಿಯಾಗಿದ್ದು ಭಾರತೀಯ ಸಂಸ್ಕೃತಿಯ ಮಹಾಸಂದೇಶವನ್ನು ಸಾರುವ ಅತ್ಯುತ್ಕೃಷ್ಟ ಕೃತಿಯಲ್ಲಿ ಶ್ರದ್ಧೆ ಆಸಕ್ತಿಗಳನ್ನೆ ಹುಟ್ಟಿಸುವ ಈ ಪ್ರಯತ್ನ ಸ್ತುತ್ಯವಾಗಿದೆ. ಗ್ರಂಥಕರ್ತರ ವಿದ್ವತ್ತು ಈ ವಿವೇಚನೆಯಿಂದ ಚೆನ್ನಾಗಿ ಅರಿವಾಗುತ್ತದೆ. ಕನ್ನಡದಲ್ಲಿ ಗೀತೆಯನ್ನು

ಕುರಿತು ಹೊರಬಿದ್ದಿರುವ ಕೃತಿಗಳಲ್ಲಿ ಪ್ರಮುಖಸ್ಥಾನ ಈ ಗ್ರಂಥಕ್ಕಿದೆ ಎಂಬುದರಲ್ಲಿ ಸಂದೇಹವಿಲ್ಲ.

ಪುಸ್ತಕದ ಶೀರ್ಷಿಕೆ ಯಾವಾಗಲೂ ಸಣ್ಣದಾಗಿ ಅರ್ಥಗರ್ಭಿತವಾಗಿ, ಸ್ವಾರಸ್ಯವಾಗಿ, ಉದ್ಬೋಧಕವಾಗಿ ಇರುವುದು ಆಗತ್ಯ. ಈ ಪುಸ್ತಕಕ್ಕೆ "ಗೀತೆಯ ಅಂತರ್ವಾಣಿ" ಎಂಬುದು ಅಂತಹ ಯೋಗ್ಯವಾದ ಶೀರ್ಷಿಕೆಯಾಗಬಲ್ಲುದು. ಆದರೆ ಅದರೊಂದಿಗೆ ಸೇರಿರುವ "ಗೀತೆ; ಅಂತರ್ವಾಣಿ" ಎಂಬುದು ಪುಸ್ತಕದ ಒಳಗೆ ಮಾತ್ರ ಬಂದಿದ್ದರೆ ಚೆನ್ನಾಗಿತ್ತು.

—ಕೆ. ಎಂ. ಕೃ.

**ಪ್ರಿಯದರ್ಶಿ ಅಶೋಕ:** ಲೇಖಕರು: ಶ್ರೀ ಸಿಂಪಿ ಲಿಂಗಣ್ಣ, ಚಡಚಣ. ಪ್ರಕಾಶಕರು: ಶ್ರೀ ಅರವಿಂದ ಗ್ರಂಥಾಲಯ, ಪೋಸ್ಟ್ ಚಡಚಣ, ವಿಜಾಪುರ ಜಿಲ್ಲೆ. ಆಕಾರ ಕಿರೀಟ ಅಷ್ಟದಳ, ಪುಟಗಳು ೭೩, ಬೆಲೆ ರೂ. ೧.

ಲೇಖಕರೇ ಹೇಳಿರುವಂತೆ, ದಿ॥ ಕಾಪಸೆ ರೇವಪ್ಪನವರು ಎರಡು ದಶಕಗಳ ಹಿಂದೆ ಅಶೋಕನ ಚರಿತ್ರೆಯ ಮುಖ್ಯಾಂಶಗಳನ್ನು ಟಿಪ್ಪಣಿಯ ರೂಪದಿಂದ ಸಂಗ್ರಹಿಸಿಟ್ಟಿದ್ದರು. ಅದರೊಳಗಿನ ಮುಖ್ಯಾಂಶಗಳನ್ನು ಹೆಕ್ಕಿ, ಈ ಚರಿತ್ರೆಯನ್ನು ಹವಣಿಸಿ ಲೇಖಕರು ಬೆಳಕಿಗೆ ತಂದಿದ್ದಾರೆ. ಈ ಚರಿತ್ರ ಸಂಗ್ರಹವು ಶ್ರೀ ನಾಯಕ ವೆಂಕಟರಾಯರ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ಸಂದರ್ಶನ' ಎಂಬ ವಾರ ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟವಾಗಿತ್ತು. ಪುಸ್ತಕದ ಪೀಠಿಕೆಯಲ್ಲಿ—"ಲೇಖಕರಾದ ಶ್ರೀ ಸಿಂಪಿ ಲಿಂಗಣ್ಣನವರು ರಾಷ್ಟ್ರಪತಿಗಳಿಂದ 'ಆದರ್ಶ ಶಿಕ್ಷಕ' ಎಂಬ ಪ್ರಶಸ್ತಿಯನ್ನು ಪಡೆದವರು. ಇವರು ಹಳ್ಳಿಯ ಶಾಲೆಯ ಹಿರಿಯ ಗುರುಗಳಾಗಿ ಜೀವನ ಸಾಗಿಸಿ ಇಂದು ನಿವೃತ್ತರಾಗಿದ್ದರೂ, ಇದೀಗ ನಿಜವಾದ ಕಾರ್ಯಕ್ಕೆ ಪ್ರವೃತ್ತರಾದಂತೆ ನಡುಗಟ್ಟಿ ನಿಂತಿದ್ದಾರೆ. ಇವರ ಮಾತು ಹರಿತ; ವಿಚಾರ ತೀಕ್ಷ್ಣ ಶ್ರೀ ಅರವಿಂದರ ಸರಣಿಗೆ ತುಂಬ ಹೊಂದಿಕೊಂಡಿದ್ದಾರೆ. ದಿಲ್ಲಿಯವರೂ ತಲೆ ತುರಿಸಿಕೊಳ್ಳುವ ಹಾಗೆ ಹಳ್ಳಿಯಲ್ಲಿ ಕುಳಿತು ಬರೆಯಬಲ್ಲವರು"—ಎಂದು ಪ್ರಸ್ತಾಪಿಸಲಾಗಿದೆ.

ಪ್ರಕೃತ ಪುಸ್ತಕದಲ್ಲಿ ಅಶೋಕ ಚಕ್ರವರ್ತಿಯ ಜೀವನ ಚರಿತ್ರೆಯ ನಿರೂಪಣೆ ರಸವತ್ತಾಗಿ ಸಾಗಿದೆ. ಆದರೆ ಭಾಷೆ ಸುಲಭ ಶೈಲಿಯಲ್ಲಿರದೆ, ಅಲ್ಲಲ್ಲಿ ತೊಡಕುಗಳು ಎದ್ದು ಕಾಣುತ್ತವೆ. ಕರ್ಮಣಿ ಪ್ರಯೋಗಗಳು ಬಹಳವಾಗಿವೆ.

'ಬಿಂದುಸಾರನು ತನ್ನ ಪುತ್ರನಾದ ಅಶೋಕನನ್ನು ತಕ್ಷಶಿಲೆಯಲ್ಲಿ ಎದ್ದ ದಂಗೆಯನ್ನು ಅಡಗಿಸುವುದಕ್ಕೆ ಏಕಾಕಿಯಾಗಿ ಕಳುಹಿಸಿದನು' (ಪುಟ ೩) ಎಂದು ಲೇಖಕರು ಬರೆದಿರುತ್ತಾರೆ. ಇದರಿಂದ ತಂದೆ ಮಕ್ಕಳಲ್ಲಿ ಪರಸ್ಪರ ಪ್ರೇಮವಿರಲಿಲ್ಲವೆಂದು ಊಹಿಸಬಹುದು—ಎಂಬುದು ಕೆಲವರ ವಾದ; ಮಗಧದ ಅಂದಿನ ಪರಿಸ್ಥಿತಿಯಲ್ಲಿ ಇದು ಅಸಮಂಜಸವೆಂದು ಲೇಖಕರ ವಾದಸರಣಿ. ಆದರೆ ಯಾವ ಆಧಾರಗಳನ್ನೂ ಲೇಖಕರು ಮುಂದಿಟ್ಟಿಲ್ಲ. ಇದೊಂದು ಸಣ್ಣ ಕೊರತೆಯಾಗಿದೆ.

'ಅಶೋಕನ ತಾಯಿಯಾದ ಸುಭದ್ರಾಂಗಿಯು ಬಡ ಬ್ರಾಹ್ಮಣನ ಮಗಳು. ಆಕೆಯನ್ನು ಅರಸನ ಕಣ್ಣೆದುರಿಗೆ ತರುವಾಗ ಆ ಬ್ರಾಹ್ಮಣನು ಕ್ಷೌರಿಕನ ವೇಷವನ್ನು ಧರಿಸಿದ್ದರಿಂದ ಆಕೆಯು ಕ್ಷೌರಿಕನ ಮಗಳೆಂದೇ ರಾಜಮನೆತನದಲ್ಲಿ ತಿಳುವಳಿಕೆಯಿತ್ತು' (ಪುಟ ೫) ಎಂದು ಲೇಖಕರು ಬರೆದಿರುತ್ತಾರೆ. ಆದರೆ ಆ ಬಡಬ್ರಾಹ್ಮಣ ವೇಷವನ್ನೇಕೆ ಬದಲಾಯಿಸಿದ—ಎಂಬುದನ್ನು ಸ್ವಲ್ಪ ತಿಳಿಸಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು.

ಕೆಲವು ಕಡೆಗಳಲ್ಲಿ ಪದ ಪ್ರಯೋಗಗಳೂ ಹಾಗೂ ವಾಕ್ಯಗಳು ತೀರಾ ವಿಚಿತ್ರವಾಗಿವೆ. ಉದಾಹರಣೆಗೆ

(ಅ) 'ಗೆದೆಯಲ್ಪಟ್ಟಂಥ' ಆ ಕಳಿಂಗ ರಾಜ್ಯಕ್ಕೆ . . . . .

(ಆ) ಕ್ಷುದ್ರಶಾಸನ ಲಿಪಿಗಳು ನವದೀಕ್ಷಿತನಾದ ಅಶೋಕ ಸಾಮ್ರಾಟನ ಬೌದ್ಧಧರ್ಮದಲ್ಲಿಯ ಪ್ರಬಲವಾದ ಅನುರಾಗದ ಪ್ರಥಮ ಪರಿಚಯವಾಗಿದೆ.

(ಇ) 'ಆ ಸ್ಥಳವನ್ನು ಅಗಿದರೆ ಆ ಪವಿತ್ರವಾದ ದೇಹಾಸ್ಥಿಗಳು ತಮಗೆ ದೊರಕೊಳ್ಳಬಹುದು.

(ಈ) ಅಮಾವಾಸ್ಯೆ—'ಎಂಬುದಕ್ಕೆ 'ಅಮಾವಾಸಿ' ಎಂದೂ, 'ಬೆಳಸು' ಎಂಬುದಕ್ಕೆ 'ಬೆಳಿಸು' ಎಂದೂ ಬರೆದಿರುತ್ತಾರೆ.

ಅಶೋಕ ಚಕ್ರದ ಬಗ್ಗೆ ಹೆಚ್ಚಿನ ವಿವರಗಳನ್ನು ನಿರೀಕ್ಷಿಸುವ ಓದುಗರಿಗೆ ತುಂಬಾ ನಿರಾಶೆಯಾಗಿದೆ. ಅಶೋಕಚಕ್ರ ಅಥವಾ ಸ್ತಂಭದ ಬಗ್ಗೆ ಕೇವಲ ಒಂದೆರಡು ವಾಕ್ಯಗಳು ಮಾತ್ರ ಇವೆ. (ಪುಟ ೩೧) ಅಶೋಕಚಕ್ರವರ್ತಿಯ ಜೀವನವೇ ಪುಸ್ತಕದ ವಸ್ತುವಾಗಿರುವಾಗ ಅಶೋಕಚಕ್ರದ ಬಗ್ಗೆ ಹೆಚ್ಚು ವಿಷಯಗಳನ್ನು ಬರೆಯಬಹುದಾಗಿತ್ತು. (ಈ ಅಶೋಕಸ್ತಂಭವನ್ನು ನಾನೂ ಡಾ॥ ಕೆ. ಎಸ್. ನಾಗರಾಜನ್‌ರವರೂ ಸಾರಾನಾಥಕ್ಕೆ ಹೋಗಿದ್ದಾಗ ನೋಡಿ ಬಂದಿದ್ದೇವೆ. ಹೆಚ್ಚಿನ ವಿವರಗಳಿಗೆ ನಾನು ಆ ಸ್ತಂಭದ ಬಗ್ಗೆ ಮಾರ್ಚ್ ೧೯೫೭ರ ಶರಣ ಸಾಹಿತ್ಯ ಎಂಬ ಮಾಸಪತ್ರಿಕೆಯಲ್ಲಿ ಬರೆದಿರುವ ವಿಚಾರಾತ್ಮಕ ಪ್ರಬಂಧವನ್ನು ವಾಚಕರು ಓದಬಹುದು.)

ಅಶೋಕನ ಧರ್ಮಪ್ರಚಾರವೆಂಬ ಅಧ್ಯಾಯದಲ್ಲಿ ಕೆಲವು ವಿಚಾರಪೂರಿತ ಸಂಗತಿಗಳಿವೆ. ಇವುಗಳು ವಾಚಕರಿಗೆ ಆನಂದವನ್ನುಂಟುಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲದೆ ಅಶೋಕನ ಶಾಸನಗಳ ಬಗ್ಗೆ ಹೆಚ್ಚಿನ ಬೆಳಕನ್ನು ಲೇಖಕರು ಬೆಳಕು ಚೆಲ್ಲಿರುವುದು ಸ್ತುತ್ಯರ್ಹವಾಗಿದೆ. ಒಟ್ಟು ಹದಿನಾಲ್ಕು ಶಾಸನಗಳನ್ನು ಉಲ್ಲೇಖಿಸಿರುತ್ತಾರೆ.

ಒಟ್ಟಿನಲ್ಲಿ ಈ ಪುಸ್ತಕವು ಕನ್ನಡಿಗರೆಲ್ಲರಿಗೂ ತುಂಬಾ ಉಪಯುಕ್ತವಾಗಿದೆ. ಮುಖ್ಯವಾಗಿ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇಂಥ ಗ್ರಂಥಗಳನ್ನು ಓದುವುದು ಒಳಿತು. ಈ ಲೇಖಕರಿಂದ ಇನ್ನೂ ಇಂಥ ಗ್ರಂಥಗಳು ಹೊರಬೀಳಲೆಂದು ಹಾರೈಸುತ್ತೇನೆ.

—ಬ. ನ. ಸುಂ.

ರುದ್ರಾಕ್ಷಿ: ಬರೆದವರು: ಶ್ರೀ ರಾಜಶೇಖರ, ಪ್ರಕಾಶಕರು: ಶ್ರೀ ಡಿ. ಪಿ. ಶಿವಲಿಂಗಯ್ಯ, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ. ಪುಟಗಳು ೧೧೩, ಬೆಲೆ ರೂ. ೧–೭೫ ನ.ಪೈ.

ಇದೊಂದು ಗೀತಗುಚ್ಛ. ಇದರಲ್ಲಿ ೪೦ ಗೀತೆಗಳಿವೆ. ಮೊದಲನುಡಿ ಹಾಗೂ ನಿವೇದನಗಳು ಕೂಡ ಪದ್ಯಗಳೇ ಆಗಿವೆ. ಮೊದಲದಂತೂ ಆಂಗ್ಲಭಾಷಾ ಮಿಶ್ರಿತವಾದ ನವ್ಯಕವನ. ಅದರಲ್ಲಿ 'ಮೋಹ–ಮೋಸ' ಗಳೇ ಎರಡು ಕಣ್ಣುಗಳು, ಹೃದಯ ಹಾಡುವುದು (The heart sings), ಆಸೆ ಮೃತ್ಯುವಿನ ಮೇನಕೆ .... ಎರಡು ಕಣ್ಣುಗಳನ್ನು ಮೀರಿದ ಆ ಮೂರನೆಯದೇ ರುದ್ರನ+ ಅಕ್ಷಿ .... ಈ ವಿಷಯಗಳೇ ಮಾರ್ಮಿಕವಾಗಿ ಸ್ಪಂಧಿಸಿವೆ. ನಿವೇದನೆಯಲ್ಲಿಯೂ ಆ .... ಶಿವನ ಕಣ್ಗೆ .... ಕಾಣ್ಕೆಯೆಂಬ ಅರ್ಪಣೆಯ ಭಾವವಿದೆ.

ಪ್ರಥಮ ಗೀತೆಯಲ್ಲಿಯೇ ಕವಿ ತನ್ನೆದೆಯ ಬಯಲ ಬಿತ್ತರದಿ ನಾಟ್ಯವಾಡಲು ಕಾವ್ಯಭೈರವಿಯನ್ನಾಹ್ವಾನಿಸಿರುವುದು ಆದಿಮಂಗಲದ ದ್ಯೋತಕವೆನಿಸುತ್ತದೆ. 'ಹಸಿದವಗೆ ಧರ್ಮವಿಲ್ಲ, ಎಂಬಂತೆ ನೊಂದಜೀವ ಏನನ್ನು ಮಾಡಲು ತಾನೆ ಹಿಂಜರಿಯುತ್ತದೆ? ಸೇಡು ತೀರಿಸಿಕೊಳ್ಳದೆ ಬಿಡುವುದೆ–ಎಂಬ ಭಾವ ಅಭಿವ್ಯಕ್ತವಾಗುತ್ತದೆ–ಎರಡನೆಯ ಕವನದಲ್ಲಿ. ಕತ್ತಲ ಎದೆಕೋಣೆಯೊಳಗೆ ಅನಂತ ಕನಸುಗಳು ಕೊರಗಿ, ದುಃಖ ಹೆಪ್ಪುಗಟ್ಟುವ ರೀತಿ ಒಂದು ಶೋಕಗೀತೆಯಲ್ಲಿಯೂ, ಸುಖದ ಸಂಯೋಗ–ಎಂದೊ? ಎಂಬ ಶಂಕೆ ಇನ್ನೊಂದರಲ್ಲೂ ತಲೆಹಾಕಿವೆ.

'ತಾಯಿ' ತನ್ನ ಕಂದನ ಸಲುವಾಗಿ, ಪತಿಯನ್ನು ಕಳೆದುಕೊಂಡರೂ–ಬದುಕುವ ಯತ್ನ ಅದೇ ಹೆಸರಿನ ಪದ್ಯಭಾಗದಲ್ಲಿ ಸ್ಪಷ್ಟಪಡುತ್ತದೆ. ಒಳ ಹೊರಗೊಂದಾಗಿರದ–ಕೇವಲ ಆಡಂಬರಯುಕ್ತವಲ್ಲವೆಂದು ದೀಪಾವಳಿ ಸಾರುತ್ತದೆ.

'ಬೆಳುದಿಂಗಳ ಇರುಳ'ಲ್ಲಂತೂ ತುಟಿ=ಮೋಡ, ನಗೆ=ಚಂದಿರೆ, ಹಲ್ಲಸಾಲು=ನಕ್ಷತ್ರಗಳು—ಈ ರೂಪಣ ಸೊಗಸಾಗಿ ಬಂದಿದೆ. ನೊಂದೆದೆಯ ಆಳಲು 'ಮರುಭೂಮಿ' ಯಲ್ಲೂ, ಅಪೂರ್ವವಾದ ವ್ಯಥೆಯ ತೀವ್ರತೆ 'ಭಾರವಾಗಿದೆ ಹೃದಯ' ದಲ್ಲಿಯೂ ಹೊರಹೊಮ್ಮಿವೆ.

'ರಾಜಕುಮಾರಿ' ಎಂಬುದರಲ್ಲಿ ಅಂದವಾದ ಅರಮನೆಗೂ, ಮಣ್ಣ ಕಿರುಮನೆಗೂ ಇರುವ ವ್ಯತ್ಯಾಸದ ವರ್ಣನೆಯಿದೆ. 'ಬೇಸಗೆಯ ನದಿಯ ತಟಿಯಲ್ಲಿ' ಎಂಬುದು ಆ ಕಾಲದ ಪರಿಸ್ಥಿತಿಯನ್ನೇ ವರ್ಣಿಸುವುದು.

ಮಿಂಚಿನಂತೆ ಹೊಳೆದು ಕಣ್ಮರೆಯಾಗುವ ಜೀವನ 'ಸಂಧ್ಯಾರಾಗ' ದಲ್ಲಿ, ಕೈಗೆ ಬಂದ ತುತ್ತು ಬಾಯಿಗಿಲ್ಲ—ಎಂಬಂತಹ ಮಾರ್ಮಿಕ ವೇದನೆ 'ಮುಡಿಯದುದುರಿದ ಹೂವಿ' ನಲ್ಲಿ ಬಾಳಕಡಲದಾಂಟುವ ಆತ್ಮವಿಶ್ವಾಸ 'ಬಯಕೆ'ಯಲ್ಲಿ, ಈಡೇರಲಾರದ ಆಸೆ 'ಮುಗಿಲ ಮೊಗ್ಗು' ಕವನದಲ್ಲಿ ಪ್ರತಿಬಿಂಬಿಸುತ್ತವೆ.

'ಒಂದು ಮನೆಯ ಕೋಣೆಯೆರಡು ನಮ್ಮ ಮನಗಳು'–ಎಂಬುದು ಅಣಿಮುತ್ತಿನಂಥ ನುಡಿ.

ಸೌಂದರ್ಯವನ್ನು ಹುಡುಕುತ್ತ 'ಹುಚ್ಚ'ನಂತಾಗಿ ತನ್ನದೇ ಆದ ಲೋಕದಲ್ಲಿ ವಿಹರಿಸುವುದು, 'ನೋವು–ಸೋಲು' ಗಳ ದಾಂಟಬೇಕೆಂಬ ಆಕಾಂಕ್ಷೆ, ಬಾಳ ರಣರಂಗದ ಸೆಣಸು, ಪ್ರಕೃತಿಯೇ ಪ್ರೇಮಸಾಮಗ್ರಿಯಾಗುವಿಕೆ, ಮೃತ್ಯುವಿನ ಹೊಂಚು, ಜೀವನದ ಜೀವಾಳ, ಚೆಲುವಿನ ಹೆಣ್ಣು–ಅದನ್ನು ಹಿಂಬಾಲಿಸುವ ಗಂಡುಗಳಿಗಿರುವ ಭೇದ, ಸೃಷ್ಟಿಕರ್ತನ ಸುಂದರ ಪಾತ್ರೆ, ಬದುಕನ್ನು ಪ್ರತಿಬಿಂಬಿಸುವ ಬೊಂಬೆಯಾಟ, ಇಷ್ಟ–ದೇವತೆಗಳಿಗೆ ಅರ್ಪಿತವಾಗದ ಸಿರಿ–ಚೆಲುವುಗಳೆಲ್ಲ ಏಕೆ? ಎಂಬ ದೀನತೆ, ಸಮಯ ಸಾಕಾಗದ ಬಾಳಿನ ಸಮಸ್ಯೆಗಳು, ವಾಣೀ ಕರುಣೆಯಿಂದಾಗದ ಕಾರ್ಯವೇ ಇಲ್ಲ, ಎಂಬ ಸವಾಲು ಸಮಸ್ಯೆಗಳು,–ಈ ವಿವಿಧ ವಿಷಯಗಳ ಮಂಥನ ಅನೇಕ ಗೀತೆಗಳಲ್ಲಿ ನಡೆದಿದೆ.

ಪ್ರಾರ್ಥನೆ, ನಾನು–ನೀನು, ಒಲುಮೆಗೆ, ಭಕ್ತಿ, ಏನು ಮೋಸವು, ಹೃದಯ, ವರ, ವಿಮೋಚನೆ, ಕಡೆಯ ನುಡಿ—ಈ ಕವನಗಳು ಹೃದಯಂಗಮವಾಗಿವೆ. ಇವನ್ನು ಸಹೃದಯರು ಓದಿಯೇ ಆನಂದಪಡಬೇಕು!

ಕವಿ ಹೃದಯವನ್ನು ಬಹುಮಟ್ಟಿಗೆ ಪ್ರತಿಬಿಂಬಿಸಬಹುದಾದ 'ರುದ್ರಾಕ್ಷಿಗೆ'–ಎಂಬೀಗೀತೆಯಂತೂ ಕವಿಯ ಕೃತಕೃತ್ಯತೆಗೆ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಸಮಾಸಪದಗಳ ಪ್ರಯೋಗ ರೂಪಕಗಳ ಜೋಡಣೆ, ಬಳಸಿರುವ ವಸ್ತುವಿನ್ಯಾಸ–ಇವು ಸಹಜತೆಯ ಕುರುಹೆನಿಸಿವೆ.

ದೇವಲೋಕಿ, ಹೃದಯನಾಗ ಮೊದಲಾದ ಶಬ್ದಗಳು ಭಾಷಾಸಂಪತ್ತಿನ ಹೆಚ್ಚಳವನ್ನು ತೋರಿಸುತ್ತವೆ.

ಅಲ್ಲಲ್ಲೇ 'ಭಗ್ನಪ್ರೇಮ'ವು ಧ್ವನಿತವಾಗುವುದು ಕಂಡುಬರುತ್ತದೆ. ಇಷ್ಟಾದರೂ ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂತಹ 'ಗೀತೆ' ಗಳೂ ವಿರಚಿತವಾಗುವ ಯತ್ನ ನಡೆಸುವುದೊಳಿತು.

ಶ್ರೀಯುತರ ಕಾವ್ಯಶ್ರೀ ಪ್ರಫುಲ್ಲಿತವಾಗಿ ಬಳೆದು ಇನ್ನೂ ಶ್ರೇಷ್ಠ ಕೃತಿಗಳು ಹೊರಬರಲೆಂದು ಹಾರೈಸುವ.

ಶ್ರೀ ಗಂಗಾಧರಸ್ವಾಮಿಗಳವರ ನಾಮಾವಳಿಯು: ಲೇಖಕರು: (ಪುರಾತನರಕಂದ) ಶ್ರೀ ಮಹಾರುದ್ರಪ್ಪ ಮಹಾಲಿಂಗಪ್ಪ ಮಿರ್ಜಿ, ಪ್ರಕಾಶಕರು: ಶ್ರೀ ಗು. ಮ. ಮಿರ್ಜಿ, B.A., LL.B. ಅಡ್ವೋಕೇಟರು ಮತ್ತು ವಿ. ಮ. ಮಿರ್ಜಿ, B.A., ದಾಜೀಬಾನ ಪೇಟೆ, ಹುಬ್ಬಳ್ಳಿ. ಪುಟಗಳು ೧೩, ಬೆಲೆ ಇಲ್ಲ.

ಇದು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಕೀರ್ತಿಕಾಯರಾದ ವೈಯಾಕರಣಿ ಶ್ರೀ ಗಂಗಾಧರ ಸ್ವಾಮಿಗಳವರ ಸಂಸ್ಮರಣೆ ಹಾಗೂ ಸಂಕ್ಷಿಪ್ತ ಜೀವನಚಿತ್ರಣ. ಪ್ರಾರಂಭದಲ್ಲಿ ಶ್ರೀ ಮಠದ ಗುರುಪರಂಪರೆಯನ್ನೂ, ಶ್ರೀ ಗಂಗಾಧರ ಮಹಾಸ್ವಾಮಿಗಳವರ ಪೂರ್ವಾಶ್ರಮ ವಿಚಾರವನ್ನೂ ಸಂಗ್ರಹವಾಗಿ ತಿಳಿಸಲಾಗಿದೆ. ಇದರಲ್ಲಿರುವ ನೂರೆಂಟು ನಾಮಾವಳಿಯಲ್ಲಿಯೂ ಶ್ರೀ ಶ್ರೀ ಸ್ವಾಮಿಜಿಯವರ ಲೋಕದ್ವಯ ಸಾಧನಾಸಿದ್ಧತೆ ಮತ್ತು ಲೇಖಕರಿಗೆ ಗುರುವಿನಲ್ಲಿರುವ ನಿಕಟಭಕ್ತಿ ಇವು ಸ್ಪಷ್ಟಪಡುತ್ತವೆ.

ಈ ಕೃತಿಯಿಂದ ಶ್ರೀ ಶ್ರೀ ಗಂಗಾಧರಸ್ವಾಮಿಗಳವರ ಪೂರ್ಣ ಜೀವನಚರಿತ್ರೆಯನ್ನು ತಿಳಿದುಕೊಳ್ಳಬೇಕೆಂಬ ಆಕಾಂಕ್ಷೆ ಓದುಗರಲ್ಲಿ ಉದಿಸದಿರದು. ಅಂತಹ ಸದ್ಗುರು ಜೀವನಕಥನ ಬೇಗನೆ ಕನ್ನಡಿಗರ ಕೈಸೇರುವ ಪ್ರಯತ್ನ ನಡೆಯಲಿ.

—ಪಂಡಿತ ಕೆ. ಪಿ. ಶಿವಲಿಂಗಯ್ಯ

**ಕಾವ್ಯ ಮನೋರಮಾ:** (ಅಂಬಾಸ್ತವನ ಸಮೇತ) ಲೇಖಕರು: ಶ್ರೀ ಎಸ್. ವೆಂಕಟರಾಜ. ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ, ಉಡುಪಿ ದ. ಕ. ಪುಟಗಳು ೮೦, ಬೆಲೆ ೧ ೫೦ ನ.ಪೈ.

ಮೈಸೂರು ಸರ್ಕಾರದವರಿಂದ ಪುರಸ್ಕೃತವಾದ 'ಮಾನಸ ಗಂಗೆ'ಯ ಲೇಖಕರಾದ ಶ್ರೀ ವೆಂಕಟರಾಜರಿಂದ ಅವರ ಅನುಭವದ ಸಾರ ಸರ್ವಸ್ವವನ್ನು ಅವರ ಈ 'ಕಾವ್ಯಮನೋರಮೆ'ಯಲ್ಲಿ ಆಶಿಸುವುದು ಸಹಜವೇ ಆಗಿದೆ. ಆದರೆ ಈ ಕಾವ್ಯವು 'ಮಾನಸ ಗಂಗೆ'ಯ ಮಟ್ಟವನ್ನು ಮುಟ್ಟದಿರುವುದು ನಮ್ಮ ದುರ್ದೈವ. 'ಯಾವುದೋ ಒಂದು ಅಂತರ್ಗತ ಸ್ಫೂರ್ತಿಯ ಪ್ರೇರೇಪಣೆಯಿಂದಾಗಿ ಹತ್ತು ವರ್ಷಗಳ ಹಿಂದೆಯೇ' ಅವರು ಈ ಕಾವ್ಯ ಮನೋರಮೆಯನ್ನು ಸಂಸ್ಕೃತದಲ್ಲಿ ರಚಿಸಿದ್ದರಂತೆ. ಪ್ರಸ್ತುತ ಕಾವ್ಯದಲ್ಲಿ ಸಂಸ್ಕೃತಿ ಮೂಲ ಮತ್ತು ಕನ್ನಡ ಭಾಷಾಂತರ ದೇವನಾಗರೀ ಮತ್ತು ಕನ್ನಡ ಲಿಪಿಗಳಲ್ಲಿ ಅಳವಡಿಸಿದ್ದಾರೆ. ಅವರ ಈ ಪ್ರಯತ್ನದ ಮೂಲ ಮನೋಭಾವ 'ಉಭಯ ಭಾಷಾ ರಮಾರಮಣನಾಗಬೇಕೆಂಬ' ಹಂಬಲ ಇರಬಹುದು ಎಂಬ ಅವರ ಸಂಶಯವನ್ನು ನಾವು ಪುಷ್ಟೀಕರಿಸುತ್ತೇವೆ.

ಕಾವ್ಯ ಮನೋರಮೆ ಶೃಂಗಾರ ರಸ ಭರಿತ ಕಾವ್ಯ. ಸಾಹಿತ್ಯ ರಸದೂಟವನ್ನುಣ್ಣಿಸುವ ಈ ಪ್ರಯತ್ನದಲ್ಲಿ ಅವರು ಪೂರ್ಣ ಸಫಲರಾಗಿದ್ದಾರೆಯೇ ಎಂಬ ವಿಚಾರ ವಿವಾದಾಸ್ಪದವಾದದ್ದು. ಕಾವ್ಯದ ಶೈಲಿ ಸರಳವಿಲ್ಲ, ಭಾಷೆ ಜಟಿಲ. ಲೇಖಕರ ಸಂಸ್ಕೃತ ಪಿದ್ವತ್ತು ಅವರ ಈ ಪ್ರಯತ್ನದಲ್ಲಿ ತೊಡಕೋ ಎಂಬ ಸಂಶಯ ಸಾಮಾನ್ಯ ವಾಚಕನಿಗೆ ಬಾರದಿರದು. ಉದಾಹರಣೆಗೆ ಈ ಕವಿತೆಯನ್ನೋದಿ.

ದಿವಸ ದಿವಸವನುಭಾವಿಸುವ ಕಾಮ ಕರ್ಮ ಪರಿಸರ
ನವಗಂಧ ಪರಿಪ್ಲಾನಿತ ಕುಂಕುಮ ಪರಮಾದರ
ಭವವಿಲಾಸ ನಿಬಿಡವಾಸ ಮಧುರ ಕಲ್ಪನಾಂಕುರ
ತವಕುಚ ನವನೀತ ಮಹೋ! ಬಿಡಲಾರದ ಸಿಂಗರ. (೪೪)

ಆದರೂ ಕೆಲವೆಡೆಗಳಲ್ಲಿ ಭಾವ ಬಹು ಸುಂದರವಾಗಿ ಮೂಲಕ್ಕಿಂತಲೂ ಸೊಗಸಾಗಿ ಮೂಡಿ ಬಂದಿದೆ.

ಘನ ಜಘನದ ಬಳಿ ಕಿರುಗೆಜ್ಜೆಗಳಿಂ
ಗುಣಿಗುಣಿಸುವ ನೀವಳ ನಿಚ್ಚಟವುಂ
ಮನಸಿ ಜನರ ಸಂಚೆಯರಸ ಪೂರದೊ
ಳನು ವಾದಿಸುವಂತಿದೆ ರತಿ ಹಿತಮುಂ. (೫೦)

ಕಾವ್ಯ ಪೂರ್ಣ ಶೃಂಗಾರ ರಸ ಬುಗ್ಗೆಯೇ ಉಕ್ಕಿ ಹರಿದಿದೆ.

ಗಲ್ಲ ಗಲ್ಲ ಕೂಡಲೊಡನೆ ಸವರುತಿಹಳ
ಮೊಲ್ಲೆ ಮೊಲೆಯು ಮುಟ್ಟಲೊಡನೆ ತಡೆವಳ
ಚೆಲ್ಲಗೊಂಡು ನಿರಿಯು ನೆಳೆಯೆ ಬೇಡುತಿರುವ
ಹುಲ್ಲೆಗಣ್ಣಿನವಳ ನೆನೆವೆ ನಿಚ್ಚಳ. (೭೫)

ಅಂಬಾಸ್ತವನವೂ ಸಹ ಶೃಂಗಾರ ರಸಭರಿತವಾಗಿದೆ. ಮೇಲ್ಕಾಣಿಸಿದ ಕೆಲ ದೋಷಗಳನ್ನು ಮರೆತರೆ ಕಾವ್ಯ ಮನೋರಮಾ ಉತ್ತಮ ಸಾಹಿತ್ಯದ ಸರ್ವಲಕ್ಷಣಗಳನ್ನೂ ಹೊಂದಿದೆ. ಅಂದವಾದ ಮುದ್ರಣ, ಆಕರ್ಷಕ ಹೊರಕವಚ, ಸುಂದರವಾದ ಕಾಗದ ಈ ಪುಸ್ತಕದ ವೈಶಿಷ್ಟ್ಯಗಳು.

**ಗುರುಧ್ವಜ:** (ಪದ್ಯಸಂಗ್ರಹ.) ಸಂಪಾದಕರು: ಶ್ರೀ ಬಸವರಾಜ ಅಂಗಡಿ, ಬಂಕಾಪುರ. ಪ್ರಕಾಶಕರು: ಶ್ರೀ ವೇ॥ ವೀ. ರು. ಹೊಸಮಠ. ಪುಟಗಳು ೧೬, ಬೆಲೆ ೦-೨೫ ನ.ಪೈ.

ಸಹೃದಯವುಳ್ಳ ಆಸ್ತಿಕ ಜನಗಳಿಗೆ ಆಗಾಗ್ಗೆ ಹಾಡಿಕೊಳ್ಳಲು ಅನುಕೂಲವಾಗುವಂತೆ ಜನಪ್ರಿಯ ಗೀತಗಳು, ಚಲಚ್ಚಿತ್ರದ ಹಾಡುಗಳು, ಲಾವಣಿಗಳು, ಜನಪದ ಸಾಹಿತ್ಯ ಇವುಗಳ ಧಾಟಿಯಲ್ಲಿ ರಚಿತವಾದ ಹಾಡುಗಳು ಈ ಸಂಗ್ರಹದಲ್ಲಿ ಇವೆ. ನಾಸ್ತಿಕವಾದದ ಕಡೆ ಒಲಿಯುತ್ತಿರುವ ಈ ಜಗತ್ತಿನಲ್ಲಿ ಗುರುಭಕ್ತಿ, ಗುರು ಮಹತ್ವ, ಗುರುಗಳ ಹಿರಿಮೆ, ಮಹಿಮೆ ವೈಶಾಲ್ಯಗಳನ್ನು ಜನಜಂಗುಳಿಗೆ ಎತ್ತಿ ಹಿಡಿಯಲು ಅನುಕೂಲಿಸುವಂತೆ ಈ ಪದ್ಯಗಳು ರಚಿಸಲ್ಪಟ್ಟವೆ. ಪದ್ಯಗಳು ಪ್ರಚಲಿತ ಸರಳ ಭಾಷೆಯಲ್ಲಿ ರಚಿತವಾಗಿವೆ. "ಶ್ರೀ ಮಹಾಚಾರ್ಯ ತತ್ವ ಪ್ರಚಾರಕ" ಶ್ರೀ ಷ. ಬ್ರ. ಗುರುವರ್ಯ ಶಿವಾಚಾರ್ಯರು, ಸುತಗಟ್ಟಿ ಇವರ ಮುನ್ನುಡಿಯು ನಮ್ಮ ಸುಪ್ತ ಸಾತ್ವಿಕ ಗುಣವನ್ನು ಹೊಡೆದೆಬ್ಬಿಸುತ್ತದೆ. ಶ್ರೀ ಶಿವವರ್ಣಮಾಲಾಸ್ತುತಿ, ಅಕಾರಾದಿವರ್ಣ ಮಾತ್ರಕಾ ಶಿವಭಜನ ಸ್ತೋತ್ರಂ, ಫಲಶೃತಿ ಇವುಗಳೂ, 'ಗುರುಧ್ವಜ'ವೆಂಬ ಕವಿತೆಯೂ ತುಂಬಾ ಉತ್ತಮವಾಗಿವೆ. ಸಾಮಾನ್ಯ ಜನಕ್ಕೆ ಈಗ ಇಂತಹ ಕೃತಿಗಳ ಅಗತ್ಯ ಎಷ್ಟಿದೆ ಎಂಬುದನ್ನು ತಿಳಿದು ಕನ್ನಡ ಜನತೆ ಈ ಮಾದರಿಯ ಪುಸ್ತಕಗಳಿಗೆ ಪ್ರೋತ್ಸಾಹನ್ನೀಯಬೇಕು.

—ಕೆ. ಎಸ್. ಸೂಲಿಬೆಲೆ

**ಕರ್ನಾಟಕ ಸಂಗೀತ ತರಂಗಿಣಿ:** (ಪುಸ್ತಕ ೧) ಲೇಖಕರು: ಶ್ರೀ ಎಂ. ಆರ್. ಶಂಕರಮೂರ್ತಿ, ಪ್ರಕಾಶಕರು: ಗುರು ಗುಹ ಗಾನನಿಲಯ, ಬೆಂಗಳೂರು-೨೧. ಪುಟಗಳು ೩೦+೬, ಬೆಲೆ ಒಂದು ರೂಪಾಯಿ.

ಪರಮ ಭಾಗವತೋತ್ತಮರೂ, ಕರ್ನಾಟಕ ಸಂಗೀತ ಪಿತಾಮಹರೂ ಆದ ಶ್ರೀ ಪುರಂದರದಾಸರನ್ನು ಸ್ಮರಿಸಿ ಜನ್ಮವೆತ್ತಿರುವ, "ಕರ್ನಾಟಕ ಸಂಗೀತ ತರಂಗಿಣಿ"ಯು ಕನ್ನಡವನ್ನು ಬಲ್ಲ ಕರ್ನಾಟಕ ಸಂಗೀತಾಭಿಮಾನಿಗಳೆಲ್ಲರ ಗೌರವಾದರಗಳಿಗೆ ಪಾತ್ರವಾಗುವ ಅರ್ಹತೆಯನ್ನು ಪಡೆದಿದೆ. ಇಲ್ಲಿ ಕೊಟ್ಟಿರುವ ಸಂಗೀತದ ಪ್ರಾಥಮಿಕ ಘಟ್ಟದ ವಿವಿಧ ವಿಷಯಗಳ ನಿರೂಪಣೆಯ ಶೈಲಿಯು ಸುಲಭವೂ ಸುಂದರವೂ ಆಗಿದ್ದು ಕಲಾಭ್ಯಾಸಿಗಳಿಗೆ ಪರಮೋಪಯುಕ್ತವಾಗಿದೆ. ಅವರು ಪ್ರಾರಂಭದಲ್ಲಿ ತಾಳ್ಮೆಯಿಂದ ಅಭ್ಯಸಿಸಬೇಕಾದ ವಿವಿಧ ವರಿಸೆಗಳನ್ನು ಆದಷ್ಟು ವಿವರವಾಗಿ ಕೊಡಲಾಗಿದೆ. ಶ್ರೀ ವಾಸುದೇವಾಚಾರ್ಯರ ಹರಕೆಯನ್ನು ಹೊತ್ತ ಶ್ರೀ ಶಂಕರಮೂರ್ತಿಗಳ ಪರಿಶ್ರಮದ ಫಲವಾಗಿ ಇದೀಗ ಕನ್ನಡದಲ್ಲಿ "ಕರ್ನಾಟಕ ಸಂಗೀತ"ವನ್ನು ಕುರಿತ ಪುಸ್ತಕವು ಬರಲು ಮೊದಲಾಗಿರುವುದು ಕನ್ನಡಿಗರ ಸುದೈವ. "ಕನ್ನಡದಲ್ಲಿ ಇಂತಹ ಹಲವಾರು ಪುಸ್ತಕಗಳ ರಚನೆಯಾಗಲಿ" ಎಂಬ ಶ್ರೀ ಆಚಾರ್ಯರು

ಶ್ರೀ ಶಂಕರಮೂರ್ತಿಗಳಿಗೆ ಸೂಚಿಸ್ಪಿದುದು, ಅವರು ಕನ್ನಡ ನಾಡಿನ ವಿವಿಧ ಕಲಾವಿದರಿಗೇ ಇತ್ತ ಒಂದು ಸಂದೇಶವೆಂದರೆ ತಪ್ಪಾಗಲಾರದು!

ಗುರು ಗುಹ ಗಾನನಿಲಯದ ಈ ಪ್ರಕಾಶನ ಕಾರ್ಯವು ಕನ್ನಡ ಕಲಾಭಿಮಾನಿಗಳ ಬೆಂಬಲದಿಂದ ಸಂತತವಾಗಿ ಯಶಸ್ವಿಯಾಗಿ ನಡೆಯಲಿ. ಕನ್ನಡ ಜನ ಅದರ ಪೂರ್ಣ ಪ್ರಯೋಜನವನ್ನು ಪಡೆಯಲಿ.

**ಕರ್ನಾಟಕ ಸಂಗೀತ ತರಂಗಿಣಿ:** (ಪುಸ್ತಕ ೩) "ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಗ್ರಹ ಕೃತಿಗಳು" ಲೇಖಕರು: ಶ್ರೀ ಎಂ. ಆರ್. ಶಂಕರಮೂರ್ತಿ, ಪ್ರಕಾಶಕರು: ಗುರು ಗುಹ ಗಾನನಿಲಯ, ಬೆಂಗಳೂರು-೨೧. ಪುಟಗಳು ೪೬, ಬೆಲೆ ಒಂದೂವರೆ ರೂಪಾಯಿ.

ಶ್ರೀ ಶಂಕರಮೂರ್ತಿಗಳು ಮುಂದುವರಿದು, ಕರ್ನಾಟಕ ಸಂಗೀತ ತರಂಗಿಣಿ ಗ್ರಂಥಮಾಲೆಯ ಮೂರನೆಯ ಕುಸುಮವಾದ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಗ್ರಹ ಕೃತಿಗಳನ್ನು ಈಗ ಕನ್ನಡಿಗರಿಗೆ ಅರ್ಪಿಸಿದ್ದಾರೆ. ಈ ಪುಸ್ತಕದಲ್ಲಿ ಕೃತಿಗಳಿಗೆ ಸಂಬಂಧಪಟ್ಟ ರಾಗಗಳ ಲಕ್ಷಣ ಮತ್ತು ಸ್ವರಪ್ರಸ್ತಾರಗಳನ್ನು (ಎಂದಿನಂತೆ ಎಲ್ಲರೂ) ಕೊಡುವುದರ ಜೊತೆಗೆ, ಪ್ರತಿಯೊಂದು ಕೀರ್ತನೆಯಲ್ಲಡಗಿರುವ ಸಾಹಿತ್ಯದ ಪರಿಚಯವನ್ನೂ ಮಾಡಿಕೊಡುವ ಸದುದ್ದೇಶದಿಂದ, ಅದರ ಪ್ರತಿಪದಾರ್ಥ ಮತ್ತು ಭಾವಾರ್ಥಗಳನ್ನೂ ಕೊಡಲಾಗಿದೆ. ಸಂಗೀತ ಮತ್ತು ಸಾಹಿತ್ಯ ಈ ಭಾಗಗಳೆರಡರ ಪರಿಚಯವೂ ಸಾಕಷ್ಟು ನಡೆದು ಸಾಗಿರುವ ಶ್ರೀ ಮೂರ್ತಿಯವರ ಈ ಪರಿಪೂರ್ಣ ರೀತಿಯ ಕಲಾಸೇವೆಯು ನಿಜವಾಗಿಯೂ ಅಭಿನಂದನೀಯ ಹಾಗೂ ಅನುಕರಣೀಯವಾಗಿದೆ. ಸಂಗೀತ ಶಿಕ್ಷಣಕ್ಕೆ ಈ ಕ್ರಮವೇ ಅತ್ಯಂತ ಶ್ರೇಷ್ಠವಾದುದು. ಗಾಯಕನ ಹೃದಯ ಸಂಸ್ಕಾರ, ರಸಿಕ ಶ್ರೋತೃಗಳ ಮೆಚ್ಚುಗೆ ಹಾಗೂ ದೈವಕೃಪೆ ಇವುಗಳು ಲಭಿಸಲು ಮೇಲೆ ಹೇಳಿದ ಮಾರ್ಗವೇ ಅನುಸರಿಸಲು ಯೋಗ್ಯವಾದುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಶ್ರೀ ದೀಕ್ಷಿತರ ಜೀವನ ಚರಿತ್ರೆಯು ಹಿತವಾದ ಧಾಟಿಯಲ್ಲಿ ಮಿತವಾಗಿದ್ದು ಬೋಧಪ್ರದವಾಗಿದೆ. ಗುಣಗ್ರಾಹಿಗಳಾದ ಕನ್ನಡ ರಸಿಕರು ಈ ಗ್ರಂಥವನ್ನು ಪುರಸ್ಕರಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

—"ರಘುವರ"

**ಸೋಮನಾಥ ಚಾರಿತ್ರ:** ಸಂಪಾದಕರು: ಡಾ॥ ಆರ್. ಸಿ. ಹಿರೇಮಠ, ಡಾ॥ ಎಮ್. ಎಸ್. ಸುಂಕಾಪುರ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಸೈಜು; ಡೆಮ್ಮಿ ೧/೮, ಪುಟಗಳು ೨೩೬ + ೪೯, ಬೆಲೆ. ರೂ. ೫-೦೦.

ಮಹಾಕವಿ ರಾಘವಾಂಕ ವಿರಚಿತ ಸೋಮನಾಥ ಚಾರಿತ್ರವನ್ನು ಕರ್ನಾಟಕ ವಿಶ್ವವಿದ್ಯಾನಿಲಯದವರು ಪ್ರಕಟಿಸಿ ನಾಡಿನ ಜನತೆಗೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾವ್ಯದ ಸಂಪಾದಕರು ಅತ್ಯಂತ ಶ್ರದ್ಧಾಸಕ್ತಿಗಳಿಂದ ಸಶಾಸ್ತ್ರೀಯವಾಗಿ ಸಂಶೋಧಿಸಿ ಸಂಪಾದಿಸಿ ಕನ್ನಡಿಗರೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಈ ಕಾವ್ಯವು ಸುದೀರ್ಘವಾದ ಪೀಠಿಕೆ, ವಿಪುಲ ಪಾಠಾಂತರಗಳು, ಪರಿಶಿಷ್ಟಗಳು, ಪದ್ಯಗಳ ಅಕಾರಾದಿ, ಕಠಿನ ಶಬ್ದಕೋಶ-ಇವುಗಳನ್ನು ಒಳಕೊಂಡು ಸರ್ವಾಂಗ ಸುಂದರವಾಗಿ ಹೊರಬಂದಿದೆ. ಅಲ್ಲದೆ ರಾಘವಾಂಕ ಚರಿತೆಯ ಒಂದು ಪ್ರತಿಯಲ್ಲಿ ಕಂಡುಬಂದ ರಾಘವಾಂಕನ ತೈಲಚಿತ್ರವನ್ನೂ ಮತ್ತೆ ಕೆಲವು ಚಿತ್ರಗಳನ್ನೂ ಈ ಕಾವ್ಯದಲ್ಲಿ ಉಪಯೋಗಿಸಿರುವುದು ಇದರ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ಪ್ರಾಚೀನ ಕಾವ್ಯಗಳನ್ನು ಪ್ರತಿಮಾಡುತ್ತಿದ್ದ ಪ್ರತಿಕಾರರು ಅಕ್ಷರಜ್ಞರಲ್ಲದಿದ್ದಲ್ಲಿ ಹಲವಾರು ಲಿಪಿಸ್ಖಾಲಿತ್ಯಗಳು ಸಂಭವಿಸುವುದುಂಟು. ಪ್ರಕೃತ ಸೋಮನಾಥ ಚಾರಿತ್ರದ ಮೂಲಮಾತೃಕೆಗಳಲ್ಲಿ ಸಂಭವಿಸಿರುವ ಕೆಲವು ಸ್ಖಾಲಿತ್ಯಗಳನ್ನು ನಾವು ಇಲ್ಲಿ ಗಮನಿಸಬಹುದು.

(i) ಸ್ವರಾದಿ ಶಬ್ದಗಳಿಗೆ ಪ್ರತಿಯಾಗಿ ವ್ಯಂಜನಾದಿ ಶಬ್ದಗಳನ್ನು ಬಳಸಿರುವುದು: ಎಸೆವ–ಯೆಸೆವ; ಇತ್ತಬಾ–ಯಿತ್ತಬಾ.

(ii) ಎಕರಾಂತ ಶಬ್ದಗಳಿಗೆ ಬದಲಾಗಿ ಅಕಾರಾಂತ ಶಬ್ದಗಳನ್ನು ಪ್ರಯೋಗಿಸಿರುವುದು: ಎಸೆವ-ಎಸವ; ಬೆಳೆ–ಬೆಳ.

(iii) ದೀರ್ಘಾಕ್ಷರಗಳಿಗೆ ಬದಲಾಗಿ ಛಂದೋಭಂಗವಾದರೂ ಹ್ರಸ್ವಾಕ್ಷರಗಳನ್ನು ಉಪಯೋಗಿಸಿರುವುದು: ಈವಂಗಂ-ಇವಂಗಂ; ಈ ನಾಡೊಳೀ–ಇ ನಾಡೊಳೀ; ಏಳದೆಂಟೊಂಬತ್ತು-ಎಳದೆಂಟೊಂಬತ್ತು.

(iv) ಅಲ್ಪಪ್ರಾಣಾಕ್ಷರ ಶಬ್ದಗಳಿಗೆ ಬದಲಾಗಿ ಮಹಾಪ್ರಾಣಾಕ್ಷರ ಶಬ್ದಗಳನ್ನು ಇಟ್ಟಿರುವುದು: ಶ್ರೀಮದುಜ್ವಲ–ಶ್ರೀಮಧುಜ್ವಲ; ಮುಕುರ–ಮುಖುರ.

(v) ಮಹಾಪ್ರಾಣಾಕ್ಷರ ಶಬ್ದಗಳಿಗೆ ಬದಲಾಗಿ ಅಲ್ಪಪ್ರಾಣಾಕ್ಷರ ಶಬ್ದಗಳನ್ನು ಬಳಸಿರುವುದು: ಪುಣ್ಯಧಾಮ-ಪುಣ್ಯದಾಮ, ಧೃತಸೋಮ-ದೃತಸೋಮ.

(vi) ಶಿಷ್ಟಶಬ್ದಗಳಿಗೆ ಬದಲಾಗಿ ಅಶಿಷ್ಟಶಬ್ದಗಳನ್ನು ಬಳಸಿರುವುದು: ವ್ಯೋಮ–ಯೋಮ, ನಿರವದ್ಯ–ನಿರವಂಧ್ಯ; ಇವೇ ಅಲ್ಲದೆ ಸಾಮಾನ್ಯರೇಫ ಶಬ್ದಗಳಿಗೆ ಶಕಟರೇಫಗಳನ್ನೂ ಶಕಟರೇಫ ಶಬ್ದಗಳಿಗೆ ಸಾಮಾನ್ಯರೇಫಗಳನ್ನೂ ಬಳಸಿರುವುದು ಕಂಡುಬರುತ್ತದೆ. ಪ್ರತಿಕಾರರಿಂದ ಸ್ಪಷ್ಟವಾಗಿ ಸಂಭವಿಸಿರುವ ಈ ಸ್ಖಾಲಿತ್ಯಗಳು ಕ್ರಮೇಣ ಪಾಠಾಂತರಗಳಾಗಿ ಪರಿಣಮಿಸುತ್ತವೆ. ಪಾಠಾಂತರ ದೃಷ್ಟಿಯಿಂದ ಇವು ಪ್ರಯೋಜನಕ್ಕೆ ಬಾರದಿದ್ದರೂ ಭಾಷಾಶಾಸ್ತ್ರದ ದೃಷ್ಟಿಯನ್ನಿಟ್ಟುಕೊಂಡು ಸಂಪಾದಕರು ಈ ಎಲ್ಲ ಪಾಠಾಂತರಗಳನ್ನೂ ಕೊಟ್ಟಂತೆ ಕಂಡುಬರುತ್ತದೆ.

ಹರಿಶ್ಚಂದ್ರಕಾವ್ಯ ಮತ್ತು ಸೋಮನಾಥ ಚಾರಿತ್ರದಲ್ಲಿನ ಪದ್ಯಗಳ ಪರಸ್ಪರ ಸಾಗಾಟ ಒಂದು ಬಹುಮುಖ್ಯವಾದ ವಿಚಾರಣೀಯ ಅಂಶ. ಪ್ರಸ್ತುತ ಸೋಮನಾಥ ಚಾರಿತ್ರದಲ್ಲಿ ೫ ಸ್ಥಲಗಳೂ ೫೨೪ ಪದ್ಯಗಳೂ ಇವೆ. ಪ್ರಥಮ ಮುದ್ರಣದ ಪ್ರತಿಯಲ್ಲಿ ೬ ಸಂಧಿಗಳೂ ೫೬೫ ಪದ್ಯಗಳೂ ಇವೆ. ಹರಿಶ್ಚಂದ್ರ ಕಾವ್ಯದ

೯೧ ಪದ್ಯಗಳು ಸೋಮನಾಥ ಚಾರಿತ್ರದಲ್ಲಿ ಯಥಾವತ್ತಾಗಿ ಸೇರ್ಪಡೆಯಾಗಿವೆ. ಅಲ್ಲದೆ ಸಿದ್ಧರಾಮ ಚಾರಿತ್ರದ ಕೆಲವು ಪದ್ಯಗಳೂ ಸೋಮನಾಥ ಚಾರಿತ್ರದಲ್ಲಿ ಸೇರಿಕೊಂಡಿವೆ. ಈ ರೀತಿ ಒಬ್ಬನೇ ಕವಿಯ ಪದ್ಯಗಳು ಆತನ ಬೇರೆ ಬೇರೆ ಕಾವ್ಯಗಳಲ್ಲಿ ಸೇರ್ಪಡೆಯಾಗಿರುವುದು ಹೊಸತೇನೂ ಅಲ್ಲ. ಆದಿಪಂಪನ ವಿಕ್ರಮಾರ್ಜುನವಿಜಯ ಮತ್ತು ಆದಿಪುರಾಣದಲ್ಲಿ ಕೆಲವು ಪದ್ಯಗಳು ಪರಸ್ಪರ ವಿನಿಮಯವಾಗಿದೆ. ಹಾಗೆಯೇ ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಮತ್ತು ಮಲ್ಲಿನಾಥ ಪುರಾಣಗಳಲ್ಲೂ, ನೇಮಿಚಂದ್ರನ ನೇಮಿನಾಥ ಪುರಾಣ ಮತ್ತು ಲೀಲಾವತಿಗಳಲ್ಲೂ ಪದ್ಯಗಳು ಪರಸ್ಪರ ವಿನಿಮಯ ಹೊಂದಿವೆ. ಕವಿ ತನ್ನ ಒಂದೇ ಪದ್ಯವನ್ನು ಎರಡೂ ಕಾವ್ಯಗಳಲ್ಲಿ ಉದ್ದೇಶಪೂರ್ವಕವಾಗಿ ಬಳಸಿದನೋ ಅಥವಾ ಪ್ರತಿಕಾರರು ಸಂದರ್ಭಕ್ಕೆ ತಕ್ಕಂತೆ ಒಂದು ಕಾವ್ಯದ ವರ್ಣನಾಪದ್ಯಗಳನ್ನು ಮತ್ತೊಂದು ಕಾವ್ಯದ ವರ್ಣನಾ ಭಾಗಕ್ಕೆ ಬಳಸಿಕೊಂಡರೋ ಎಂಬುದನ್ನು ಹೇಳುವುದು ಕಷ್ಟ. ಅಂತೂ ಈ ಒಂದು ಪರಿಪಾಠ ಬಹಳ ಹಿಂದಿನಿಂದಲೇ ಬೆಳೆದುಕೊಂಡು ಬಂದಿದೆ. ರಾಘವಾಂಕನೇನೂ ಇದಕ್ಕೆ ಹೊರತಾಗಿಲ್ಲ.

ಪ್ರಕೃತ ಕಾವ್ಯದ ವಿಸ್ತಾರವಾದ ಪೀಠಿಕೆಯಲ್ಲಿ ರಾಘವಾಂಕನ ಕಾಲ ದೇಶ ವರ್ತಮಾನ ಕೃತಿಗಳ ವಿವೇಚನೆ ಮುಂತಾದ ವಿಷಯಗಳನ್ನು ಕುರಿತು ಯಥೋಚಿತವಾದ ವಿಮರ್ಶೆಯನ್ನು ಮಾಡಿದ್ದಾರೆ. ಕೆಲವಾರೆಡೆ ಶಾಸನಗಳ ಆಧಾರವನ್ನು ಒದಗಿಸಿದ್ದಾರೆ.

ಆದಯ್ಯ ಒಬ್ಬ ಶಿವಶರಣ. ಈತನು ವಚನಗಳನ್ನು ಬರೆದಿದ್ದಾನೆ. ಹರಿಹರನ ಈ ಶರಣನನ್ನು ಕುರಿತು ಒಂದು ರಗಳೆಯನ್ನು ಬರೆದಿದ್ದಾನೆ. ರಾಘವಾಂಕನ ಸೋಮನಾಥ ಚಾರಿತ್ರಕ್ಕೆ ಮೂಲ ಯಾವುದು? ಹರಿಹರನ ಆದಯ್ಯನಿಗೂ ರಾಘವಾಂಕನ ಆದಯ್ಯನಿಗೂ ಇರುವ ಸಾಮ್ಯವೈಷಮ್ಯಗಳ ವಿವೇಚನೆ ಸ್ವಲ್ಪಮಟ್ಟಿಗೆ ಆವಶ್ಯಕ ಎನ್ನಿಸುತ್ತದೆ. ಒಟ್ಟಿನಲ್ಲಿ ಸೋಮನಾಥ ಚಾರಿತ್ರದ ಒಂದು ಅಧಿಕೃತ ಸಂಸ್ಕರಣವನ್ನು ಹೊರತಂದ ಸಂಪಾದಕರೂ, ಪ್ರಕಟಪಡಿಸಿದ ಕರ್ನಾಟಕ ವಿಶ್ವವಿದ್ಯಾನಿಲಯದವರೂ ನಾಡಿಗೆ ಮಹೋಪಕಾರವನ್ನು ಮಾಡಿದ್ದಾರೆ. ಈ ತೆರನ ಸಂಸ್ಕರಣ ಕಾರ್ಯ ಉಳಿದ ಅಪ್ರಕಟಿತ ಕಾವ್ಯಗಳ ಬಗ್ಗೆಯೂ ನಡೆಯಲಿ ಎಂದು ಹಾರೈಸುತ್ತೇವೆ.

—ಎನ್. ಬಸವಾರಾಧ್ಯ

## ಕನ್ನಡ ಸಾಹಿತ್ಯ ಸಮ್ಮೇಳನ, ಗದಗ.



ಕಳೆದ ಡಿಸೆಂಬರ್ ತಿಂಗಳಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರು ಮಾತನಾಡುತ್ತಿರುವಾಗ ತೆಗೆದ ಚಿತ್ರ.

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮.

## ಸಾಹಿತ್ಯ ಪರೀಕ್ಷೆಗಳು—೧೯೬೨

೧೯೬೨ನೆಯ ಸಾಲಿನ ಸಾಹಿತ್ಯ ಪರೀಕ್ಷೆಗಳನ್ನು ಈ ಕೆಳಗೆ ಕಂಡ ಕರ್ಣಾಟಕದ ನಾನಾ ಕೇಂದ್ರಗಳಲ್ಲಿ **೧೯೬೨ನೆಯ ಏಪ್ರಿಲ್ ೨೧ನೇ ಶನಿವಾರ ಮತ್ತು ೨೨ನೇ ಭಾನುವಾರಗಳಲ್ಲಿ** ನಡೆಸಲು ಏರ್ಪಡಿಸಿದೆ. ವೇಳಾಪಟ್ಟಿಯನ್ನು ಈ ಕೆಳಗೆ ಕೊಟ್ಟಿದೆ.

ಕೇಂದ್ರ ಮತ್ತು ಸ್ವಂತ ವ್ಯಾಸಂಗಿಗಳ ಪ್ರವೇಶಪತ್ರಗಳನ್ನು ಆಯಾ ಕೇಂದ್ರಗಳಿಗೆ ಕಳುಹಿಸಿಕೊಡಲಾಗುತ್ತದೆ. ಸ್ವಂತ ವ್ಯಾಸಂಗಿಗಳು ತಾವು ಪರಿಷತ್ತಿನ ಅನುಮತಿ ಪಡೆದು ಚುನಾಯಿಸಿಕೊಂಡಿರುವ ಕೇಂದ್ರಗಳ ವ್ಯವಸ್ಥಾಕರಿಂದ ತಮ್ಮ ಪ್ರವೇಶಪತ್ರಗಳನ್ನು ಪಡೆಯಬಹುದು. ಬೆಂಗಳೂರು ಕೇಂದ್ರವನ್ನು ತೆಗೆದುಕೊಂಡಿರುವ ಸ್ವಂತ ವಿದ್ಯಾರ್ಥಿಗಳು ತಮ್ಮ ಪ್ರವೇಶಪತ್ರಗಳನ್ನು ಪರಿಷತ್ತಿನ ಕಚೇರಿಯಿಂದ ಏಪ್ರಿಲ್ ಎರಡನೆಯ ವಾರದಲ್ಲಿ ಪಡೆಯತಕ್ಕದ್ದು.

| ಜಿಲ್ಲೆ | ಪರೀಕ್ಷಾ ಕೇಂದ್ರಗಳು |
|---|---|
| ೧. **ಬೆಳಗಾವಿ** | (೧) ಸವದತ್ತಿ, (೨) ನಿಡಸೋಸಿ, (೩) ಕೌಜಲಗಿ, (೪) ನೇಗಿನಹಾಳ. |
| ೨. **ಬಿಜಾಪುರ** | (೧) ಬಸವನ ಬಾಗೇವಾಡಿ, (೨) ಬಾದಾಮಿ, (೩) ಮುದ್ದೇಬಿಹಾಳ, (೪) ನಿಡಗುಂದಿ, (೫) ಚಡಚಣ, (೬) ಇಂಗಳೇಶ್ವರ. |
| ೩. **ಬೀದರ** | (೧) ಮನ್ನಳ್ಳಿ. |
| ೪. **ಧಾರವಾಡ** | (೧) ಧಾರವಾಡ, (೨) ಹುಬ್ಬಳ್ಳಿ, (೩) ಕುಂದಗೋಳ, (೪) ಗದಗ, (೫) ಹಾವೇರಿ (೬) ರೋಣ, (೭) ಹೊಸರಿತ್ತಿ, (೮) ಶಿರಹಟ್ಟಿ. |
| ೫. **ಗುಲ್ಬರ್ಗ** | (೧) ಕೆಂಭಾವಿ. |
| ೬. **ಉತ್ತರ ಕನ್ನಡ** | (೧) ಸಂಪಖಂಡ, (೨) ಸಿದ್ದಾಪುರ. |
| ೭. **ರಾಯಚೂರು** | (೧) ಕುಕನೂರು. |
| ೮. **ಬೆಂಗಳೂರು** | (೧) ಕನ್ನಡ ಸಾಹಿತ್ಯ ಪರಿಷತ್ತು. |

**"ಜಾಣ" ಪರೀಕ್ಷೆ** **ವೇಳಾಪಟ್ಟಿ**

| ದಿನ | ವೇಳೆ | ವಿಷಯ |
|---|---|---|
| ತಾ|| ೨೧-೪-೧೯೬೨ ಶನಿವಾರ | ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ | ಪದ್ಯ ಮತ್ತು ನಾಟಕ |
| ,, ,, | ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ | ಗದ್ಯ ಮತ್ತು ಪ್ರಬಂಧ |
| ತಾ|| ೨೨-೪-೧೯೬೨ ಭಾನುವಾರ | ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ | ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ |
| ,, ,, | ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ | ಸಾಹಿತ್ಯ ಚರಿತ್ರೆ ಮತ್ತು ಕನ್ನಡ ನಾಡಿನ ಚರಿತ್ರೆ |

**"ಕಾವ" ಪರೀಕ್ಷೆ**

| | | |
|---|---|---|
| ತಾ|| ೨೧-೪-೧೯೬೨ ಶನಿವಾರ | ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ | ಪದ್ಯ ಮತ್ತು ವ್ಯಾಕರಣ |
| ,, ,, | ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ | ಗದ್ಯ ಮತ್ತು ಪ್ರಬಂಧರಚನೆ |
| ತಾ|| ೨೨-೪-೧೯೬೨ ಭಾನುವಾರ | ಬೆಳಿಗ್ಗೆ ೮ ರಿಂದ ೧೧ ಗಂಟೆಯವರೆಗೆ | ಚರಿತ್ರೆ ಮತ್ತು ಸಂಸ್ಕೃತಿ |

**ಅನ್ನದಾನಯ್ಯ ಪುರಾಣಿಕ**
**ಕೆ. ಎಂ. ಕೃಷ್ಣರಾವ್**
ಗೌರವ ಕಾರ್ಯದರ್ಶಿಗಳು

# ಮಹಾಕವಿ ಕಾಳಿದಾಸ ಜಯಂತಿ

## ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಮಾರಂಭ

ಮೈಸೂರು ಸರ್ಕಾರದ ಆದೇಶದಂತೆ, ಕವಿಕುಲಗುರು ಮಹಾಕವಿ ಕಾಳಿದಾಸ ಜಯಂತ್ಸುತ್ಸವವನ್ನು ಇದೇ ತಿಂಗಳು ದಿನಾಂಕ ೨ ಮತ್ತು ೩ ರಂದು ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿತ್ತು. ಮೊದಲ ದಿನದ ಕಾರ್ಯಕ್ರಮವು ಶ್ರೀ ಕೆ. ನಾರಾಯಣ ಸೋಮಯಾಜಿಯವರ ಪ್ರಾರ್ಥನೆಯ ನಂತರ ಪ್ರಾರಂಭವಾಯಿತು.

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಅನ್ನದಾನಯ್ಯ ಪುರಾಣಿಕ ಅವರು ಸ್ವಾಗತಭಾಷಣ ಮಾಡಿದರು.

ಈ ಸಮಾರಂಭದ ಉದ್ಘಾಟನೆಯನ್ನು ಪ್ರೊ॥ ಕೆ. ಎಸ್. ರಾಮಚಂದ್ರರಾಯರು ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆಸ್ಥಾನ ವಿದ್ವಾನ್, ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ಎಸ್. ಪ್ರಭಾಕರಶಾಸ್ತ್ರಿ ಮತ್ತು ಶ್ರೀಮತಿ ಕೆ. ಲೀಲಾವತಿಯವರಿಂದ ಕಾವ್ಯವಾಚನ ನಡೆಯಿತು. ಕಾಳಿದಾಸನ ನಾಟಕಗಳನ್ನು ಕುರಿತು ಡಾ॥ ಕೆ. ಎಸ್. ನಾಗರಾಜನ್ ಅವರೂ ಮೇಘಸಂದೇಶವನ್ನು ಕುರಿತು ವಿದ್ವಾನ್ ಎನ್. ಟಿ. ಶ್ರೀನಿವಾಸ ಅಯ್ಯಂಗಾರ್ ಅವರೂ ಉಪನ್ಯಾಸ ಮಾಡಿದರು. ಶ್ರೀ ಬಿ. ರೇಣುಕಸ್ವಾಮಿಯವರು ಮೇಘಸಂದೇಶದ ಕೆಲವು ಭಾಗಗಳನ್ನು ವಾಚನ ಮಾಡಿದರು. ಅಧ್ಯಕ್ಷ ಭಾಷಣ, ವಂದನಾರ್ಪಣೆ ನಂತರ ಇಂದಿನ ಸಮಾರಂಭ ರಾಷ್ಟ್ರಗೀತೆಯೊಡನೆ ಮುಕ್ತಾಯಗೊಂಡಿತು.

ದಿನಾಂಕ ೩ರಂದು ಸಂಜೆ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಸ್ಥಾನ ವಿದ್ವಾನ್, ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳು ವಹಿಸಿದ್ದರು. ಶ್ರೀ ಎಸ್. ಪ್ರಭಾಕರ ಶಾಸ್ತ್ರಿಯವರಿಂದ ಪ್ರಾರ್ಥನೆ ನಡೆಯಿತು.

ಶ್ರೀ ಎಂ. ವಿ. ನರಸಿಂಹಅಯ್ಯಂಗಾರ್ ಅವರು ಕಾಳಿದಾಸನನ್ನು ಕುರಿತು ತಾವು ರಚಿಸಿದ್ದ ಕವನವನ್ನು ವಾಚನ ಮಾಡಿದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ॥ ಕೆ. ಎಂ. ಕೃಷ್ಣರಾಯರು ಸ್ವಾಗತ ಭಾಷಣ ಮಾಡಿದರು. ಕಾಳಿದಾಸನ ರಘುವಂಶವನ್ನು ಕುರಿತು ವಿದ್ವಾನ್ ಎನ್. ಎಸ್. ಅನಂತರಂಗಾಚಾರ್ಯರೂ, ಕುಮಾರಸಂಭವವನ್ನು ಕುರಿತು ಪಂಡಿತ ಎಂ. ವಿ. ಚಕ್ರವರ್ತಿಯವರೂ ಭಾಷಣ ಮಾಡಿದರು. ರಘುವಂಶದ ಕೆಲವು ಶ್ಲೋಕಗಳನ್ನು ಶ್ರೀ ಬಿ. ರೇಣುಕಸ್ವಾಮಿಯವರು ವಾಚನ ಮಾಡಿದರು.

ಅಧ್ಯಕ್ಷರ ಭಾಷಣವಾದನಂತರ ಶಾಕುಂತಲಾ ನಾಟಕದ ನಾಲ್ಕನೇ ಅಂಕವನ್ನು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಸ್ವಾರಸ್ಯವಾಗಿ ಅಭಿನಯಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ಎರಡೂ ದಿವಸಗಳ ಕಾರ್ಯಕ್ರಮಗಳಲ್ಲಿ ಪರಿಷತ್ತಿನ ಸದಸ್ಯರೂ ಸಾಹಿತ್ಯಾಭಿಮಾನಿಗಳೂ ವಿಶೇಷವಾಗಿ ಭಾಗವಹಿಸಿ ಉತ್ಸವವು ಅತ್ಯಂತ ಯಶಸ್ವಿಯಾಗುವಂತೆ ಮಾಡಿದರು.

### ಬೇರೆ ಸ್ಥಳಗಳಲ್ಲಿ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮೈಸೂರು ನಗರದ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿಯೂ, ಕುಮಟ, ರಾಯಚೂರು, ವಿಜಾಪುರ ಮತ್ತು ಹುಬ್ಬಳ್ಳಿ ಈ ಸ್ಥಳಗಳಲ್ಲಿಯೂ ಕಾಳಿದಾಸ ಜಯಂತ್ಯುತ್ಸವ ನಡೆಯಿತು. ಭಾಷಣಗಳೂ, ಕಾಳಿದಾಸಕೃತ ಕಾವ್ಯಗಳ ವಾಚನವೂ ನಡೆದವು.

---

### ಪ್ರಬಂಧ ಸ್ಪರ್ಧೆಯ ಬಹುಮಾನ

ಕನ್ನಡ ಸಾಹಿತ್ಯ ಪರಿಷತ್ತು ಕಳೆದವರ್ಷ ನಡೆಸಿದ ಶ್ರೀ ಅಸುಂಡಿ ಹುದ್ದಾರ ಕೃಷ್ಣರಾವ್ ಅವರ ದತ್ತಿ ನಿಧಿಯ ಪ್ರಬಂಧ ಸ್ಪರ್ಧೆಯ "ಶ್ರೀವಿಜಯ ದಾಸರು ಮತ್ತು ಅವರ ಕೃತಿಗಳು" ಎಂಬ ವಿಷಯದ ಸ್ಪರ್ಧೆಯಲ್ಲಿ ಶ್ರೀ ಎ. ಗೋಪಾಲಕೃಷ್ಣ ಉಡುಪ, ೨೮೪೦, ಎರಡನೇ ಕ್ರಾಸ್, ಚಾಮುಂಡೀಪುರಂ, ಮೈಸೂರು. ಇವರಿಗೆ ೧೦೦ ರೂಪಾಯಿಗಳ ಬಹುಮಾನವನ್ನು ಕೊಡಲಾಗಿದೆ.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ॥ ಕಾರ್ಯದರ್ಶಿಗಳು.

# ಕನ್ನಡದ ಸುದ್ದಿಗಳು

**ಕಾರವಾರ**

ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಕೊಳ್ಳುವ ಉದ್ದೇಶದಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರ ಕಾರ್ಯಾರಂಭ ಫೆ. ದಿನಾಂಕ ೧೫ರಂದು ಶ್ರೀ ದ. ರಾ. ಬೇಂದ್ರೆಯವರ ಹಿರಿತನದಲ್ಲಿ ನಡೆಯಿತು.

**ತಿಪಟೂರು**

ಇಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಫೆ. ದಿನಾಂಕ ೧೬ ರಂದು ಪಂಡಿತ ಸಿ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರು 'ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಘಟ್ಟಗಳು' ಎಂಬ ವಿಚಾರವಾಗಿ ಭಾಷಣ ಮಾಡಿದರು. ವಕೀಲ ಶ್ರೀ ಸುಬ್ಬರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ವಿಜಯಲಕ್ಷ್ಮಿಯಿಂದ ಜನಪದ ನೃತ್ಯ, ಶ್ರೀ ಕೃಷ್ಣೋಜಿರಾವ್ ಅವರಿಂದ ಭಾವಗೀತಗಳ ವಾಚನ ನಡೆಯಿತು.

**ಗುಲ್ಬರ್ಗ**

ಇಲ್ಲಿನ ಕರ್ನಾಟಕ ಶಾಖೆಯ ಗಾಂಧಿ ಸ್ಮಾರಕನಿಧಿಯ ಆಶ್ರಯದಲ್ಲಿ ಗಾಂಧಿ ಗ್ರಂಥಮಾಲೆಯ ೧೪ನೆಯ ಸಂಪುಟ 'ರಾಜನೀತಿ' ಗ್ರಂಥಪ್ರಕಾಶನ ಸಮಾರಂಭ ಫೆ. ದಿನಾಂಕ ೬ ರಂದು ನಡೆಯಿತು. ಶ್ರೀ ಆರ್. ಎಸ್. ಹುಕ್ಕೇರಿಕರ್ ಅವರು ಅಧ್ಯಕ್ಷತೆ ವಹಿಸಿದ್ದರು.

**ಭದ್ರಾವತಿ**

ಕನ್ನಡ ಟೈಪ್‌ರೈಟರ್ ಕೀಬೋರ್ಡ್ ಸಂಶೋಧನೆಗಾಗಿ ಈ ಸ್ಥಳದ ಶ್ರೀ ವಿ. ನಾಗರಾಜ್ ಅವರಿಗೆ ಭಾರತ ಸರ್ಕಾರ ಎರಡು ಸಾವಿರ ರೂಪಾಯಿಗಳ ಬಹುಮಾನ ಕೊಟ್ಟಿದೆ.

**ಮುಂಬಯಿ**

ಇಲ್ಲಿನ ಫೋರ್ಟ್ ಶಾಲೆಯ ಮುದ್ದಣ ಸಂಘದ ಆಶ್ರಯದಲ್ಲಿ ಜ. ದಿನಾಂಕ ೨೮ರಂದು ಮುದ್ದಣಜಯಂತಿ ಸಮಾರಂಭ ಏರ್ಪಟ್ಟಿತ್ತು. ಪ್ರಸಿದ್ಧ ಸಣ್ಣಕತೆಗಾರರಾದ ಶ್ರೀ ಪಡುಕೋಣೆ ರಮಾನಂದರಾಯರು ಅಧ್ಯಕ್ಷತೆ ವಹಿಸಿದ್ದರು. ಮುದ್ದಣ ಸಾಹಿತ್ಯ ವಿಚಾರ ಕುರಿತು ಅನೇಕ ಭಾಷಣಗಳಾದವು. ಇದೇ ಸಂದರ್ಭದಲ್ಲಿ 'ಜರಾಸಂಧ ವಧೆ' ತಾಳಮದ್ದಳೆ ವ್ಯವಸ್ಥೆಯಾಗಿತ್ತು.

**ಮೈಸೂರು**

ಯುವರಾಜಾ ಕಾಲೇಜಿನ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಫೆ. ದಿನಾಂಕ ೧೩ರಂದು ಆಚರಿಸಲ್ಪಟ್ಟಿತು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಶ್ರೀ ತೀ. ನಂ. ಶ್ರೀಕಂಠಯ್ಯನವರು ಸಮಾರೋಪಣ ಭಾಷಣ ಮಾಡಿದರು.

ಡಿ. ಬನುಮಯ್ಯನವರ ಕಾಮರ್ಸ್ ಮತ್ತು ಆರ್ಟ್ಸ್ ಕಾಲೇಜಿನ ಕನ್ನಡ ಸಂಘದ ಸಮಾರೋಪ ಭಾಷಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಶ್ರೀ ತೀ. ನಂ. ಶ್ರೀಕಂಠಯ್ಯನವರು ಫೆ. ದಿನಾಂಕ ೧೬ರಂದು ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಶ್ರೀಕಂಠಯ್ಯನವರು ದಿ॥ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಭಾವಚಿತ್ರದ ಅನಾವರಣ ಮಾಡಿದರು. ಶ್ರೀ ಬಿ. ವಿ. ಬನುಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪದವಿ ಮಟ್ಟದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂದು ತಮ್ಮ ಭಾಷಣದಲ್ಲಿ ಶ್ರೀ ತೀ. ನಂ. ಶ್ರೀಕಂಠಯ್ಯನವರು ತಿಳಿಸಿದರು. ಬಿ. ಎಂ. ಶ್ರೀ ಅವರ ಕನ್ನಡ ಅಭಿಮಾನವನ್ನು ಪ್ರಶಂಸಿಸಿದರು.

ಫೆ. ದಿನಾಂಕ ೨೨ರಂದು ಏರ್ಪಟ್ಟಿದ್ದ ಟ್ಯುಟೋರಿಯಲ್ ದಿನಾಚರಣೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ನಿಕ್ಕಂ ಅವರು ಮಾತನಾಡುತ್ತಾ, ಕಾಲೇಜು ಮಟ್ಟದಲ್ಲಿ ಪ್ರಾದೇಶಿಕ ಭಾಷೆಗಳು ಶಿಕ್ಷಣ ಮಾಧ್ಯಮವಾಗೇ ತೀರುತ್ತವೆಂದೂ, ಇದನ್ನು ಯಾರೂ ತಡೆಯಲು ಸಾಧ್ಯವಿಲ್ಲವೆಂದೂ ಅಭಿಪ್ರಾಯಪಟ್ಟರು.

ಶ್ರೀ ನಿಕ್ಕಂ ಅವರು ಋಗ್ವೇದ, ಪುರಾಣ ಮುಂತಾದ ಅರಮನೆಯ ಅಮೂಲ್ಯ ಹಾಗೂ ಅಪೂರ್ವ ಗ್ರಂಥಗಳನ್ನು ಜನತೆಗೆ ಕನ್ನಡದಲ್ಲಿ ಒದಗಿಸುವ ಕೆಲಸವನ್ನು ಮೈಸೂರು ವಿಶ್ವವಿದ್ಯಾನಿಲಯ ಕೈಗೊಳ್ಳುವುದೆಂದೂ ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಕನ್ನಡ ಗೀತೆಗಳಾದವು.

**ಧಾರವಾಡ**

ಫೆ. ದಿನಾಂಕ ೮ ರಂದು ಧಾರವಾಡದ ಮುರುಘಾಮಠದಲ್ಲಿ ಮಹಾಕವಿ ಗುಬ್ಬಿ ಮಲ್ಲಣಾರ್ಯನ ಜಯಂತಿ ನಡೆಯಿತು. ಶ್ರೀ ಸಿದ್ಧಯ್ಯ ಪುರಾಣಿಕರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಉದ್ಘಾಟನಾ ಭಾಷಣ ಮಾಡಿದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಫೆ. ದಿನಾಂಕ ೯ ರಂದು ಷಡಕ್ಷರಕವಿ ಮತ್ತು ಆತನ ಕಾಲ ದೇಶ ಮತ ಇತ್ಯಾದಿ ವಿಚಾರ ಕುರಿತು ಭಾಷಣ ಮಾಡಿದರು. ದಿನಾಂಕ ೧೦ ರಂದು ರಾಜಶೇಖರ ವಿಳಾಸ ಮತ್ತು ಕವಿಕರ್ಣರಸಾಯನದ ಬಗೆಗೂ ದಿನಾಂಕ ೧೧ರಂದು ವೃಷಭೇಂದ್ರ ವಿಜಯ ಹಾಗೂ ಶಬರಶಂಕರವಿಳಾಸದ ಬಗೆಗೂ ಭಾಷಣ ಮಾಡಿದರು. ಈ ಮೂರು ದಿನಗಳಲ್ಲಿಯೂ ಡಾ॥ ಆರ್. ಸಿ. ಹಿರೇಮಠರು ಅಧ್ಯಕ್ಷರಾಗಿದ್ದರು.

**ಹುಬ್ಬಳ್ಳಿ**

ಫೆ. ದಿನಾಂಕ ೨೦ ರಂದು ಹುಬ್ಬಳ್ಳಿ ಹೈಸ್ಕೂಲಿನಲ್ಲಿ, ಕನ್ನಡ ಸಾಹಿತ್ಯ ಪರಿಷತ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪ್ರಶಸ್ತಿಪತ್ರಗಳನ್ನು ವಿತರಣ ಮಾಡಿದರು ಹಾಗೂ ಕನ್ನಡ ನಾಡು ಮತ್ತು ನುಡಿ ಬಗೆಗೆ ಭಾಷಣ ಮಾಡಿದರು.

**ಸಿರಿಗೆರೆ**

ಫೆ. ದಿನಾಂಕ ೨೦ರಂದು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರುಗಳ ಸಮ್ಮುಖದಲ್ಲಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು "ವೀರಶೈವ ಸಾಹಿತ್ಯದ ವಿರಾಡ್ರೂಪ" ಎಂಬ ಬಗ್ಗೆ ಭಾಷಣ ಮಾಡಿದರು.

# ಸಂಪಾದಕೀಯ

## ನೂತನ ಶಾಸಕರಿಗೆ ಸ್ವಾಗತ

ಮೂರನೆಯ ಮಹಾಚುನಾವಣೆಯ ಫಲಿತಾಂಶವು ಪ್ರಕಟವಾಗಿದೆ. ಕಳೆದ ಎರಡು ಚುನಾವಣೆಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳ ಶಾಸನ ಸಭೆಗಳಲ್ಲಿ ಅಧಿಕ ಸ್ಥಾನಗಳನ್ನು ಗಳಿಸಿದ್ದ ಕಾಂಗ್ರೆಸ್ ಈ ಸಲದ ಚುನಾವಣೆಯಲ್ಲಿ ಕೆಲವು ಸ್ಥಾನಗಳನ್ನು ಕಳೆದುಕೊಂಡಿದ್ದರೂ ಮತ್ತೆ ಬಹುಮತವನ್ನು ಸಂಪಾದಿಸಿದೆ. ಕಾಂಗ್ರೆಸ್ಸನ್ನು ಎದುರಿಸಿದ ವಿರೋಧಿ ಪಕ್ಷಗಳಲ್ಲಿ ಯಾವ ಪಕ್ಷವೂ ಅದಕ್ಕೆ ತಾನು ಸಮಾನ ಸ್ಪರ್ಧಿ ಎಂಬುದನ್ನು ಸಿದ್ಧಪಡಿಸಲಿಲ್ಲ. ಎಲ್ಲಾ ವಿರೋಧಿ ಪಕ್ಷಗಳೂ ಒಂದಿಲ್ಲೊಂದು ವ್ಯಾಧಿಗೆ ಬಲಿಯಾಗಿ ಬಲಹೀನವಾಗಿಯೇ ಉಳಿದಿವೆ. ಇದು ಪ್ರಜಾಪ್ರಭುತ್ವ ಸಿದ್ಧಿಗೆ ದೊಡ್ಡ ಆತಂಕವೇ ಸರಿ. ಪ್ರಜಾಪ್ರಭುತ್ವದ ಸತ್ಫಲಗಳ ಸವಿಯನ್ನು ಜನಸಾಮಾನ್ಯರೂ ಸವಿಯಲು ಸಾಧ್ಯವಾಗಬೇಕಾದರೆ ರಾಷ್ಟ್ರದಲ್ಲಿ ಕನಿಷ್ಠ ಪಕ್ಷ ಎರಡು ಪ್ರಬಲವಾದ ರಾಜಕೀಯ ಪಕ್ಷಗಳು ಇರಬೇಕಾದುದು ಅಗತ್ಯವೆಂದು ರಾಜನೀತಿ ವಿಶಾರದರ ಮತ. ಭಾರತದಲ್ಲಿ ಸಮರ್ಥವಾದ ವಿರೋಧಿ ಪಕ್ಷವಿನ್ನೂ ಜನ್ಮತಾಳಬೇಕಾಗಿದೆ. ಈ ಸಾರೆ ನಡೆದ ಚುನಾವಣೆಯಲ್ಲಿ ಮತದಾರರ ರಾಜಕೀಯ ಪ್ರಜ್ಞೆ ಕೆಲವು ಕಡೆಗಳಲ್ಲಿ ಪ್ರಕಾಶಿಸಿದ್ದು ಸಂತೋಷದ ಸಂಗತಿ. ಅಭ್ಯರ್ಥಿಯ ಜಾತಿ, ಧನಬಲ, ಪಕ್ಷ ಬೆಂಬಲವನ್ನು ಮುಖ್ಯವಾಗಿ ನೋಡದೆ ಅವನ ಚಾರಿತ್ರ್ಯ, ತ್ಯಾಗಬುದ್ಧಿ ರಾಷ್ಟ್ರಾಭಿಮಾನ, ಸಮಾಜ ಸೇವಾಕಾಂಕ್ಷೆ, ಮುಂತಾದ ಹಿರಿಯ ಗುಣಗಳನ್ನು ಗಮನಿಸಿ ಮತನೀಡಿ ಆಯ್ಕೆ ಮಾಡಿದ ಕೆಲವು ನಿದರ್ಶನಗಳು ಭಾರತದ ಭವ್ಯ ಭವಿಷ್ಯವನ್ನು ಸೂಚಿಸುತ್ತವೆ. ಆದರೆ ಈ ಸ್ಪರ್ಧೆಯಲ್ಲಿ ಕೆಲವರು ಹಿರಿಯ ವ್ಯಕ್ತಿಗಳು ಪರಾಭವ ಹೊಂದಿದ್ದು ಚುನಾವಣೆಯ ರಂಗದಲ್ಲಿ ಇನ್ನೂ ಬೇರೂರಿರುವ ಸ್ವಾರ್ಥ ಶಕ್ತಿಗಳ ಸಂಚನ್ನು ಸಾರುತ್ತದೆ. ಒಟ್ಟಿನಲ್ಲಿ ಚುನಾವಣೆಗಳು ಹೆಚ್ಚು ಬಿರುಸಿನಿಂದಲೂ ಶಾಂತಿಯಿಂದಲೂ ನಡೆದುವು. ಇದು ಹೆಮ್ಮೆಯ ಸಂಗತಿ.

ಮೈಸೂರು ರಾಜ್ಯದಲ್ಲಿ ಕೆಲವು ಅಭೂತಪೂರ್ವ ಪ್ರಸಂಗಗಳು ನಡೆದಿವೆ. ಕಾಂಗ್ರೆಸ್ಸಿನ ಕೆಲವರು ಘಟಾನುಘಟಿಗಳು ಪರಾಭವ ಹೊಂದಿದ್ದಾರೆ. ಮಂತ್ರಿಮಂಡಲದ ಮುಕ್ಕಾಲು ಜನ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖ್ಯರು ಚುನಾವಣೆಯಲ್ಲಿ ಸೋತಿದ್ದಾರೆ. ವಿರೋಧ ಪಕ್ಷಗಳ ಪ್ರಾಬಲ್ಯ ಪ್ರಭಾವಗಳು ಇದಕ್ಕೆ ಮೂಲ ಕಾರಣವಾಗಿರದೆ ಕಾಂಗ್ರೆಸ್ ಪಕ್ಷದ ಅಂತಃಕಲಹಗಳೇ ಮುಖ್ಯ ಕಾರಣವಾಗಿರುವುದು ವ್ಯಸನಕರ ವಿಷಯ. ಪ್ರಾತಿನಿಧ್ಯ ಲೋಭನೀಯ ವಸ್ತುವಾಗಿ ಅದಕ್ಕಾಗಿ ವಿಪರೀತ ಪೈಪೋಟಿ ನಡೆಯುತ್ತಲಿದೆ. ಇದು ಹೀಗೆಯೇ ಮುಂದುವರಿದರೆ ದೇಶಕ್ಕೆ ಇದರಿಂದ ಗಂಡಾಂತರ ಸ್ವತಃಸಿದ್ಧ.

ಮಂತ್ರಿ ಮಂಡಳವನ್ನು ರಚಿಸುವುದು ಮುಂದಿನ ಹೆಜ್ಜೆ. ಅದಕ್ಕೂ ಮೊದಲು ಪಕ್ಷದ ನಾಯಕನ ಆಯ್ಕೆ ನಡೆಯಬೇಕು. ಆಂಧ್ರ, ಮಹಾರಾಷ್ಟ್ರ, ಮದ್ರಾಸು ಮೊದಲಾದ ರಾಜ್ಯಗಳಲ್ಲಿ ಈ ಪ್ರಶ್ನೆಯೇ ಇಲ್ಲವೆನ್ನಬಹುದು. ಆ ಆ ರಾಜ್ಯಗಳಲ್ಲಿ ಇದಾಗಲೇ ನಾಯಕರಾರೆಂಬುದು ನಿಶ್ಚಿತವಾಗಿದೆ. ಆದರೆ ಮೈಸೂರಿಗೆ ಮಾತ್ರ ಈ ಭಾಗ್ಯವಿಲ್ಲ. ಇಲ್ಲಿ ನಾಯಕತ್ವದ ಪ್ರಶ್ನೆ ಇತ್ಯರ್ಥವಾಗಬೇಕಾಗಿದೆ. ಈ ತಿಂಗಳ ಮೊದಲನೆಯ ವಾರದಲ್ಲಿ ನಾಯಕನ ಆಯ್ಕೆ ನಡೆಯಲಿದೆ. ಈ ಆಯ್ಕೆ ಒಮ್ಮತದಿಂದ ನಡೆಯಲೆಂದು ನಮ್ಮ ಬಯಕೆ. ಒಮ್ಮೆ ನಾಯಕರಾಗಿ ಚುನಾಯಿತರಾದವರು ರಚಿಸಿಕೊಂಡ ಸಚಿವ ಸಂಪುಟ ಮುಂದಿನ ಐದುವರ್ಷಗಳ ಕಾಲ ಅಧಿಕಾರದಲ್ಲಿ ಉಳಿಯಲಿ, ಎಂದು ನಾವು ಇಚ್ಛಿಸುತ್ತೇವೆ. ಮಂತ್ರಿ ಮಂಡಲಗಳ ಪುನಃ ಪುನಃ ಬದಲಾವಣೆಯಿಂದ ರಾಷ್ಟ್ರ ಪುನರ್ರಚನೆಯ ಕಾರ್ಯಗಳಿಗೆ ಬಲವಾದ ಪೆಟ್ಟು ಬೀಳುತ್ತದೆ ಎಂಬುದನ್ನು ಕಳೆದ ಐದು ವರ್ಷಗಳಲ್ಲಿ ಕಂಡುಕೊಂಡಿದ್ದೇವೆ. ಸುಭದ್ರ ಮಂತ್ರಿಮಂಡಲವು ರಾಷ್ಟ್ರೋನ್ನತಿಗೆ ಅತ್ಯಗತ್ಯ. ಈ ಸಲ ಆಯ್ಕೆಯಾಗಿ ಬಂದಿರುವ ಶಾಸಕರು ಈ ಮಾತನ್ನು ಗಮನಿಸಿ ಇತ್ಯರ್ಥವಾಗದೇ ಉಳಿದಿರುವ ಮೂಲ ಸಮಸ್ಯೆಗಳನ್ನು ಬಿಡಿಸಿ ನಾಡನ್ನು ಪ್ರಗತಿ ಪಥದಲ್ಲಿ ಮುನ್ನಡೆಯಿಸುವರೆಂದು ನಾವು ನಂಬುತ್ತೇವೆ. ನೂತನ ಶಾಸಕರಿಗೂ ಮತ್ತು ನೂತನವಾಗಿ ರಚಿತವಾಗಲಿರುವ ಮಂತ್ರಿಮಂಡಲಕ್ಕೂ ನಾವು ಸುಸ್ವಾಗತವನ್ನು ಬಯಸುತ್ತೇವೆ. ಕನ್ನಡ ನಾಡುನುಡಿಗಳ ಏಳ್ಗೆಗಾಗಿ ದುಡಿಯುವ ಧೀಶಕ್ತಿ, ಸನ್ಮತಿ, ಸದಭಿಮಾನಗಳನ್ನು ತಾಯಿ ಭುವನೇಶ್ವರಿಯು ಇವರೆಲ್ಲರಿಗೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

## ಸ್ತುತ್ಯಕಾರ್ಯ

ಸಾಹಿತ್ಯ ಮತ್ತು ಕಲೆಗೆ ಅನೇಕ ವರ್ಷಗಳಿಂದಲೂ ಸೇವೆ ಸಲ್ಲಿಸುತ್ತ ಬಂದು ವೃದ್ಧಾಪ್ಯದಲ್ಲಿ ಆರ್ಥಿಕ ದುರ್ದೆಶೆಗೀಡಾಗಿರುವ ಕನ್ನಡ ಕವಿಗಳು, ಸಾಹಿತಿಗಳು ಮತ್ತು ಕಲಾವಿದರಿಗೆ ಧನಸಹಾಯ ನೀಡಬೇಕೆಂಬ ಹಿರಿಯ ದೃಷ್ಟಿಯಿಂದ ರಾಜ್ಯಸರ್ಕಾರವು ಒಂದು ಸಮಿತಿಯನ್ನು ರಚಿಸಿರುವುದು ಸ್ತುತ್ಯಕಾರ್ಯ. ರಾಜ್ಯ ಸರ್ಕಾರವು ಈಗಾಗಲೇ ಕೆಲವರಿಗೆ ಸಹಾಯ ನೀಡುತ್ತಲಿರುವುದನ್ನು ಇಲ್ಲಿ ನೆನೆಯಬಹುದಾಗಿದೆ. ಸರ್ಕಾರವು ರಚಿಸಿರುವ ಸಮಿತಿಯಲ್ಲಿ ಪರಿಷತ್ತಿನಂಥ ಪ್ರಮುಖ ಸಂಸ್ಥೆಗೆ ಸ್ಥಾನವಿಲ್ಲದಿರುವುದು ಸಖೇದಾಶ್ಚರ್ಯದ ಸಂಗತಿಯಾಗಿದೆ. ಕಳೆದ ಐದು ದಶಕಗಳಿಂದಲೂ ಕನ್ನಡ ನಾಡು ನುಡಿಗಳ ಏಳ್ಗೆಗಾಗಿ, ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆಗಳ ಮೇಲ್ಮೆಗಾಗಿ ಅಹರ್ನಿಶಿ ದುಡಿಯುತ್ತ ಬಂದಿರುವ ಸಂಸ್ಥೆಯನ್ನು ಅಲಕ್ಷಿಸುವುದು ನ್ಯಾಯ ಸಮ್ಮತ ಮಾತಾಗಲಾರದು. ಎರಡು ಕೋಟಿ ಕನ್ನಡ ಜನಸಂಪರ್ಕವನ್ನು ಪಡೆದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಭಿಪ್ರಾಯವನ್ನು ಪಡೆಯದೆ ಈ ಸಮಿತಿಯು ಧನಸಹಾಯ ಪಡೆಯಲು ಅರ್ಹರಾದವರ ಆಯ್ಕೆಯನ್ನು ತೃಪ್ತಿಕರವಾಗಿ ಮಾಡಲಾರದೆಂದು ನಮ್ಮ ಮತ. ಇದೇ ಸಂದರ್ಭದಲ್ಲಿ ಇನ್ನೊಂದು ವಿಷಾದನೀಯ ವಿಷಯವನ್ನು ವಿವರಿಸಬೇಕಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಪರಿಷತ್ತಿಗೆ ಸ್ಥಾನವಿಲ್ಲ. ಆಕಾಶವಾಣಿಯ ಸಲಹಾ ಸಮಿತಿಗಳಲ್ಲಿ ಪರಿಷತ್ತಿಗೆ ಪ್ರಾತಿನಿಧ್ಯವಿಲ್ಲ. ಅಲ್ಲಿ ಯಾರು ಬೇಕಾದರೂ ಸದಸ್ಯರಾಗಬಹುದು. ಆದರೆ ಪರಿಷತ್ತಿನ ಪ್ರತಿನಿಧಿ ಮಾತ್ರ ಅಲ್ಲಿಲ್ಲ. ಇದು ಆ ಸ್ಥಾನಗಳಲ್ಲಿರುವ ಅಧಿಕಾರಿಗಳ ಕೈವಾಡದ ಫಲವೋ ಅಥವಾ ಸರ್ಕಾರದ ನೀತಿಯೋ ನಮಗೊಂದೂ ತಿಳಿಯದು. ಇಂದಿನ ಪರಿಷತ್ತಿನ ಅಧಿಕಾರಿಗಳಾಗಲೀ ಅಥವಾ ಕಾರ್ಯ ಸಮಿತಿಯಾಗಲಿ ಶಾಶ್ವತವಲ್ಲ. ಮೂರು ವರ್ಷಕ್ಕೊಮ್ಮೆ ಆಯ್ಕೆ ನಡೆಯುತ್ತದೆ. ಆಗ ಬೇರೆ ಬೇರೆ ಜನ ಬರಲು ಪೂರ್ಣ ಅವಕಾಶವಿದೆ. ಅಧಿಕಾರದಲ್ಲಿರುವ ಜನ ಅಶಾಶ್ವತರು. ಆದರೆ ಪರಿಷತ್ತು ಮಾತ್ರ ಶಾಶ್ವತ–ಸಂಸ್ಥೆ. ಪರಿಷತ್ತಿನ ಪ್ರತಿನಿಧಿಗೆ ನೀಡುವ ಅವಕಾಶ ಪರಿಷತ್ತಿಗೆ ನೀಡುವ ಮನ್ನಣೆ. ಈ ಮೂಲ ವಿಷಯವನ್ನು ಸರ್ಕಾರವೂ ಮತ್ತು ಸರ್ಕಾರದಲ್ಲಿರುವ ಅಧಿಕಾರಿಗಳೂ ಬೇಗ ಗಮನಿಸಿದಷ್ಟೂ ಉಭಯರಿಗೂ ಕ್ಷೇಮ. ಸಾಹಿತ್ಯ ಸಮ್ಮೇಳನಗಳಲ್ಲಿ ಸರ್ಕಾರದ ಇಂದಿನ ಈ ನೀತಿಯನ್ನು ವಿರೋಧಿಸಿ ನಿರ್ಣಯಗಳು ಸ್ವೀಕೃತವಾದರೂ ಅದರ ಪರಿಣಾಮವೇನೂ ಹೊರಬಿದ್ದಿಲ್ಲ. ರಾಜ್ಯ ಸರ್ಕಾರವು ಪರಿಷತ್ತಿಗೆ ಕೆಲವು ಸಮಿತಿಗಳಲ್ಲಿ ಪ್ರಾತಿನಿಧ್ಯ ನೀಡಿದೆ. ಆದರೆ ಸಾಹಿತ್ಯ, ಕಲೆಗಳಿಗೆ ಸಂಬಂಧಿಸಿದ ಎಲ್ಲಾ ಸಮಿತಿ ಮತ್ತು ಉಪಸಮಿತಿಗಳಲ್ಲಿಯೂ ಪರಿಷತ್ತಿಗೆ ಪ್ರಾತಿನಿಧ್ಯ ದೊರೆಯಬೇಕು. ಸರ್ಕಾರವು ಇನ್ನು ಮೇಲಾದರೂ ಈ ಅಂಶವನ್ನು ಗಮನಿಸಿ ಕಾರ್ಯಪ್ರವೃತ್ತವಾಗಲೆಂದು ನಾವು ಹಾರೈಸುತ್ತೇವೆ.

---



ಸಂಪಾದಕರು: ಅನ್ನದಾನಯ್ಯ ಪುರಾಣಿಕ, ಬಿ.ಕಾಮ್., ಎಲ್‌ಎಲ್.ಬಿ. ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. ಮುದ್ರಕರು: ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಬೆಂಗಳೂರು-೧೮.

*Statement about ownership and other particulars about*

# KANNADA NUDI (Kannada)

to be published in the first issue every year after last day of February

*FORM IV*
*( See Rule 8 )*

| | | |
|---|---|---|
| 1. *Place of Publication* | ... | BANGALORE |
| 2. *Periodicity of its Publication* | ... | MONTHLY |
| 3. *Printer's Name* | ... | B. M. SRIKANTIA PRESS (Kannada Sahitya Parishat) |
| *Nationality* | ... | INSTITUTION |
| *Address* | ... | Kannnda Sahitya Parishat, Chamarajapet, Bangalore-18. |
| 4. *Publisher's Name* | ... | Kannada Sahitya Parishat |
| *Nationality* | ... | REGISTERED PUBLIC CULTURAL INSTITUTION |
| *Address* | ... | Chamarajapet, Bangalore-18. |
| 5. *Editor's Name* | ... | Annadanayya Puranik, B.COM., LL.B. |
| *Nationality* | ... | INDIAN |
| *Address* | ... | Hon. Secretary, Kannada Sahitya Parishat, Bangalore-18. |
| 6. *Name & Address of Individuals who own the Newspaper and partners or share-holders holding more than one per-cent of the total capital.* | | KANNADA SAHITYA PARISHAT, BANGALORE |

I, B. Sivamurthy Sastry hereby declare that the particulars given above are true to the best of my knowledge and belief.

B. Sivamurthy Sastry
*President, Kannada Sahitya Parishat.*

7st March 1962
BANGALORE

# ಸಾದರ ಸ್ವೀಕಾರ

* ಮುತ್ತುಸ್ವಾಮಿ ದೀಕ್ಷಿತರ ನವಗ್ರಹ ಕೃತಿಗಳು: ಲೇಖಕರು: ಸಂಗೀತವಿದ್ವಾನ್ ಶ್ರೀ ಎಂ. ಆರ್. ಶಂಕರಮೂರ್ತಿ, ಸೈಜು ೧/೪ ಕ್ರೌನ್, ಪುಟಗಳು ೪೫, ಬೆಲೆ ರೂ. ೧-೫೦ ನ.ಪೈ.

'ಪುಸ್ತಕಮಿತ್ರ': ತ್ರೈಮಾಸಿಕ ಪತ್ರಿಕೆ, ಸಂಪುಟ ೧, ಸಂಚಿಕೆ ೧, ಡಿಸೆಂಬರ್ ೧೯೬೧. ದಕ್ಷಿಣ ಭಾಷಾಸಂಸ್ಥೆ ಪ್ರಕಟಣೆ, ಮದರಾಸು. ಸೈಜು ೧/೮ ಕ್ರೌನ್, ಪುಟಗಳು ೩೬, ಚಂದಾ ಸಂಚಿಕೆಗೆ ೦-೫೦ ನ.ಪೈ., ವಾರ್ಷಿಕ ಚಂದಾ ರೂ. ೨-೦೦.

* ಶಶಿಕಲಾವಿದರು (ರಿಜಿಸ್ಟರ್ಡ್) ಪ್ರಕಾಶಿಕೆ, ಜನವರಿ ೧೯೬೨. ಸೈಜು ೧/೮ ಡೆಮ್ಮಿ, ಪುಟಗಳು ೬೭.

* ಶ್ರೀ ಸಾಧ್ವೀಶಿರೋಮಣಿ ತುರಡಗಿ ತಿಮ್ಮಮ್ಮನವರ ಚರಿತ್ರೆ: ಲೇಖಕರು: ನಾ. ಶ್ರೀ ರಾಜಪುರೋಹಿತ. ಸೈಜು ೧/೮ ಕ್ರೌನ್, ಪುಟಗಳು ೪೦, ಬೆಲೆ ೦-೫೦ ನ.ಪೈ.

* ಆಚಾರ್ಯ ರಾಮಾನುಜರು: ಲೇಖಕರು: ಪ್ರಾ|| ಎಂ. ಯಾಮುನಾಚಾರ್ಯರು, ಎಂ.ಎ., ಪ್ರಕಾಶಕರು ಮತ್ತು ಸಂಪಾದಕರು: ಮಿಂಚಿನಬಳ್ಳಿ, ಧಾರವಾಡ. ಸೈಜು ೧/೮ ಕ್ರೌನ್, ಪುಟಗಳು ೧೧೬, ಬೆಲೆ ರೂ. ೨-೦೦.

* ಸ್ತುತಿವಿದ್ಯಾ: (ಜಿನಶತಕ) ಲೇಖಕರು: ಶ್ರೀ ಸ್ವಾಮಿ ಸಮಂತಭದ್ರ, ಅನುವಾದಕರು: ಶ್ರೀ ಎಂ. ಸಿ. ಪದ್ಮನಾಭ ಶರ್ಮ. ಸೈಜು ೧/೮ ಕ್ರೌನ್, ಪುಟಗಳು ೪೬, ಬೆಲೆ ೦-೪೦ ನ.ಪೈ.

* ಶ್ರೀಪದಾಶೀತಿ: ಲೇಖಕರು: ಶ್ರೀ ವಾಣೀವಲ್ಲಭ ಅಚಣ್ಣ ಕವಿಕೃತ, ಅನುವಾದಕರು: ಶ್ರೀ ಎಂ. ಸಿ. ಪದ್ಮನಾಭ ಶರ್ಮ. ಸೈಜು ೧/೮ ಕ್ರೌನ್, ಪುಟಗಳು ೩೬, ಬೆಲೆ ೦-೩೭ ನ.ಪೈ.

ಶ್ರೀ ಬಸವ ಬೋಧಾಮೃತ: ಸಂಪಾದಕರು: ಹರ್ಡೇಕರ ಮಂಜಪ್ಪ, ಪ್ರಕಾಶಕರು: ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಸೈಜು ೧/೮ ಕ್ರೌನ್, ಪುಟಗಳು ೧೧೧, ಬೆಲೆ ೦-೭೫ ನ.ಪೈ.

"ವೊಗ್ಗೆಯ ಮಾಯಿದೇವ ಪ್ರಭುವಾಣಿ": ಲೇಖಕರು: ಶ್ರೀ ಚೆನ್ನಮಲ್ಲಿಕಾರ್ಜುನ, ಪ್ರಕಾಶಕರು: ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು. ಸೈಜು ೧/೮ ಡೆಮ್ಮಿ, ಪುಟಗಳು ೧೯೬, ಬೆಲೆ ರೂ. ೪-೦೦.

* ಕೈವಲ್ಯ ಪದ್ಧತಿಯೆಂಬ ಗ್ರಂಥದ ಜ್ಞಾನಪ್ರತಿಪಾದನ ಸ್ಥಳ ಮಾತ್ರ: (ಶ್ರೀ ಶಿವಪುತ್ರ ಸ್ವಾಮಿಗಳ ಟೀಕಾತಾತ್ಪರ್ಯ ಸಹಿತ) ಲೇಖಕರು: ಶ್ರೀಮನ್ನಿಜಗುಣಯೋಗಿವರ್ಯರು. ಸೈಜು ೧/೮ ಕ್ರೌನ್, ಪುಟಗಳು ೩೮೫, ಬೆಲೆ ರೂ. ೪-೫೦ ನ.ಪೈ.

* ವೇದಾಂತ ಕುಸುಮಾವಳಿ: ಲೇಖಕರು: ಬ್ರಹ್ಮಶ್ರೀ ಶಂಕರಶಾಸ್ತ್ರಿ, ಸಗರ. ಪ್ರಕಾಶಕರು: ಬ್ರಹ್ಮವಿದ್ಯಾಶ್ರಮ, ಬೆಂಗಳೂರು. ಸೈಜು ೧/೮ ಫುಲ್‌ಸ್ಕೇಪ್, ಪುಟಗಳು ೮೬, ಬೆಲೆ ೦-೩೭ ನ.ಪೈ.

* ಕಬೀರನಾಥ ಸ್ವಾಮಿಯವರ ಪುಣ್ಯಾರಾಧನ ಸಪ್ತಾಹ ಸಂದೇಶ: ಲೇಖಕರು: ಬ್ರಂ|| ಶ್ರೀ ಶಿವಪುತ್ರಸ್ವಾಮಿ, ಹುಬ್ಬಳ್ಳಿ. ಸೈಜು ೧/೧೬, ಕ್ರೌನ್, ಪುಟಗಳು ೧೫.

* ಅಭಯವಾಣಿ: ಲೇಖಕರು: ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಚ. ನಿ., ಪ್ರಕಾಶಕರು: ಭ್ರಮರಾಂಬಾ ಬಳಗ, ಅಕ್ಕಿಪೇಟೆ, ಬೆಂಗಳೂರು-೨. ಸೈಜು ೧/೮ ಡೆಮ್ಮಿ, ಪುಟಗಳು ೧೭೮, ಬೆಲೆ ರೂ. ೧-೦೦.

* ಸಂಘಟಿತ ಪ್ರಜಾಪ್ರಭುತ್ವ: ಲೇಖಕರು: ಶ್ರೀ ಬಾಪು ಶಿರಹಟ್ಟಿ, ಬಿ.ಎ. ಸೈಜು ೧/೮ ಕ್ರೌನ್, ಪುಟಗಳು ೧೮, ಬೆಲೆ ೦-೩೫ ನ.ಪೈ.

ಕನ್ನಡ ಸಾಹಿತ್ಯ ಪರಿಷತ್ತಿನ ಗೌ|| ಕಾರ್ಯದರ್ಶಿಗಳಾದ ಡಾ|| ಕೆ. ಎಂ. ಕೃಷ್ಣರಾಯರಿಂದ ನಲವತ್ತೇಳು ಕನ್ನಡ ಗ್ರಂಥಗಳು ಪರಿಷತ್ತಿನ ಸರಸ್ವತೀ ಭಂಡಾರಕ್ಕೆ ಉಚಿತವಾಗಿ ಕೊಡಲ್ಪಟ್ಟವೆ. ಪರಿಷತ್ತು ಕೃತಜ್ಞತೆಯಿಂದ ಇವನ್ನು ಸ್ವೀಕರಿಸಿದೆ.

ಪತ್ರಿಕೋದ್ಯೋಗಿಗಳಾದ ಶ್ರೀ ಕೆ. ಜೀವಣ್ಣರಾಯರಿಂದ ಪರಿಷತ್ತಿನ ಸರಸ್ವತೀ ಭಂಡಾರಕ್ಕೆ ಹನ್ನೆರಡು ಇಂಗ್ಲೀಷು ಗ್ರಂಥಗಳು ಉಚಿತವಾಗಿ ಕೊಡಲ್ಪಟ್ಟವೆ. ಪರಿಷತ್ತು ಇವನ್ನು ಕೃತಜ್ಞತೆಯಿಂದ ಸ್ವೀಕರಿಸಿದೆ.

—ಸಂ.

* ಈ ಗುರ್ತಿನ ಪುಸ್ತಕಗಳ ವಿಮರ್ಶೆ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗುತ್ತದೆ.

Reg. No. B. G. 4—March 1962

Licensed to Post without pre-payment. License No 1

# ಭಾರತದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ

## ಮೈಸೂರಿನ ಜನದ ಪ್ರೀತಿಗೆ ಪಾತ್ರವಾದ

**ಕಾಡೆಮ್ಮೆ ಗುರುತಿನ**





**ವಿದ್ಯಾರ್ಥಿಗಳಿಗೆ, ಲೇಖಕರಿಗೆ, ಪ್ರಕಾಶಕರಿಗೆ, ಮಹಾಜನರಿಗೆ**

**ಎಲ್ಲ ರೀತಿಯ ವ್ಯವಹಾರದಲ್ಲಿ**

**ಬೇಕಾಗುವ**

# ಮೈಸೂರು ಕಾಗದ

## ಮೈಸೂರು ಕಾಗದ ಕಾರ್ಖಾನೆ, ಲಿಮಿಟೆಡ್

**ಭದ್ರಾವತಿ.** **ಬೆಂಗಳೂರು.**

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕ. ಸಾ. ಪ., ಚಾಮರಾಜಪೇಟೆ, ಬೆಂಗಳೂರು-೧೮.